

# ಅರ್ಥ–4

## ಮೇ, 2020


ಆತ್ಮೀಯರೇ,

ಕೋವಿಡ್–19 ಬಿಕ್ಕಟ್ಟು ಶುರು ಆಗಿದ್ದು 'ಚೀನಾ ಸಮಸ್ಯೆ' ಅಂತ. ಅಮೇಲೆ ಅದು 'ಇಟಲಿಯ ಸಮಸ್ಯೆ' ಅಂತ ಆಯಿತು. ಈಗ ಅದು 'ಎಲ್ಲರ ಸಮಸ್ಯೆ' ಆಗಿದೆ. ಎಲ್ಲೋ ಕೆಲವು ದೇಶಗಳು ಬಿಟ್ಟರೆ ಹೆಚ್ಚಿನ ಸರ್ಕಾರಗಳು ಪ್ರಾರಂಭದಲ್ಲಿ ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಪರಿಸ್ಥಿತಿ ತೀವ್ರವಾಗುತ್ತಿದ್ದಂತೆ 'ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು', 'ಲಾಕ್ ಡೌನ್' ಇತ್ಯಾದಿ ತೀವ್ರ ಕ್ರಮಗಳನ್ನು ತೆಗೆದುಕೊಳ್ಳುವುದಇಜಿಇಜ ಠಿ್ರರಂಭಿಸಿದವು. ಈ ಕ್ರಮಗಳಿಂದ ಆರ್ಥಿಕ ಸಮಸ್ಯೆಗಳು ತೀವ್ರವಾಗುವುದು ಸ್ವಾಭಾವಿಕ. ನಿರುದ್ಯೋಗ, ಬಡತನ, ಪೌಷ್ಟಿಕಾಂಶದ ಕೊರತೆ, ಹೀಗೆ ಬೆಳೆಯುತ್ತಾ ಮತ್ತೆ ಆರೋಗ್ಯದ ಸಮಸ್ಯೆಯನ್ನು ತೀವ್ರ ಮಾಡುವುದಕ್ಕೆ ಬಿಡಬಾರದು. ಇವೆಲ್ಲಾ ಜಾಗತಿಕ ಸಮಸ್ಯೆಗಳು. ಪರಿಹಾರವನ್ನು ಜಾಗತಿಕ ಮಟ್ಟದಲ್ಲಿ, ಹಾಗೂ ಪರಸ್ಪರ ಸಹಕಾರದಿಂದ ಕಂಡುಕೊಳ್ಳಬೇಕು. ಪಕ್ಕದ ಮನೆಯವರು, ಪಕ್ಕದ ಕೇರಿಯವರು, ಪಕ್ಕದ ರಾಜ್ಯದವರು, ಪಕ್ಕದ ದೇಶದವರು ನೆಮ್ಮದಿಯಿಂದ ಇದ್ದರೆ ಮಾತ್ರ ನಾನೂ ನೆಮ್ಮದಿಯಿಂದ ಇರಲು ಸಾಧ್ಯ. ನನಗೂ ಸುರಕ್ಷೆ ಸಾಧ್ಯ ಅಂತ ಬಿಕ್ಕಟ್ಟುಗಳು ಸಾರಿ ಸಾರಿ ಹೇಳಿವೆ. ಅವರಿವರನ್ನು ದೂಷಿಸುತ್ತಾ, ಕಾರಣ ಮಾಡುತ್ತಾ, ಇನ್ನೊಂದಿಷ್ಟು ಸಾಮಾಜಿಕ ದ್ವೇಷವನ್ನು ಹೆಚ್ಚು ಮಾಡುತ್ತಾ ಹೋಗುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬದಲಾಗಿ ಅವು ಸಮಸ್ಯೆಯನ್ನು ತೀವ್ರಗೊಳಿಸುತ್ತದೆ. ಪರಿಹಾರ ತೊಡಕಾಗುತ್ತದೆ ಅನ್ನುವುದನ್ನು ನಮಗೆ ಚರಿತ್ರೆ ಹಲವು ಸಂದರ್ಭದಲ್ಲಿ ತಿಳಿಸಿದೆ.

ಈ ಕೊರೋನಾ ಬಿಕ್ಕಟ್ಟಿನಿಂದ ಆಗಿರಬಹುದಾದ ಆರ್ಥಿಕ ಹಾನಿಯ ಪ್ರಮಾಣ ಎಷ್ಟು ಎಂಬುದನ್ನು ನಿಖರವಾಗಿ ಹೇಳುವುದಕ್ಕೆ ಕಷ್ಟವಾಗಬಹುದು. ಆದರೆ ಅಪಾರ ಪ್ರಮಾಣದ ಹಾನಿಯಾಗಿರುವುದಂತೂ ನಿಜ. ಸಮಸ್ಯೆ ಮತ್ತಷ್ಟು ಉಲ್ಬಣಿಸುವುದಕ್ಕೆ ಬಿಡಬಾರದು. ಸಾಧ್ಯವಾದದ್ದೆಲ್ಲವನ್ನೂ ಮಾಡಬೇಕು. ಆದಷ್ಟು ಬೇಗ ಮಾಡಬೇಕು. ಉದಾರವಾಗಿ ಮಾಡಬೇಕು.

ಲಾಕ್ ಡೌನ್ ಸಂಬಂಧಿಸಿದಂತೆ ಸರ್ಕಾರದ ಚಿಂತನೆ ತುಂಬಾ ಸರಳ. ಸೋಂಕು ತೀವ್ರವಾಗುವುದಕ್ಕೆ ಬಿಟ್ಟರೆ ಸೋಂಕಿನ ಪ್ರಮಾಣ ಮಿತಿಮೀರುತ್ತದೆ. ಇರುವ ಆರೋಗ್ಯ ವ್ಯವಸ್ಥೆಯಲ್ಲಿ ಅದನ್ನು ನಿಭಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಪರಿಸ್ಥಿತಿ ವುಹಾನಿನಲ್ಲಿ ಉಂಟಾಗಿತ್ತು, ಇಟಲಿಯಲ್ಲಿ ಆಗಿತ್ತು. ಸೂಕ್ತ ಚಿಕಿತ್ಸೆ ಸಾಧ್ಯವಾಗುವುದಿಲ್ಲ. ಸಾವಿನ ಪ್ರಮಾಣ ತುಂಬಾ ಹೆಚ್ಚುತ್ತದೆ. ಅದಕ್ಕೆ ಅವಕಾಶ ಕೊಡದೇ ಸೋಂಕನ್ನು ನಿಯಂತ್ರಿಸಿದರೆ ಅದು ಹರಡುವ ವೇಗ ಕಡಿಮೆಯಾಗುತ್ತದೆ. ಸೋಂಕಿತರ ಸಂಖ್ಯೆ ಕಡಿಮೆಯಾಗುತ್ತದೆ. ಅವರನ್ನು ಲಭ್ಯವಿರುವ ಆರೋಗ್ಯ ವ್ಯವಸ್ಥೆಯಲ್ಲಿ ನಿಭಾಯಿಸಬಹುದು.

ಈ ಉದ್ದೇಶದಿಂದ ಸೋಂಕನ್ನು ನಿಯಂತ್ರಿಸಿ ಕೊರೋನಾದ ಗ್ರಾಫನ್ನು ಸಪಾಟು ಮಾಡಲಿಕ್ಕೆ ಹೋದರೆ ಆರ್ಥಿಕ ಚಟುವಟಿಕೆ ಕುಸಿಯುತ್ತದೆ.




ಅದು ಅನಿವಾರ್ಯ. ಕೆಲಸಗಾರರು ಕೆಲಸದಿಂದ ಆಚೆ ಉಳಿಯುತ್ತಾರೆ, ಬಳಕೆದಾರರಿಗೆ ಬಳಸುವುದಕ್ಕೆ ಸಾಧ್ಯವಾಗುವುದಿಲ್ಲ. ಉತ್ಪಾದನೆ ಸ್ಥಗಿತಗೊಳ್ಳುತ್ತದೆ. ಆರ್ಥಿಕ ಚಟುವಟಿಕೆ ಕುಂಠಿತವಾಗುತ್ತದೆ. ನಕ್ಷೆಯ ಮೇಲುಭಾಗ ಆರೋಗ್ಯದ ಸ್ಥಿತಿಯನ್ನು ತಿಳಿಸುತ್ತದೆ. ಕೆಳಗಿನದ್ದು ಆರ್ಥಿಕತೆಯ ಸ್ಥಿತಿಯನ್ನು ತಿಳಿಸುತ್ತದೆ. ಸೋಂಕನ್ನು ನಿಯಂತ್ರಿಸುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳದೇ ಹೋದರೆ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ಮೇಲ್ಭಾಗದ ಕೆಂಪುರೇಖೆ ಸೂಚಿಸುತ್ತದೆ. ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಇತ್ಯಾದಿ ಆರೋಗ್ಯಕ್ಕೆ ಸಂಬಂಧಿಸಿದ ಕ್ರಮಗಳನ್ನು ತೆಗೆದುಕೊಂಡರೆ ಪರಿಸ್ಥಿತಿ ಹೇಗಿರುತ್ತೆ ಅನ್ನುವುದನ್ನು ನೀಲಿ ರೇಖೆ ಸೂಚಿಸುತ್ತದೆ. ನೀಲಿ ರೇಖೆ ಕೆಂಪು ರೇಖೆಯ ಹೆಚ್ಚು ಚಪ್ಪಟೆಯಾದ ರೂಪ. (Richard Baldwin and Beatrice Weder di Mauro Graduate Institute, Geneva and CEPR)

ನಕ್ಷೆಯ ಕೆಳಗಿನ ಭಾಗ ಆರ್ಥಿಕ ಚಟುವಟಿಕೆಗೆ ಸಂಬಂಧಿಸಿದ್ದು. ಕೆಂಪು ರೇಖೆ ಯಾವುದೇ ನಿಯಂತ್ರಣದ ಕ್ರಮ ತೆಗೆದುಕೊಳ್ಳದೇ ಇದ್ದಾಗ ಆಗುವ ಆರ್ಥಿಕ ನಷ್ಟವನ್ನು ಸೂಚಿಸುತ್ತದೆ. ನಿಯಂತ್ರಣ ಕ್ರಮ ತೆಗೆದುಕೊಂಡಾಗ ಆಗುವ ಆರ್ಥಿಕ ನಷ್ಟವನ್ನು ನೀಲಿರೇಖೆ ಸೂಚಿಸುತ್ತದೆ. ಕೆಳಭಾಗದಲ್ಲಿ ನೀಲಿಬಣ್ಣದ ರೇಖೆ ಹೆಚ್ಚು ತೀವ್ರವಾಗಿದೆ. ಹಾಗಾಗಿ ಮೇಲು ಭಾಗಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಅಂದರೆ ಸೋಂಕಿನ ನಿಯಂತ್ರಣಕ್ಕೆ ಕ್ರಮ ತೆಗೆದುಕೊಂಡರೆ ಸೋಂಕಿನ ರೇಖೆ ಸಪಾಟಾಗುತ್ತದೆ. ಆದರೆ ಅದರಿಂದ ಆರ್ಥಿಕ ಹಿಂಜರಿಕೆಯ ರೇಖೆ ತೀವ್ರವಾಗುತ್ತದೆ.

ಆರ್ಥಿಕ ಹಿಂಜರಿಕೆಯ ಪರಿಣಾಮಗಳು ದುರ್ಬಲರ ಮೇಲೆ ತೀವ್ರವಾಗಿ ಆಗುತ್ತವೆ. ಪ್ರಾರಂಭದಲ್ಲಿ ಭಾರತದಲ್ಲಿ ಆರೋಗ್ಯ ಅನ್ನೋದು ರಾಜ್ಯದ ವಿಷಯ. ರಾಜ್ಯಗಳು ತಮಗೆ ಸಾಧ್ಯವಾದ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸುತ್ತಾ ಹೋದವು. ಕೇಂದ್ರ ಲಾಕ್‌ಡೌನ್ ಘೋಷಿಸುವವರೆಗೆ ಇದರಲ್ಲಿ ಸಕ್ರಿಯವಾಗಿರಲಿಲ್ಲ. ಅದು ಹಣ ತೊಡಗಿಸಿರುವುದು ಕೇವಲ ಜಿಡಿಪಿ 0.8ರಷ್ಟು ಮಾತ್ರ. ಅದು ಬಹಳ ಬಹಳ ಕಡಿಮೆ. ಯಾವುದೇ ದೇಶದ ಸಂಖ್ಯೆಗೂ ಅದು ತುಂಬಾ ಕಡಿಮೆ. ಶೇಕಡ 10ರಿಂದ 25.30ರವರೆಗೆ ಹಲವು ದೇಶಗಳು ಖರ್ಚು ಮಾಡುತ್ತಿರುವಾಗ ನಮ್ಮ ಸರ್ಕಾರ ಅಷ್ಟು ಕಡಿಮೆ ಖರ್ಚು ಮಾಡಿ ಹಣವೇ ಇಲ್ಲದೆ ರಾಜ್ಯಗಳಿಗೆ ನಿಭಾಯಿಸಲು ಬಿಟ್ಟಿದೆ. ಅಷ್ಟೇ ಅಲ್ಲ ಕೇಂದ್ರದಲ್ಲಿರುವ ಧಾನ್ಯಗಳನ್ನು ಹಣ ಕೊಟ್ಟು ಕೊಳ್ಳಲು ರಾಜ್ಯಗಳಿಗೆ ತಿಳಿಸಿವೆ.

ಕೇವಲ ಹಣಕಾಸು ನೀತಿಯಿಂದ ಈ ಬಿಕ್ಕಟ್ಟು ಪರಿಹಾರವಾಗುವುದಿಲ್ಲ ಅನ್ನುವುದೂ ಸ್ಪಷ್ಟ. ಕೇಂದ್ರ ಬ್ಯಾಂಕ್ ಎಷ್ಟೇ ಸಕ್ರಿಯವಾಗಿ ಕೆಲಸ ಮಾಡಿದರೂ, ವಿತ್ತೀಯ ಕ್ರಮಗಳನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳದೇ ಹೋದರೆ ಪರಿಸ್ಥಿತಿ ಗಂಭೀರವಾಗುವ ಸಾಧ್ಯತೆಗಳೇ ಹೆಚ್ಚು. ವಿತ್ತೀಯ ಕೊರತೆ ಇತ್ಯಾದಿ ಸಾಂಪ್ರದಾಯಿಕ ಮಿತಿಗಳನ್ನು ಮೀರಿ ಸರ್ಕಾರ ಖರ್ಚು ಮಾಡಬೇಕು. ಆರ್ಥಿಕತೆಗೆ ಉತ್ತೇಜನ ನೀಡಬೇಕು. 'ಇದು ಎಚ್ಚರಿಕೆಗಿಂತ, ಧಾರಾಳವಾಗಿರಬೇಕಾದ ಸಮಯ' ಅಂತ ಇದೇ ಕಾರಣಕ್ಕೆ ಹೇಳುವುದು.

ಬಹುಶಃ ಈ ಪರಿಸ್ಥಿತಿಯಲ್ಲಿ ಆರ್ಥಿಕತೆಗೆ ತಗಲಿರುವ ಸೋಂಕು ನಿವಾರಣೆಯಾಗುವುದು ಕಷ್ಟವಾಗಬಹುದು. ಇದನ್ನು ಪ್ರತಿಯೊಬ್ಬ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಸೋಂಕಿನ ವಿಷಯಕ್ಕೆ ಪರಿಣತರನ್ನು ಒಪ್ಪಿಕೊಂಡಿರುವ ನಾವು ಆರ್ಥಿಕತೆಗೆ ಸಂಬಂಧಿಸಿದಂತೆ ಪರಿಣತರನ್ನು ಕಡೆಗಣಿಸುತ್ತಿರುವುದು ಸೂಕ್ತವಲ್ಲ.

ಅರ್ಥದ ಈ ಸಂಚಿಕೆಯಲ್ಲಿ ಹಲವು ಪ್ರಮುಖ ಅರ್ಥಶಾಸ್ತ್ರಜ್ಞರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ಅರ್ಥವನ್ನು ಕುರಿತಂತೆ ನಿಮ್ಮ ಅಭಿಪ್ರಾಯ ಅನುಕೂಲವಾಗುತ್ತದೆ

ವೇಣುಗೋಪಾಲ್, ಶೈಲಜ.

# ಒಳ ಪುಟಗಳಲ್ಲಿ

ಅರ್ಥ–4, ಮೇ, 2020


4 ಲಕ್ಷಾಂತರ ಜನ ನಿರ್ಗತಿಕರಾಗಿ ಬಿಡಬಹುದು, ಅವರನ್ನು ರಕ್ಷಿಸೋಣ – **ಅಮರ್ತ್ಯ ಸೇನ್, ರಘುರಾಂ ರಾಜನ್, ಅಭಿಜಿತ್ ಬ್ಯಾನರ್ಜಿ**

6. ಆರ್ಥಿಕತೆಯ ಪುನಃಶ್ಚೇತನಕ್ಕೆ ಒಂದು ನೀಲಿ ನಕ್ಷೆ
**ಪಿ.ಚಿದಂಬರಂ ಮತ್ತು ಪ್ರವೀಣ್ ಚಕ್ರವರ್ತಿ**

9 ನಮ್ಮ ಆರ್ಥಿಕತೆ ಕೊರೋನಾ ವೈರಾಣುವಿನಿಂದ ಸತ್ತು ಹೋಗಬಹುದೆ? – **ಪಾಲ್ ರೋಮೆರ್, ಅಲೆನ್ ಎಂ ಗಾರ್ಬರ್**

12 ಶ್ರೀಮಂತರನ್ನು ಎಷ್ಟು ಕೇಳಬೇಕು?
**ಸುಗತ ಶ್ರೀನಿವಾಸರಾಜು**

14 ಇದು ಬೇರೆ ರೀತಿಯ ಆಪತ್ತು
**ರಾಬರ್ಟ್ ಶಿಲ್ಲರ್**

16. ಬಿಕ್ಕಟ್ಟು ಅಂತರರಾಷ್ಟ್ರೀಯವಾಗಲಿ
**ಜೋಸೆಫ್ ಈ ಸ್ಟಿಗ್ಲಿಟ್ಜ್**

19 ಎಚ್ಚರದ ಹೆಜ್ಜೆಗಳನ್ನು ಇಡೋಣ
**ಕೌಶಿಕ್ ಬಸು**

21 ಪಿಡುಗಿನ ರೇಖೆಯನ್ನು ಹಾಗೂ ಆರ್ಥಿಕ ಹಿನ್ನಡೆಯ ರೇಖೆಯನ್ನು ಸಪಾಟು ಮಾಡೋಣ
**ಪಿಯೆರೆ ಒಲಿವಿಯರ್ ಗೊರಿಂಚಸ್**

26 ಕೋವಿಡ್ ಸೋಂಕಿತರು ನಿಜವಾಗಿ ಎಷ್ಟು ಜನ?
**ಆರ್ ರಾಮಚಂದ್ರನ್**

29 ಈ ಹೆಣ್ಣು ಮಕ್ಕಳು ದೇಶಕ್ಕಾಗಿ ವೆಂಟಿಲೇಟರ್ ಮಾಡಲು ಹೊರಟಿದ್ದಾರೆ.

31 ಮೂರು ಆಸ್ಪತ್ರೆ ಅಲೆದರು. ಕೊನೆಗೆ ಬೆಡ್ ಸಿಕ್ಕಿತ್ತು. ಆದರೆ ತುಂಬಾ ತಡವಾಗಿತ್ತು

34 ಕೋವಿಡ್–19: ಅಭಿವೃದ್ಧಿಶೀಲ ದೇಶಗಳು ಅಮೇರಿಕದಿಂದ ಏನನ್ನು ಕಲಿಯಬಾರದು – ಲವ್ ಪುರಿ


36 ಎಲ್ಲವನ್ನು ಮಾರುಕಟ್ಟೆಗೆ ಒಪ್ಪಿಸುವ ಸಮಯ ಇದಲ್ಲ
ಜಾಮಿ ಮಾರ್ಟಿನ್

38 ಅಮೇರಿಕೆಯ ಕಚ್ಚಾ ತೈಲದ ಬೆಲೆಯಲ್ಲಿ ಚಾರಿತ್ರಿಕ ಕುಸಿತ
ವೇಣುಗೋಪಾಲ್ ಟಿ.ಎಸ್

40 ನಾವು ನಿಜವಾಗಿ ಅಂದುಕೊಂಡಷ್ಟು ಸಂಭಾವಿತರಾ?
ವೇಣುಗೋಪಾಲ್ ಟಿ ಎಸ್
















# ಲಕ್ಷಾಂತರ ಜನ ನಿರ್ಗತಿಕರಾಗಿ ಬಿಡಬಹುದು, ಅವರನ್ನು ರಕ್ಷಿಸೋಣ

## ಅಮರ್ತ್ಯ ಸೇನ್, ರಘುರಾಂ ರಾಜನ್, ಅಭಿಜಿತ್ ಬ್ಯಾನರ್ಜಿ

ಏಪ್ರಿಲ್ 17, 2020, ಇಂಡಿಯನ್ ಎಕ್ಸ್‌ಪ್ರೆಸ್

ಕಷ್ಟದಲ್ಲಿರುವವರಿಗೆ ದೊಡ್ಡ ಪ್ರಮಾಣದಲ್ಲಿ ಹಣ ಅಥವಾ ಆಹಾರವನ್ನು ವರ್ಗಾಯಿಸುವಾಗ ನಾವು ಅನುಸರಿಸುವ ಕ್ರಮದಲ್ಲಿ ಏನಾದರೂ ತಪ್ಪುಗಳಾಗಿಬಿಟ್ಟರೆ ಹಣ, ಆಹಾರ ಶ್ರೀಮಂತರ ಕೈಗೆ ಹೋಗಿಬಿಡಬಹುದು ಅಂತ ತುಂಬಾ ತಲೆಕೆಡಿಕೊಳ್ಳುತ್ತಿದ್ದೇವೆ. ತೆರಿಗೆದಾರರ ಹಣದಲ್ಲಿ ಮಧ್ಯವರ್ತಿಗಳು ಶ್ರೀಮಂತರಾಗಿಬಿಡಬಹುದೆಂದು ಚಿಂತಿತರಾಗಿಬಿಟ್ಟಿದ್ದೇವೆ. ಸರ್ಕಾರಗಳು ಶ್ರೀಮಂತರಿಗಾಗಿ ಹೋಟೆಲ್ಲುಗಳನ್ನು ಮತ್ತು ಐಷರಾಮಿ ಜಲಯಾನಗಳನ್ನು ನಡೆಸುವುದರಲ್ಲಿ ತಪ್ಪೇನೂ ಇಲ್ಲ ಅಂತ ಭಾವಿಸುತ್ತಿದ್ದವರು ಅಂತಹ ಆಶಾವಾದದಿಂದ ಸ್ವಲ್ಪ ಬೇರೆ ಕಡೆಗೆ ಗಮನಹರಿಸಿರುವುದು ಒಳ್ಳೆಯ ಬದಲಾವಣೆಯೇ. ನಾವಿಂದು ಕೊರೋನಾ ಮಹಾಮಾರಿ ಹಾಗೂ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಡುವೆ ಇದ್ದೇವೆ. ದೇಶ ಲಾಕ್‌ಡೌನಿನಲ್ಲಿದೆ. ಜನರ ಜೀವ ಹಾಗೂ ಜೀವನ ಎರಡೂ ಆತಂಕದಲ್ಲಿವೆ. ಅಂತಹ ಸಮಯದಲ್ಲಿ ಸಂಪನ್ಮೂಲಗಳು ಅವಶ್ಯಕತೆ ಇಲ್ಲದವರಿಗೆ ತಲುಪಿಬಿಟ್ಟರೆ ಅನ್ನುವುದು ಮುಖ್ಯ ವಿಷಯ ಆಗಬಾರದು. ಲಾಕ್‌ಡೌನ್ ಇನ್ನೂ ಹಲವು ದಿನ ಮುಂದುವರಿಯುತ್ತದೆ ಅನ್ನುವುದು ಸ್ಪಷ್ಟ. ಅದು ಸಂಪೂರ್ಣ ಲಾಕ್ ಡೌನ್ ಇರಬಹುದು ಅಥವಾ ಸ್ಥಳೀಯ ಪರಿಸ್ಥಿತಿಗೆ ತಕ್ಕಂತೆ ಮಾರ್ಪಾಡು ಮಾಡಿಕೊಂಡ ಲಾಕ್‌ಡೌನ್ ಇರಬಹುದು.

ಸಧ್ಯದ ನಮ್ಮ ದೊಡ್ಡ ಚಿಂತೆ ಅಂದರೆ, ಜೀವನೋಪಾಯವನ್ನೇ ಕಳೆದುಕೊಂಡು ಲಕ್ಷಾಂತರ ಜನರು ಕಡು ದಾರಿದ್ರ್ಯದ ಸ್ಥಿತಿಗೆ ತಲುಪಿದ್ದಾರೆ. ಜೊತೆಗೆ ಮಾಮೂಲಿ ಪೂರೈಕೆ ವ್ಯವಸ್ಥೆಯೂ ಅಸ್ತವ್ಯಸ್ತಗೊಂಡು ಹೊಟ್ಟೆಗಿಲ್ಲದ ಸ್ಥಿತಿ ತಲುಪುತ್ತಾರೆ. ಇದು ನಮ್ಮ ಮುಂದಿರುವ ದೊಡ್ಡ ದುರಂತ. ಇದರಿಂದ ಜನ ಲಾಕ್‌ಡೌನ್ ಕಾನೂನನ್ನು ಉಲ್ಲಂಘಿಸುವ ಪ್ರಯತ್ನ ಮಾಡಬಹುದು. ಇದನ್ನು ಈಗಾಗಲೇ ನೋಡುತ್ತಿದ್ದೇವೆ. ಮೊದಲೇ ಹೊಟ್ಟೆಗಿಲ್ಲ, ಹಸಿದಿದ್ದಾರೆ. ಅವರಿಗೆ ಕಳೆದುಕೊಳ್ಳುವುದಕ್ಕೆ ಇನ್ನೇನಿದೆ? ಸಮಾಜಕ್ಕೆ ಅವರ ಬಗ್ಗೆ ಕಳಕಳಿ ಇದೆ. ಮತ್ತು ಕನಿಷ್ಟ ಅವರ ಹಿತವನ್ನು ಕಾಪಾಡುವ ಕಾಳಜಿ ಸಮಾಜಕ್ಕಿದೆ ಅನ್ನುವುದನ್ನು ಮನದಟ್ಟು ಮಾಡಿಕೊಡುವುಕ್ಕೆ ಸಾಧ್ಯವಾದದ್ದನ್ನೆಲ್ಲಾ ಮಾಡಬೇಕು. ಅದನ್ನು ತಕ್ಷಣ ಮಾಡಬೇಕು. ಅದಕ್ಕೆ ಬೇಕಾದ ಸಂಪನ್ಮೂಲ ನಮ್ಮಲ್ಲಿದೆ. ಮಾರ್ಚ್ 2020ರಲ್ಲಿ ಭಾರತೀಯ ಆಹಾರ ನಿಗಮದಲ್ಲಿ 77 ಮಿಲಿಯನ್ ಟನ್ನುಗಳಷ್ಟು ಆಹಾರದ ದಾಸ್ತಾನು ಇತ್ತು. ಅದು ನಿಯಮದ ಪ್ರಕಾರ ಇಟ್ಟುಕೊಳ್ಳಬೇಕಾದ ಮಿತಿಗಿಂತ ಮೂರು ಪಟ್ಟು ಹೆಚ್ಚು. ಮುಂದಿನ ಕೆಲವು ವಾರಗಳಲ್ಲಿ ಇದು ಇನ್ನೂ ಹೆಚ್ಚುತ್ತದೆ. ವಸಂತದ ಬೆಳೆಗಳೂ ಬಂದು ಸೇರಿಕೊಳ್ಳುತ್ತದೆ. ಲಾಕ್‌ಡೌನ್ ಇಂದ ಕೃಷಿಮಾರುಕಟ್ಟೆಗೆ ಹೊಡೆತ ಬೀಳುತ್ತದೆ ಎನ್ನುವ ಕಾರಣದಿಂದ ರೈತರಿಂದ ದಾಸ್ತಾನನ್ನು ಕೊಳ್ಳುವುದರಲ್ಲಿ ಸರ್ಕಾರವು ಮೊದಲಿಗಿಂತ ಸಕ್ರಿಯವಾಗಿದೆ. ಇಂತಹ ರಾಷ್ಟ್ರೀಯ ಬಿಕ್ಕಟ್ಟಿನ ಕಾಲದಲ್ಲಿ ಈಗಿರುವ ದಾಸ್ತಾನಿನಿಂದ ಒಂದಷ್ಟನ್ನು ಹಂಚುವುದು ನಿಜವಗಿಯೂ ಅರ್ಥಪೂರ್ಣ. ವಿವೇಕವುಳ್ಳ ಯಾವುದೇ ಸಾರ್ವಜನಿಕ ಲೆಕ್ಕಾಚಾರ ವ್ಯವಸ್ಥೆಯು ಇದನ್ನು ತುಂಬಾ ದುಬಾರಿ ಎಂದು ಹೇಳಬಾರದು.

ಸರ್ಕಾರವು ಈಗಾಗಲೇ ದಾಸ್ತಾನಿನಲ್ಲಿರುವ ಧಾನ್ಯಗಳನ್ನು ಬಳಸುವ ಇಚ್ಛೆಯನ್ನು ವ್ಯಕ್ತಪಡಿಸಿದೆ. ಮತ್ತು ಈಗಾಗಲೇ ಪ್ರತಿ ವ್ಯಕ್ತಿಗೆ ನೀಡುತ್ತಿರುವ ಪಡಿತರದ ಜೊತೆಗೆ ಮುಂದಿನ ಮೂರು ತಿಂಗಳು ಹೆಚ್ಚುವರಿಯಾಗಿ ಐದು ಕೆಜಿ ಪಡಿತರವನ್ನು ನೀಡ:ಲು ಮುಂದಾಗಿದೆ. ಆದರೆ ಮೂರು ತಿಂಗಳು ಸಾಲದೇ ಇರಬಹುದು. ಇನ್ನೂ ಹೆಚ್ಚು ಕಾಲ ನೀಡಬೇಕಾಗಬಹುದು. ಲಾಕ್‌ಡೌನ್ ಬೇಗ ಮುಗಿದರೂ ಆರ್ಥಿಕ ವ್ಯವಸ್ಥೆ ಮತ್ತೆ ಪ್ರಾರಂಭವಾಗುವುದಕ್ಕೆ ಸಮಯ ಬೇಕಾಗುತ್ತದೆ. ಅದಕ್ಕಿಂತಲೂ ಮುಖ್ಯವಾಗಿ ಒಂದಲ್ಲ ಒಂದು ಕಾರಣಕ್ಕೆ ಪಡಿತರ ವ್ಯವಸ್ಥೆಯ ಅಧಿಕೃತ ಪಟ್ಟಿಯಲ್ಲಿ ಲಕ್ಷಾಂತರ ಜನ ಬಡವರ ಹೆಸರು ಸೇರ್ಪಡೆಯಾಗಿಲ್ಲ ( ಹಾಗೆ ಸೇರ್ಪಡೆಯಾಗುವುದಕ್ಕೆ ಬೇಕಾದ ಗುರುತು ಚೀಟಿಗಳನ್ನು ಕೊಡುವುದು ಕಷ್ಟದ ಕೆಲಸ. ಅದು ಸಧ್ಯಕ್ಕೆ ಪರಿಹಾರ ಆಗುವ ವಿಷಯವಲ್ಲ). ಈ ಹೆಚ್ಚುವರಿ ಪಡಿತರ ಈಗಾಗಲೇ ಪಡಿತರ ವ್ಯವಸ್ಥೆಯ ಅಧಿಕೃತ ಪಟ್ಟಿಯಲ್ಲಿ ದಾಖಲಾಗಿರುವವರಿಗೆ ಮಾತ್ರ ಸಿಗುತ್ತದೆ. ಜಾರ್ಖಂಡ್‌ನಂತಹ ಸಣ್ಣ ರಾಜ್ಯದಲ್ಲೇ ಪಡಿತರ ಚೀಟಿಗಾಗಿ ಸಲ್ಲಿಸಿರುವ 7 ಲಕ್ಷ ಅರ್ಜಿಗಳು ಇನ್ನೂ ಹಾಗೇ ಉಳಿದಿವೆಯಂತೆ. ಅದರಲ್ಲಿ ಬಹುಪಾಲು ಅರ್ಜಿಗಳು ನ್ಯಾಯಯುತವಾದವೆ (ಉದಾಹರಣೆಗೆ ವೃದ್ಧಾಪ್ಯ ವೇತನಕ್ಕಾಗಿ ಸಲ್ಲಿಸಿರುವ ಅರ್ಜಿಗಳು) ಎನ್ನುವುದಕ್ಕೆ ಪುರಾವೆಗಳಿವೆ. ಹಾಗಿದ್ದಾಗ್ಯೂ ಅವು ಇನ್ನೂ ದೃಢೀಕರಣದ ಹಂತದಲ್ಲಿಯೇ ಉಳಿದುಹೋಗಿವೆ. ಏಕೆಂದರೆ ಅಪ್ಪಿತಪ್ಪಿಯೂ ಯಾರೂ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಒಳಗೆ ನುಸುಳಿಕೊಂಡು ಬಿಡಬಾರದೆಂದು ಜವಾಬ್ದಾರಿಯುತ ಸ್ಥಳೀಯ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಹೀಗೆ ಕಟ್ಟುನಿಟ್ಟಾಗಿ ಇರುವುದು ಮುಖ್ಯವಿರಬಹುದು ಆದರೆ ಖಂಡಿತವಾಗಿಯೂ ಇಂತಹ ಬಿಕ್ಕಟ್ಟಿನ ಹೊತ್ತಿನಲ್ಲಿ ಅಲ್ಲ. ತಾತ್ಕಾಲಿಕ ಪಡಿತರ ಚೀಟಿಗಳ ಅವಶ್ಯಕತೆ ಇರುವವರಿಗೆ ಮತ್ತು ಯಾರು ಸರತಿಯಲ್ಲಿ ನಿಂತು ತಮ್ಮ ಪಡಿತರ ಚೀಟಿಯನ್ನೂ ಮತ್ತು ತಿಂಗಳ ಪಡಿತರವನ್ನು ತೆಗೆದುಕೊಳ್ಳಲು ಬಯಸುತ್ತಾರೋ ಅವರಿಗೆ ಹೆಚ್ಚಿನ ತಪಾಸಣೆಯಿಲ್ಲದೆ ಆರುತಿಂಗಳ ಅವಧಿಗೆ ಪಡಿತರ ಚೀಟಿಯನ್ನು ಕೊಡುವುದು ಒಳ್ಳೆಯದು ಎನಿಸುತ್ತದೆ. ಇಲ್ಲದೇ ಹೋದರೆ ಯಾರೋ ಕೆಲವು ಅನುಕೂಲಸ್ತರನ್ನು ತಪ್ಪಿಸುವುದಕ್ಕಾಗಿ ತೀರಾ ತುರ್ತಾಗಿ ಆಹಾರ ಬೇಕಾದವರನ್ನು ಹೊರಗಿಟ್ಟುಬಿಡುತ್ತಿರುತ್ತೇವೆ.

ಇದನ್ನು ಒಪ್ಪಿಕೊಂಡರೆ, ಹಲವು ಮಹತ್ವದ ನಿರ್ಧಾರಗಳು ಸಾಧ್ಯ. ಮೊದಲನೆಯದಾಗಿ ಯಾರೂ ಹಸಿವಿನಿಂದ ಬಳಲುತ್ತಿಲ್ಲ ಎನ್ನುವುದನ್ನು ಸರ್ಕಾರವು ಎಲ್ಲಾ ರೀತಿಯಿಂದಲೂ ಖಚಿತಪಡಿಸಿಕೊಳ್ಳಬೇಕು. ಅಂದರೆ



ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ವಿಸ್ತರಿಸಬೇಕು. ವಲಸಿಗರಿಗಾಗಿ ಮತ್ತು ಮನೆಯಿಂದ ದೂರವಿರುವವರಿಗಾಗಿ ಸಾರ್ವಜನಿಕ ಕ್ಯಾಂಟೀನುಗಳನ್ನು ಪ್ರಾರಂಭಿಸಬೇಕು. ಈಗ ಮನೆಯಲ್ಲಿ ಬಂದಿಯಾಗಿರುವ ಮಕ್ಕಳಿಗೆ ಶಾಲೆಯಲ್ಲಿ ಸಿಗುತ್ತಿದ್ದ ಊಟವನ್ನು ಮನೆಗೆ ತಲುಪಿಸುವ ವ್ಯವಸ್ಥೆ ಮಾಡಬೇಕು. ಮತ್ತು ಇದಕ್ಕೆ ಸ್ಥಳೀಯ ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗಳ (ಓಉಔ) ಸಹಾಯ ಪಡೆಯಬೇಕು. ಏಕೆಂದರೆ ಕಡುಬಡವರ ಸಂಪರ್ಕ ಸರ್ಕಾರಕ್ಕಿಂತಲೂ ಇಂತಹ ಸಂಸ್ಥೆಗಳಿಗೆ ಹೆಚ್ಚಿಗೆ ಇರುತ್ತದೆ.

ಎರಡನೆಯದಾಗಿ ಹಸಿವು ಅನ್ನುವುದು ಹತ್ತು ಚಿಂತೆಗಳಲ್ಲಿ ಒಂದು. ಸಧ್ಯಕ್ಕೆ ಆಹಾರ ಸಿಗುವುದು ಖಾತ್ರಿಯಾದರೂ ಆದಾಯವೇ ಇಲ್ಲದಿರುವುದು ಮತ್ತು ಕೂಡಿಟ್ಟ ಅಲ್ಪಸ್ವಲ್ಪವನ್ನು ಕಳೆದುಕೊಳ್ಳುವುದು ಅವರ ಮೇಲೆ ಭೀಕರ ಪರಿಣಾಮ ಬೀರುತ್ತದೆ. ಮುಂದಿನ ಬಿತ್ತನೆ ಕಾಲಕ್ಕೆ ಬೀಜ ಮತ್ತು ರಸಗೊಬ್ಬರವನ್ನು ಕೊಳ್ಳಲು ರೈತರು ಹಣಹೊಂಚಿಕೊಳ್ಳಬೇಕು. ವ್ಯಾಪಾರಿಗಳಿಗೆ ತಮ್ಮ ಅಂಗಡಿಯ ಸರಕುಗಳನ್ನು ಮರು ಭರ್ತಿ ಮಾಡಿಕೊಳ್ಳುವ ಚಿಂತೆ ಕಾಡುತ್ತಿರತ್ತದೆ. ಹಲವರಿಗೆ ತಮ್ಮ ಸಾಲಗಳನ್ನು ಹೇಗೆ ತೀರಿಸುವುದು ಅನ್ನುವ ಚಿಂತೆ. ಒಂದು ಸಮಾಜವಾಗಿ ಈ ಚಿಂತೆಗಳನ್ನು ನಾವೇಕೆ ಗಂಭೀರವಾಗಿ ಪರಿಗಣಿಸಬಾರದು? ನಾವೇಕೆ ಅವುಗಳನ್ನು ಕಡೆಗಣಿಸಬೇಕು? ಸರ್ಕಾರ ಈ ಸಂಕಟವನ್ನು ಸ್ವಲ್ಪಮಟ್ಟಿಗೆ ಗುರುತಿಸಿದೆ. ಅದರಿಂದಾಗಿಯೇ ಅದು ಕೆಲವು ವರ್ಗದ ಜನರಿಗೆ ನಗದು ವರ್ಗಾವಣೆ ಮಾಡುವ ಭರವಸೆಯನ್ನು ನೀಡಿದೆ. ಆದರೆ ಸರ್ಕಾರ ನಿಗಧಿಪಡಿಸಿರುವ ಹಣ ಮತ್ತು ಅದು ಗುರುತಿಸಿರುವ ಫಲಾನುಭವಿಗಳ ಸಂಖ್ಯೆ ಎರಡೂ ತುಂಬಾ ಕಡಿಮೆ. ಕೇವಲ ರೈತರಿಗೆ ಮಾತ್ರ ಅಂತ ಯಾಕೆ ಭಾವಿಸಬೇಕು? ಲಾಕ್‌ಡೌನ್‌ನಿಂದ ನರೇಗಾ ಯೋಜನೆ ನೆಲಕಚ್ಚಿದೆ. ಅದರಿಂದ ಸಂಕಷ್ಟಕ್ಕೆ ಒಳಗಾಗಿರುವ ಭೂರಹಿತ ಕಾರ್ಮಿಕರಿಗೂ ಈ ಅನುಕೂಲ ಸಿಗಬೇಕಲ್ಲವೇ? ಬೇಕಾದ್ದಕ್ಕಿಂತ ಒಂದಿಷ್ಟು ಹೆಚ್ಚು ಜನರಿಗೆ ಅನುಕೂಲ ಸಿಕ್ಕರೆ ಯಾವ ತೊಂದರೆಯೂ ಇಲ್ಲ. ಅದೇನೂ ದೊಡ್ಡ ತಪ್ಪಲ್ಲ. 2019ರಿಂದ ನರೇಗಾ ಪಟ್ಟಿಯಲ್ಲಿರುವವರು, ಜನ ಆರೋಗ್ಯ ಹಾಗೂ ಉಜ್ವಲ ಯೋಜನೆಗಳಡಿ ಬರುವ ಬಡಕುಟುಂಬಗಳ ಜನಧನ ಖಾತೆಗೆ ಪಿ ಚಿದಂಬರ್ ಹೇಳುವಂತೆ 5000 ರೂಗಳನ್ನು ಪಾವತಿಸಬೇಕು. ಅದು ಒಂದು ಒಳ್ಳೆಯ ಕ್ರಮವೆನಿಸುತ್ತದೆ.

ಆದರೆ ಈ ಯಾವ ಪಟ್ಟಿಗಳೂ ಪರಿಪೂರ್ಣವಾಗಿಲ್ಲ ಎನ್ನುವ ಸತ್ಯ ನಮಗೆ ತಿಳಿದಿರಬೇಕು. ರೋಹಿಣಿ ಪಾಂಡೆ, ಕಾರ್ತಿಕ್ ಮುರಳೀಧರನ್ ಮತ್ತಿತರರು ಮಾಡಿರುವ ಅಧ್ಯಯನ ತಿಳಿಸುವಂತೆ ಕಡುಬಡವರಿಗಾಗಿ ರೂಪಿಸಿರುವ ಜಾಮ್ ಮೂಲವ್ಯವಸ್ಥೆಯಲ್ಲಿ ಹಲವು ನ್ಯೂನತೆಗಳಿವೆ. ನಿರ್ಗತಿಕರಿಗೆ ಸಹಾಯ ಮಾಡುವ ವಿಷಯದಲ್ಲಿ ನಮಗೆ ಬದ್ಧತೆ ಬೇಕು. ಆ ಬದ್ಧತೆಯಿಂದಲೇ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಲಭ್ಯವಿರುವ ಅನುದಾನವನ್ನು ಕಡುಬಡವರಿಗೆ ತಲುಪಿಸುವುದಕ್ಕೆ ಪರಿಣಾಮಕಾರಿಯಾದ ದಾರಿಗಳನ್ನು ಕಂಡುಕೊಳ್ಳಬೇಕು.

ತೀರಾ ಧೈರ್ಯದ ಹಾಗೂ ಕ್ರಿಯಾಶೀಲವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಯಾವುದಾದರೂ ಸವಾಲಿದ್ದರೆ ಅದು ಇದೆ. ನಿಜ ಮುಂದಿನ ತಿಂಗಳುಗಳಲ್ಲಿ ತುಂಬಾ ಹಣದ ಅವಶ್ಯಕತೆ ಬರುತ್ತದೆ. ಈಗ ಖರ್ಚು ಮಾಡುವಾಗ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು ಅನ್ನುವುದೂ ನಿಜ. ಆದರೆ ನಿಜವಾಗಿ ಅವಶ್ಯಕತೆ ಇರುವವರಿಗೆ ನೆರವಾಗುವುದಕ್ಕ ಹಿಂದೇಟು ಹಾಕಿದರೆ ನಾವು ಇಡೀ ಉದ್ದೇಶವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿದ್ದೀವೆ ಎಂದರ್ಥ.

https://indianexpress.com/article/opinion/coronavirus-india-lockdown-economy-amartya-sen-raghuram-rajan-abhijit-banerjee-6364521/

# ಆರ್ಥಿಕತೆಯ ಪುನಃಶ್ಚೇತನಕ್ಕೆ ಒಂದು ನೀಲಿ ನಕ್ಷೆ

ಪಿ ಚಿದಂಬರಂ ಮತ್ತು ಪ್ರವೀಣ್ ಚಕ್ರವರ್ತಿ

**ಪಿ ಚಿದಂಬರಂ ಮತ್ತು ಪ್ರವೀಣ್ ಚಕ್ರವರ್ತಿನಮ್ಮ ದೇಶದ ಪ್ರಜೆಗಳಿಗೆ ನೆರವಾಗುವ ಉದ್ದೇಶದಿಂದ ಭಾರತ ಸರ್ಕಾರದ ಪರಿಗಣನೆಗಾಗಿ ಅತ್ಯಂತ ಎಚ್ಚರಿಕೆಯಿಂದ ತಯಾರಿಸಿದ ಆರ್ಥಿಕ ಸಲಹೆ**

"ನಮಗೆ ಊಟ ಇಲ್ಲ, ಮನೆ ಇಲ್ಲ, ಆದಾಯ ಇಲ್ಲ. ನಮ್ಮ ಮಕ್ಕಳು ಉಪವಾಸದಿಂದ ಸಾಯುತ್ತಿದ್ದಾರೆ" ಪ್ರಾಚಿ ಟಿ ವಿ ಆ್ಯಂಕರ್ ಮುಂದೆ ಏಪ್ರಿಲ್ 14ರಂದು ಅತ್ತಳು. ಪ್ರಾಚಿ ಬಿಹಾರದಿಂದ ವಲಸೆ ಬಂದ ಕಾರ್ಮಿಕಳು. ಅವಳ ಹಾಗೆ ಸುಮಾರು 4000 ಲಕ್ಷ ಜನ ಭಾರತದಲ್ಲಿ ದಿನದ ಕೂಲಿಯನ್ನೇ ನೆಚ್ಚಿಕೊಂಡು ಜೀವನ ನಡೆಸುತ್ತಿದ್ದಾರೆ. ಅವಳಿಗೆ ಬದುಕೋದಕ್ಕೆ ದಾರಿಯೇ ಇಲ್ಲ. ಯಾಕೆಂದರೆ ನಾವೆಲ್ಲಾ ಈಗ ಲಾಕ್‌ಡೌನಿನಲ್ಲಿದ್ದೇವೆ. ಎಲ್ಲಾ ಆರ್ಥಿಕ ಚಟುವಟಿಕೆಗಳು ನಿಂತುಹೋಗಿವೆ. ಕೋವಿಡ್–19 ಹರಡುವುದನ್ನು ತಡೆಯುವುದಕ್ಕೆ ಲಾಕ್‌ಡೌನ್ ಬೇಕಿತ್ತು. ಆದರೆ ಪ್ರಾಣ ಉಳಿಸೋದು ಹಾಗೂ ಜೀವನ ರಕ್ಷಿಸೋದರ ನಡುವೆ ಆಯ್ಕೆ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ಎರಡನ್ನೂ ಒಟ್ಟಿಗೆ ಸಾಧಿಸಬಹುದು. ಲಾಕ್‌ಡೌನ್‌ನನ್ನು ಸ್ವಲ್ಪ "ಜಾಣ್ಮೆ"ಯಿಂದ ಜಾರಿಗೊಳಿಸಬೇಕು. ಮತ್ತು ಆರ್ಥಿಕತೆಯನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು ಅಷ್ಟೆ.

"ದೊಡ್ಡ ಹಿಂಜರಿತ" ಅನ್ನೋ ಮಾತನ್ನು ಆರ್ಥಶಾಸ್ತ್ರಜ್ಞರು ಬಳಸುತ್ತಾರೆ. ಅದು ನಮ್ಮನ್ನು ಇಂದು ಕಾಡುತ್ತಿರುವ ಮಾನವೀಯ ಹಾಗೂ ಆರ್ಥಿಕ ಬಿಕ್ಕಟ್ಟಿನ ತೀವ್ರತೆಯನ್ನು ಒತ್ತಿ ಹೇಳುತ್ತದೆ. ಪ್ರತಿಯೊಂದು ದೇಶದಲ್ಲೂ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳೂ ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ನಮ್ಮ ಪ್ರಧಾನಿಯವರನ್ನೂ ಸೇರಿದಂತೆ ಜಗತ್ತಿನ ಎಲ್ಲಾ ನಾಯಕರಿಗೆ ನಮ್ಮ ಅನುಕಂಪ ಮತ್ತು ಶುಭಕಾಮನೆಗಳನ್ನು ಸಲ್ಲಿಸುತ್ತೇವೆ.

ಮೊದಲಿಗೆ ಆರ್ಥಿಕ ಬಿಕ್ಕಟ್ಟಿನ ಪ್ರಮಾಣವನ್ನು ನಿಖರವಾಗಿ ಅರಿತುಕೊಳ್ಳಬೇಕು. ಅದು ತುಂಬಾ ಮುಖ್ಯ. ಪ್ರಾಚಿಗೆ ಕೆಲಸ ಹೋಯಿತು. ಯಾಕೆಂದರೆ ಅವಳ ಒಡೆಯ ವ್ಯಾಪಾರವನ್ನು ನಿಲ್ಲಿಸಬೇಕಾಯಿತು. ಈಗ ಸರ್ಕಾರ ಮುಖ್ಯವಾಗಿ ಪ್ರಾಚಿಗೆ ಆಹಾರ ಕೊಡಬೇಕು. ಹಾಗೆಯೇ ಅವರ ಮಾಲಿಕನಿಗೆ ಕೆಲಸ ಪ್ರಾರಂಭಿಸೋದಕ್ಕೂ ನೆರವಾಗಬೇಕು. ಆಗ ಅವನು ಆಕೆಯನ್ನು ಬೇಗ ಕೆಲಸಕ್ಕೆ ತೆಗೆದುಕೊಳ್ಳಬಹುದು. ಆರ್ಥಿಕ ಬಿಕ್ಕಟ್ಟಿಗೆ ಬೇಡಿಕೆ ಹಾಗೂ ಪೂರೈಕೆ ಎರಡು ಕಡೆಯಿಂದ ಪ್ರತಿಸ್ಪಂದಿಸಬೇಕು. ಬಡವರಿಗೆ, ದುರ್ಬಲರಿಗೆ ಅವರ ಸಂಕಷ್ಟಕ್ಕೆ ಪರಿಹಾರವಾಗಿ ತಕ್ಷಣ ಆಹಾರ ಮತ್ತು ಹಣವನ್ನು ಕೊಡಬೇಕು. ಅದು ನಮ್ಮ ನೈತಿಕ ಹೊಣೆಗಾರಿಕೆ. ಭಾರತದಲ್ಲಿ ಒಟ್ಟಾರೆ ಇರುವ ಕುಟುಂಬಗಳಲ್ಲಿ ಕೆಳಗಿನ ಅರ್ಧದಷ್ಟು ಕುಟುಂಬಗಳಿಗೆ (ಅಂದರೆ ಒಟ್ಟು 26 ಕೋಟಿ ಕುಟುಂಬಗಳಲ್ಲಿ





13 ಕೋಟಿ ಕುಟುಂಬಗಳಿಗೆ) ಅವರ ಬ್ಯಾಂಕ್ ಖಾತೆಗೆ ಒಂದು ವಾರದೊಳಗೆ 5000 ರೂಪಾಯಿಗಳನ್ನು ವರ್ಗಾಯಿಸಬೇಕು. ಕುಟುಂಬಗಳ ಪಟ್ಟಿ ಮತ್ತು ಅವುಗಳ ಬ್ಯಾಂಕ್ ವಿವರ ಪಿಎಂಜಯ್ ಮತ್ತು ನರೇಗ ಇತ್ಯಾದಿ ಸರ್ಕಾರದ ಹಲವು ಯೋಜನೆಗಳ ದಾಖಲೆಗಳಲ್ಲಿ ಸಿಗುತ್ತದೆ. ಜೊತೆಗೆ ರಾಜ್ಯಗಳಲ್ಲಿ ದಾರಿದ್ರ್ಯ ರೇಖೆಯ ಕೆಳಗಿನ ಜನರ ಪಟ್ಟಿ ಇದೆ. ಇದಕ್ಕೆ ಒಟ್ಟಾರೆ 65,000 ಕೋಟಿ ರೂಪಾಯಿ ಬೇಕಾಗಬಹುದು. ಅವಶ್ಯಕತೆ ನೋಡಿಕೊಂಡು ಈ ಕುಟುಂಬಗಳಿಗೆ ಮೇ ತಿಂಗಳಿನಲ್ಲಿ ಮತ್ತೆ 3000 ರೂಪಾಯಿ ನೀಡಬಹುದು. ಅದಕ್ಕೆ ಇನ್ನೂ 39,000 ಕೋಟಿ ಬೇಕಾಗುತ್ತದೆ.

ಹಣಕ್ಕಿಂತ ಹೆಚ್ಚು ತುರ್ತಾಗಿ ಜನರಿಗೆ ಆಹಾರ ಬೇಕಾಗಿದೆ ಅಂತ ಜೇನ್ ಡ್ರೆಜ್ ಅಂತಹ ವಿದ್ವಾಂಸರು ಹೇಳುತ್ತಾರೆ. ಇಂಡಿಯಾದಲ್ಲಿ ಅವಶ್ಯಕತೆಗಿಂತ ತುಂಬಾ ಹೆಚ್ಚಿನ ದಾಸ್ತಾನು ಇದೆ. ಕೇಂದ್ರ ಸರ್ಕಾರ ಈಗಾಗಲೇ ಉಚಿತವಾಗಿ ಆಹಾರವನ್ನು ಹಂಚುವುದಾಗಿ ಘೋಷಿಸಿದೆ.  ಆದರೆ ವರದಿಗಳ ಪ್ರಕಾರ ಸ್ಥಳೀಯ ಪಡಿತರ ಅಂಗಡಿಗಳಲ್ಲಿ ಆಹಾರದ ದಾಸ್ತಾನಿನ ಕೊರತೆ ಇದೆ. ಜೊತೆಗೆ ಹಲವರ ಹತ್ತಿರ ಪಡಿತರ ಕಾರ್ಡುಗಳೇ ಇಲ್ಲ. ಹಾಗಾಗಿ ಆಹಾರ ವಿತರಣೆ ಕಷ್ಟವಾಗುತ್ತಿದೆ. ಪಡಿತರ ವಿತರಣೆಯನ್ನು ಸರ್ಕಾರ ತಕ್ಷಣ ಸಾರ್ವತ್ರೀಕರಿಸಬೇಕು. ಗುರುತಿನ ಚೀಟಿಗಳನ್ನು ಕಡ್ಡಾಯ ಮಾಡಬಾರದು. ರಾಜ್ಯ ಸರ್ಕಾರಗಳ ಸಹಕಾರದಿಂದ ಪ್ರತಿಯೊಂದು ಪಡಿತರ ಅಂಗಡಿಗಳಿಗೂ ಅವುಗಳಿಗೆ ಅವಶ್ಯಕವಿರುವಷ್ಟು ಆಹಾರ ಪದಾರ್ಥಗಳನ್ನು ಕೂಡಲೇ ಒದಗಿಸಬೇಕು. ಆಗ ಎಲ್ಲಾ ಕುಟುಂಬಗಳಿಗೂ ಉಚಿತವಾಗಿ ಆಹಾರ ಧಾನ್ಯಗಳು ಸಿಗುತ್ತವೆ.

ಲಾಕ್‌ಡೌನ್ ಸಮಯದಲ್ಲಿ ನರೇಗ ಯೋಜನೆ ಸ್ಥಗಿತಗೊಂಡಿತ್ತು. ಅದನ್ನು ಪ್ರಾರಂಭಿಸುವುದಕ್ಕೆ ಮುಂದಿನ ಏಪ್ರಿಲ್ ಮಾರ್ಗಸೂಚಿಯಲ್ಲಿ ಉದ್ದೇಶಿಸಲಾಗಿದೆ. ಸಾಮಾಜಿಕ ಅಂತರದ ನಿಯಮಗಳನ್ನು ಪಾಲಿಸಿಕೊಂಡು ಇದನ್ನು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ನರೇಗ ಅಡಿಯಲ್ಲಿ ಕೆಲಸ ಪ್ರಾರಂಭಿಸುವ ಮತ್ತು ಅದನ್ನು ವಿಸ್ತರಿಸುವ ಜವಾಬ್ದಾರಿಯನ್ನು ಜಿಲ್ಲಾ ಕಲೆಕ್ಟರುಗಳಿಗೆ ಕೊಡಬೇಕು. ಕಾರಣಾಂತರಗಳಿಂದ ಜನರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗದೇ ಹೋದರೆ 10ದಿನಗಳ ಕೂಲಿಯನ್ನು ಪ್ರತಿ ತಿಂಗಳು ನರೇಗಾ ಯೋಜನೆಯಲ್ಲಿ ದಾಖಲಾಗಿರುವ ಕೆಲಸಗಾರರಿಗೆ ಪಂಚಾಯತ್/ಬ್ಲಾಕ್ ಮಟ್ಟದಲ್ಲಿ ಕೆಲಸ ಪ್ರಾರಂಭವಾಗುವವರೆಗೆ ಕೊಡಬೇಕು. ಇದು ಅವರ ಜೀವನಕ್ಕೆ ಆಧಾರವಾಗುತ್ತದೆ. ಅಮರ್ತ್ಯ ಸೇನ್, ರಘುರಾಂ ರಾಜನ್ ಮತ್ತು ಅಭಿಜಿತ್ ಬ್ಯಾನರ್ಜಿಯವರಂತಹ ಅರ್ಥಶಾಸ್ತ್ರಜ್ಞರು ಈ ಕ್ರಮಗಳನ್ನು ತುರ್ತಾಗಿ ಜಾರಿಗೆ ತರಬೇಕೆಂದು ಹೇಳಿದ್ದಾರೆ.

ಮುಂದಿನ ಕ್ರಮ ಅಂದರೆ ಪ್ರಾಚಿಯ ಮಾಲೀಕನಿಗೆ ತನ್ನ ವ್ಯವಹಾರವನ್ನು ಪ್ರಾರಂಭಿಸುವುದಕ್ಕೆ ನೆರವಾಗುವುದು. ಆರ್ಥಿಕತೆಯನ್ನು ಕ್ರಮೇಣ ಪ್ರಾರಂಭಿಸುವುದರಿಂದ ಇದು ಸಾಧ್ಯವಾಗುತ್ತದೆ. ಆರ್ಥಿಕತೆಯನ್ನು ಮತ್ತೆ ಪ್ರಾರಂಭಿಸಬೇಕಾದರೆ ಕೋವಿಡ್–19ಕ್ಕೆ ಸೂಕ್ಷ್ಮವಾಗಿರುವ ಹಾಟ್‌ಸ್ಪಾಟ್ ಸ್ಥಳಗಳನ್ನು ಮತ್ತು ಕಂಟೈನ್‌ಮೆಂಟ್ ಪ್ರದೇಶಗಳನ್ನು ಗುರುತಿಸುವುದಕ್ಕೆ ನಮಗೆ ಸಾಧ್ಯವಾಗಬೇಕು. ಇದು ಬಹು ಮುಖ್ಯ. ಈ ಹಾಟ್‌ಸ್ಪಾಟಗಳನ್ನು ಗುರುತಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಹೆಚ್ಚು ಸಮನ್ವಯದಿಂದ ಕೆಲಸ ಮಾಡಬೇಕು. ಇದು ಜಿಲ್ಲಾ ಮಟ್ಟದಲ್ಲಿ ಮಾತ್ರ ಆದರೆ ಸಾಲದು, ಸಾಧ್ಯವಾದರೆ ಬ್ಲಾಕ್/ಮಂಡಲ್ ಮಟ್ಟದಲ್ಲೂ ಹಾಟ್‌ಸ್ಪಾಟ್ ಪ್ರದೇಶಗಳನ್ನು ಗುರುತಿಸುವ ಕೆಲಸ ನಡೆಯಬೇಕು. ಇದನ್ನು ಸಾರ್ವಜನಿಕ ಆರೋಗ್ಯ ಪರಿಣತರು ಮತ್ತು ಎಪಿಡೆಮಾಲಜಿಸ್ಟ್‌ಗಳ ನೆರವಿನಿಂದ ಮಾಡಬೇಕು. ಅದಕ್ಕಾಗಿ ಕರಾರುವಾಕ್ಕಾದ ರೀತಿಯ ತಪಾಸಣೆ ನಡೆಸಬೇಕು.

## ಯೋಜನೆಗಳನ್ನು ಮುಂಚಿತವಾಗಿಯೇ ರೂಪಿಸಿಕೊಳ್ಳಬೇಕು

ಮೇ 4ರಿಂದ ಜಾರಿಗೆ ಬರುವ ಹೊಸ ಮಾರ್ಗಸೂಚಿಯಲ್ಲಿ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು (ಕೆಲವನ್ನು ಹೊರತುಪಡಿಸಿ) ಹಾಟ್‌ಸ್ಪಾಟ್ ಅಲ್ಲದ ಪ್ರದೇಶಗಳಲ್ಲಿ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕೆ ಕಾರ್ಮಿಕರು ಬೇಕು. ಹಾಗೆಯೇ ಬಂಡವಾಳವೂ ಬೇಕು. ಲಾಕ್‌ಡೌನಿನಿಂದಾಗಿ ಕಾರ್ಮಿಕರು ಹಾಗೂ ಬಂಡವಾಳದ ಕೊರತೆ ತೀವ್ರವಾಗಿದೆ. ಸೋಂಕಿನ ಪರೀಕ್ಷೆ ಮತ್ತು ಪರಿಶೀಲನೆ ನಿರಂತರವಾಗಿ ನಡೆಯುತ್ತಿರಬೇಕು. ಹೊಸ ಪ್ರದೇಶಗಳು ಹಾಟ್ ಸ್ಪಾಟ್‌ಗಳಾಗಿಬಿಡಬಹುದು. ಈಗ ಹಾಟ್‌ಸ್ಪಾಟ್‌ಗಳಾಗಿದ್ದ ಪ್ರದೇಶಗಳು ಸರಿಹೋಗಿಬಿಡಬಹುದು.

ಸಣ್ಣ ಅಂಗಡಿಗಳು, ಸೇವೆಯ ಸಂಘಟನೆಗಳು ಮತ್ತು ಸ್ವಯಂಉದ್ಯೋಗಿಗಳು ತಮ್ಮ ತಮ್ಮ ಸ್ಥಳಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕೆ

ಅವಕಾಶ ಮಾಡಿಕೊಡಬೇಕು. ಒಟ್ಟು 80 ಮಿಲಿಯನ್ ಉದ್ದಿಮೆಗಳಲ್ಲಿ ಮುಕ್ಕಾಲು ಉದ್ದಿಮೆಗಳು ಸ್ಥಳೀಯ ಮಟ್ಟದಲ್ಲಿ ಕೆಲಸ ಮಾಡುತ್ತಿವೆ. ನಿಗಾದಲ್ಲಿದ್ದು ಎಲ್ಲಾ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಂಡರೆ ಅದ–ರಿಂದ ಯಾವುದೇ ಹೊಸ ಅಪಾಯಗಳು ಬರುವ ಸಾಧ್ಯತೆ ಇಲ್ಲ. ಅದರಿಂದ ಸ್ಥಳೀಯವಾಗಿ ಆರ್ಥಿಕ ಚಟುವಟಿಕೆಗಳು ಹೆಚ್ಚುತ್ತವೆ.

ಹೊಸ ಮಾರ್ಗಸೂಚಿಯಲ್ಲಿ ರಾಬಿ ಕಟಾವು ಸಮಯದಲ್ಲಿ ಕೃಷಿ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಇದು ಸರಿಯಾದ ಕ್ರಮ. ಆದರೆ ಈ ಎಲ್ಲಾ ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕೆ ಬೇಕಾದ ಕಾರ್ಮಿಕರ ಕೊರತೆ ಇದೆ. ಇದರಿಂದ ನಿಜವಾಗಿ ತೊಂದರೆಯಾಗಬಹುದು. ಕೆಲಸಗಾರರು ಬರುವುದಕ್ಕೆ ಸಾಧ್ಯವಾಗುವಂತೆ ಪ್ರಯಾಣ ಮತ್ತು ಸಾರಿಗೆ ವ್ಯವಸ್ಥೆಯಾಗಬೇಕು. ಅದು ತುಂಬಾ ಮುಖ್ಯ. ಆದರೆ ಅದು ತುಂಬಾ ಅಪಾಯಕಾರಿ. ಖಾಸಗಿ ಸಾರಿಗೆ ಹಾಗೂ ಸಾರ್ವಜನಿಕ ಪ್ರಯಾಣವನ್ನು ಹಂತಹಂತವಾಗಿ ಪ್ರಾರಂಭಿಸಬೇಕು. ಅವನ್ನು ಹಾಟ್‌ಸ್ಪಾಟ್ ಅಲ್ಲದ ಪ್ರದೇಶಗಳಲ್ಲಿ ಪ್ರಾರಂಭಿಸಬೇಕು. ರೈಲು ಮತ್ತು ಬಸ್ ಪ್ರಯಾಣವನ್ನು ಪ್ರಾರಂಭಿಸುವಾಗ ತುಂಬಾ ಎಚ್ಚರವಹಿಸಬೇಕು. ಬಸ್ಸು ಹಾಗೂ ರೈಲಿನ ಒಳಗಡೆ ಜನರ ತಾಪಮಾನವನ್ನು ಪರೀಕ್ಷಿಸುತ್ತಿರಬೇಕು. ಮತ್ತು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವ ನಿಯಮವನ್ನು ಪಾಲಿಸಬೇಕು. ಅದಕ್ಕೆ ಒಂದು ದಾರಿ ಅಂದರೆ ಪ್ರಯಾಣಿಕರ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಬದಲಿಗೆ ಹೆಚ್ಚು ಸಲ ವಾಹನಗಳು ಸಂಚರಿಸುವುದಕ್ಕೆ ವ್ಯವಸ್ಥೆ ಮಾಡಬಹುದು. ಸಾಮರ್ಥ್ಯದ ಅರ್ಧಕ್ಕಿಂತ ಹೆಚ್ಚು ಪ್ರಯಾಣಿಕರು ಇರಬಾರದು. ಆಯ್ಕೆಯ ಸಮಸ್ಯೆ ಬರುತ್ತದೆ. ಸರಿಯಾದ ನಿರ್ಧಾರ ಯಾವುದು ಅನ್ನುವ ತೀರ್ಮಾನವನ್ನು ಸ್ಥಳೀಯ ಸಾರಿಗೆ ಅಧಿಕಾರಿಗೆ ಬಿಡಬಹುದು. ಅದನ್ನು ಬೇಕಾದರೆ ಆಗಿಂದಾಗ ಮಾರ್ಪಾಡು ಮಾಡಿಕೊಳ್ಳಬಹುದು.

## ಪುನಶ್ಚೇತನಕ್ಕೆ ಬಂಡವಾಳ

ಆರ್ಥಿಕ ಚಟುವಟಿಕೆಗಳನ್ನು ಮತ್ತೆ ಪ್ರಾರಂಭಿಸುವುದಕ್ಕೆ ಮುಖ್ಯವಾಗಿ ಬಂಡವಾಳ ಬೇಕು. ಅದರಲ್ಲೂ ದಿನನಿತ್ಯದ ಚಟುವಟಿಕೆಗಳನ್ನು ನಡೆಸುವುದಕ್ಕೆ ಬೇಕಾದ ಬಂಡವಾಳ. ಬಹುಪಾಲು ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಲ್ಲಿ ಹಣ ಇಲ್ಲ. ಅವುಗಳಿಗೆ ಆದಾಯವೂ ಇಲ್ಲ. ಬ್ಯಾಂಕುಗಳು ಸಾಲ ಕೊಡುವ ಸಾಧ್ಯತೆ ಕಡಿಮೆ. ಸರ್ಕಾರ ಮುಂದೆ ಬಂದು ಸಾಲಕ್ಕೆ ಗ್ಯಾರಂಟಿ ನೀಡಬೇಕು. ಅದರಿಂದ ಬ್ಯಾಂಕುಗಳು ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ನೆರವಾಗುವುದಕ್ಕೆ ಮುಂದೆ ಬರಬಹುದು. ರಿಸರ್ವ್ ಬ್ಯಾಂಕ್ ಈಗಾಗಲೇ ಬ್ಯಾಂಕುಗಳಿಗೆ  ಸಾಲದ ಮರುಪಾವತಿಗೆ ಮೂರು ತಿಂಗಳು ರಿಯಾಯಿತಿ ನೀಡಬೇಕೆಂದು ಸೂಚಿಸಿದೆ. ಇದನ್ನು ಇನ್ನೂ ಮೂರು ತಿಂಗಳು ವಿಸ್ತರಿಸಬಹುದು.

ಸಂಘಟಿತ ಕ್ಷೇತ್ರಕ್ಕೆ ಅಮೇರಿಕೆಯ ಪೇಚೆಕ್ ರಕ್ಷಣೆಯ ಕಾರ್ಯಕ್ರಮವನ್ನು ಅನುಸರಿಸಬಹುದು. ಅಂದರೆ ಸಂಘಟಿತ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರನ್ನು ಕೆಲಸದಿಂದ ತೆಗೆಯದೇ ಹಾಗೆ ಉಳಿಸಿಕೊಳ್ಳುವುದಕ್ಕೆ ಉದ್ದಿಮೆಗಳಿಗೆ ಸರ್ಕಾರ ನೆರವಾಗುವುದು. 2017–18ರ ಆರ್ಥಿಕ ಸಮೀಕ್ಷೆಯ ಪ್ರಕಾರ 15,000ರೂಪಾಯಿಗಿಂತ ಕಡಿಮೆ ಮಾಸಿಕ ಸಂಬಳ ತೆಗೆದುಕೊಳ್ಳುತ್ತಿರುವವರು ಜಿಎಸ್‌ಟಿ ಅಡಿಯಲ್ಲಿ ನೋಂದಾಯಿತರಾಗಿರುವ ಉದ್ದಿಮೆಗಳಲ್ಲಿ 4 ಕೋಟಿ ಜನ ಕೆಲಸ ಮಾಡುತ್ತಿದ್ದಾರೆ. ಇದನ್ನು ನೌಕರರ ಪ್ರಾವಿಡೆಂಟ್ ನಿಧಿಯ ದತ್ತಾಂಶವನ್ನು ಬಳಸಿಕೊಂಡು ಅಂದಾಜು ಮಾಡಲಾಗಿದೆ. ಅವರು ಕೆಲಸ ಕಳೆದುಕೊಳ್ಳುವ ಸಾಧ್ಯತೆಗಳಿವೆ. ಸರ್ಕಾರ ಅವರ ಸಂಬಳಕ್ಕೆ ಸುರಕ್ಷತೆ ನೀಡಬೇಕು. ಅವರ ಒಂದೆರಡು ತಿಂಗಳ ಸಂಬಳವನ್ನು ಸರ್ಕಾರ  ಭರಿಸಬೇಕು. ಇದನ್ನು ನೌಕರರ ಪ್ರಾವಿಡೆಂಟ್ ಫಂಡ್ ಮತ್ತು ಜಿಎಸ್‌ಟಿ ಡೆಟಾಬೇಸನ್ನು ಆಧರಿಸಿ ಜಾರಿಗೆ ತರಬಹುದು.

ಆರ್‌ಬಿಐ ತನ್ನ ಬ್ಯಾಂಕುಗಳ ಮೂಲಕ ಪ್ರವಾಸೋದ್ಯಮ ಮತ್ತು ಉತ್ಪಾದನಾ ಕ್ಷೇತ್ರಗಳಿಗೆ ಬಂಡವಾಳ ಸಿಗುವ ಹಾಗೆ ನೋಡಿಕೊಳ್ಳಬೇಕು. ಅವುಗಳಿಗೆ ಈಗ ನೆರವು ಬೇಕಾಗಿದೆ. ವಿದೇಶಿ ವ್ಯಾಪಾರ ಸುಮಾರು ದಿನಗಳು ಹೀಗೆ ಮಂದಗತಿಯಲ್ಲೇ ಸಾಗುತ್ತದೆ. ರಫ್ತನ್ನು ಉತ್ತೇಜಿಸಬೇಕು. ಭಾರತ ಸರ್ಕಾರ ಅದಕ್ಕಾಗಿ ಸಾಧ್ಯವಾದ ಕ್ರಮಗಳನ್ನೆಲ್ಲಾ ತೆಗೆದುಕೊಳ್ಳಬೇಕು. ಇದಕ್ಕಾಗಿ ವಿದೇಶಿ ವಿನಿಮಯವನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು. ಈ ಬಿಕ್ಕಟ್ಟಿನ ಸಮಯದಲ್ಲಿ ತೆರೆದುಕೊಳ್ಳಬಹುದಾದ  ರಫ್ತು ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು. ರಫ್ತು ಕೋಟ್ಯಾಂತರ ಜನರಿಗೆ ಉದ್ಯೋಗ ಒದಗಿಸುವ ಪ್ರಮುಖ ಕ್ಷೇತ್ರ. 2004–2010ರ ಆರ್ಥಿಕ ಸಮೃದ್ಧಿಯ ಕಾಲದಲ್ಲಿ ಹಾಗೆ ಆಗಿತ್ತು.

ಬೇಡಿಕೆ ಮತ್ತು ಪೂರೈಕೆಯನ್ನು ಉತ್ತೇಜಿಸುವುದಕ್ಕೆ ತೆಗೆದುಕೊಳ್ಳುವ ವಿತ್ತೀಯ ಕ್ರಮಗಳ ಜೊತೆಗೆ ಆರ್‌ಬಿಐ ಕಡೆಯಿಂದ ಮರುಪಾವತಿಯ ಅವಧಿಯ ವಿಸ್ತರಣೆ, ಸಾಲವನ್ನು ಮನ್ನಾ ಮಾಡುವುದು, ತೀರಿಸಲಾಗದ ಸಾಲಗಳಿಗೆ ಸಂಬಂಧಿಸಿದ ನಿಯಮಗಳನ್ನು ಪರಿಷ್ಕರಿಸುವುದು ಇತ್ಯಾದಿ ಹಣಕಾಸು ಉತ್ತೇಜನಗಳನ್ನು ಒದಗಿಸಿಬೇಕು.

## ಹಣ ವರ್ಸಸ್ ಮಿಥ್ಯೆಗಳು

ಹೀಗೆ ಮರುಚೇತನಗೊಳಿಸುವುದಕ್ಕೆ ಹಾಗೂ ರಕ್ಷಣೆಯ ಯೋಜನೆಗಳಿಗೆ ಬೇಕಾದಷ್ಟು ಹಣ ನಮ್ಮಲ್ಲಿ ಇದೆಯಾ? ನಮ್ಮ ಲೆಕ್ಕಾಚಾರದ ಪ್ರಕಾರ ಇದಕ್ಕೆ ಒಟ್ಟಾರೆಯಾಗಿ 5ರಿಂದ 6 ಲಕ್ಷ ಕೋಟಿ ಖರ್ಚಾಗಬಹುದು. ಅಷ್ಟು ಹಣ ನಮ್ಮಲ್ಲಿದೆ. ಕೇಂದ್ರ ಹಾಗೂ ರಾಜ್ಯಗಳ ಬಜೆಟ್ಟನ್ನು ಒಟ್ಟಾರೆಯಾಗಿ ನೋಡಿದರೆ ಅದರಲ್ಲಿ 2020–21ರಲ್ಲಿ 70 ಲಕ್ಷ ಕೋಟಿ ಖರ್ಚನ್ನು ತೋರಿಸಲಾಗಿದೆ. ಕೇಂದ್ರವೊಂದೇ ಈ ವಿತ್ತೀಯ ವರ್ಷದಲ್ಲಿ ಬಂಡವಾಳ ಖರ್ಚಿನ ಬಾಬ್ತಿನಲ್ಲಿ 4 ಲಕ್ಷ ಕೋಟಿ ರೂಪಾಯಿ ತೋರಿಸಿದೆ. ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ ಇದರಲ್ಲಿ ಬಹುಪಾಲು ಖರ್ಚಾಗುವ ಸಾಧ್ಯತೆ ಕಡಿಮೆ. ಹಾಗೆ ಖರ್ಚು ಮಾಡುವುದಕ್ಕೆ ಸಾಧ್ಯವಿದ್ದರೂ ಮುಂದಿನ ವರ್ಷಕ್ಕೆ ಮುಂದೂಡಬಹುದು. ಅವಶ್ಯಕವಲ್ಲದ ಖರ್ಚನ್ನು ಕೈಬಿಡುವ ಮೂಲಕವೂ ಉಳಿತಾಯವನ್ನು ಹೆಚ್ಚಿಸಬಹುದು. ಜೊತೆಗೆ ಕೇಂದ್ರಕ್ಕೆ ಇಂತಹ ಸಮಯದಲ್ಲಿ ಹಣವನ್ನು ಎರವಲು ಪಡೆದುಕೊಳ್ಳುವುದಕ್ಕೂ ಅವಕಾಶವಿದೆ.  ಖಾಸಗೀ ಹೂಡಿಕೆಯನ್ನು ಹೊರದೂಡದೆ, ಬಡ್ಡಿದರವನ್ನು ಹೆಚ್ಚಿಸದೆಯೇ ಇದನ್ನು ಮಾಡಬಹುದು. ಇನ್ನೂ ಕೊರತೆ ಬಿದ್ದರೆ ಅಂತಿಮ ಮಾರ್ಗವಾಗಿ ಹೆಚ್ಚುವರಿ ಕೊರತೆಯನ್ನು ಮಾನಿಟೈಸ್ ಮಾಡಬಹುದು. ಅಂದರೆ ಹಣವನ್ನು ಮುದ್ರಿಸಬಹುದು.

ಒಂದು ಸೂಕ್ಷ್ಮ ಕ್ರಿಮಿ ಮನುಷ್ಯನನ್ನು ಮಂಡಿಯೂರಿ ಕೂರುವಂತೆ ಮಾಡಿದೆ. ಆರೋಗ್ಯ ವಿಜ್ಞಾನಿಗಳು ಹೇಳುವ ಹಾಗೆ ನಾವು ವೈರಾಣುವಿನೊಂದಿಗೆ ಬದುಕುವುದಕ್ಕೆ ಕಲಿಯಬೇಕು. ನಾವು ಪ್ರಾಚಿ ಮತ್ತು ಅವಳಂತಹ ಕೊಟ್ಯಾಂತರ ಜನ ಈ ಸಂಕಷ್ಟದ ದಿನಗಳನ್ನು ದಾಟಿಕೊಳ್ಳುವುದಕ್ಕೆ ನೆರವಾಗಬೇಕು. ನೂತನ ಸಾಮಾನ್ಯ ಸ್ಥಿತಿ ಅನುಭವಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

P. Chidambaram is former Finance Minister of India and a sitting Member of Parliament; Praveen Chakravarty is a political economist and a senior office-bearer of the Congress party

https://www.thehindu.com/opinion/lead/a-blueprint-to-revive-the-economy/article31359290.ece

.

# ನಮ್ಮ ಆರ್ಥಿಕತೆ
# ಕೊರೋನಾ ವೈರಾಣುವಿನಿಂದ ಸತ್ತು ಹೋಗಬಹುದೆ?

## ಪಾಲ್ ರೋಮೆರ್ ಮತ್ತು ಅಲನ್ ಎಂ ಗಾರ್ಬರ್

ನ್ಯೂಯಾರ್ಕ ಟೈಮ್ಸ್, ಮಾರ್ಚ 23, 2020

**ಪಾಲ್ ರೋಮರ್ ಅವರಿಗೆ 2018ರಲ್ಲಿ ಅರ್ಥಶಾಸ್ತ್ರದಲ್ಲಿ ನೋಬೆಲ್ ಬಹುಮಾನ ಬಂದಿತ್ತು. ಅಲನ್ ಪ್ರಖ್ಯಾತ ವೈದ್ಯರು ಮತ್ತು ಅರ್ಥಶಾಸ್ತ್ರಜ್ಞರು.**

ಕೋವಿಡ್ – 19 ಕಳೆದ ಶತಮಾನದ ಅತ್ಯಂತ ಆತಂಕಕಾರಿಯಾದ ಮಹಾಮಾರಿ. ಅದು ಆರೋಗ್ಯ ಹಾಗೂ ಆರ್ಥಿಕ ಬಿಕ್ಕಟ್ಟನ್ನು ಸೃಷ್ಟಿಸಿದೆ. ಈ ಎರಡೂ ಬಿಕ್ಕಟ್ಟುಗಳನ್ನು ನಿರ್ವಹಿಸಲು ಸರ್ಕಾರಗಳು ಪರಸ್ಪರ ವಿರೋಧಾತ್ಮಕಗಳಾದ ಮಾರ್ಗೋಪಾಯಗಳನ್ನು ಅನುಸರಿಸುತ್ತಿವೆ. ಅವು ದೀರ್ಘಕಾಲದಲ್ಲಿ ಫಲಪ್ರದವಾಗುವ ಉಪಾಯಗಳಲ್ಲ.

ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು ಒಂದು ತುರ್ತುಕ್ರಮ. ಅದರಿಂದ ಪ್ರಾಣ ಉಳಿಯುತ್ತದೆ. ಆದರೆ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ಹಿಂದಿನ ಮಹಾನ್ ಆರ್ಥಿಕ ಹಿಂಜರಿಕೆಯ ಸಮಯದಲ್ಲಿ ಶೇಕಡ 25ರಷ್ಟು ಜನ ಕೆಲಸ ಕಳೆದುಕೊಂಡಿದ್ದರು. ಕೆಲದಿನಗಳ ಹಿಂದೆಯೇ ನಿರುದ್ಯೋಗದ ದರ ಶೇಕಡ 20ರಷ್ಟಾಗಿತ್ತು. ಮಾರ್ಚ್ 17ರಂದು, ಟ್ರೆಶರಿ ಕಾರ್ಯದರ್ಶಿ ಸ್ಟಿವಾನ್ ಮುಂಚಿನ್ ಈ ಬಗ್ಗೆ ಎಚ್ಚರಿಸಿದ್ದರು. ಅಮೇಲೆ ಬರುತ್ತಿರುವ ಆರ್ಥಿಕ ಸುದ್ದಿಗಳು ತೀರಾ ಆತಂಕಕಾರಿಯಾಗಿವೆ. ಸರ್ಕಾರದ ಅದೇಶದಿಂದಾಗಿ ಹೆಚ್ಚೆಚ್ಚು ಜನ ಮನೆಯ ಒಳಗೇ ಇರುವಂತಾಗಿದೆ.


ಸಾಲದ ಗ್ಯಾರಂಟಿ ಮತ್ತು ನೇರವಾಗಿ ಹಣವನ್ನು ವರ್ಗಾಯಿಸುವುದು ಇಂತಹ ಕ್ರಮಗಳಿಂದ ದಿವಾಳಿತನ ತಪ್ಪಬಹುದು. ಜನ ಸಾಲದ ಬೇಪಾವತಿಯಿಂದ ತಪ್ಪಿಸಿಕೊಳ್ಳಬಹುದು. ಆದರೆ ಈ ಕ್ರಮಗಳು ನಿಂತು ಹೋಗಿರುವ ಸರಕು ಹಾಗೂ ಸೇವೆಗಳ ಉತ್ಪಾದನೆಯನ್ನು ತುಂಬಿಕೊಡುವುದಿಲ್ಲ. ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು. ಅದರಿಂದಾಗಿ ಜನರಿಗೆ ಇಂದು ಉತ್ಪಾದನೆ ಸಾಧ್ಯವಾಗುತ್ತಿಲ್ಲ. ನಮ್ಮ ಜೀವನ ಶೈಲಿಯನ್ನು ಕಾಪಾಡಿಕೊಳ್ಳಬೇಕಾದರೆ ಒಂದೆರಡು ತಿಂಗಳಿನಲ್ಲೇ ಹೆಚ್ಚಿನ ಜನ ಕೆಲಸಕ್ಕೆ ಹೋಗುವಂತಾಗಬೇಕು. ಅವರ ದಿನನಿತ್ಯದ ಚಟುವಟಿಕೆಗಳು ಪ್ರಾರಂಭವಾಗಬೇಕು. ಇದನ್ನು ನಾವು ವೈರಾಣು ಹರಡುವುದನ್ನು ನಿಯಂತ್ರಿಸಿಕೊಂಡೇ ಸಾಧಿಸಬೇಕು. ಅದಕ್ಕೆ ಬೇಕಾದ ನಿರ್ದಿಷ್ಟ ದಾರಿಯನ್ನು ಕಂಡುಕೊಳ್ಳಬೇಕು.

ಇದಕ್ಕೆ ಪರಸ್ಪರ ಪೂರಕವಾದ ಎರಡು ಕಾರ್ಯತಂತ್ರಗಳನ್ನು ಬಳಸಿಕೊಳ್ಳಬೇಕು. ಮೊದಲನೆಯದು ಹೆಚ್ಚು ಕರಾರುವಾಕ್ಕಾದ ಪರೀಕ್ಷೆ ಹಾಗೂ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದನ್ನು ಆಧರಿಸಿದ ಕಾರ್ಯತಂತ್ರ. ಎರಡನೆಯ ಕಾರ್ಯತಂತ್ರ ಅಂದರೆ ವೈರಾಣುವನ್ನು ಹರಡುವುದನ್ನು ತಡೆಯುವುದಕ್ಕೆ ವ್ಯಾಪಕವಾಗಿ ರಕ್ಷಣಾ ಸಾಧನವನ್ನು ಬಳಸುವುದು. ಈ ಕಾರ್ಯವಿಧಾನವನ್ನು ಅನುಸರಿಸಬೇಕಾದರೆ ಕೊರೋನಾ ವೈರಾಣುವನ್ನು ಪರೀಕ್ಷಿಸುವ ನಮ್ಮ ಸಾಮರ್ಥ್ಯ ಅಗಾಧವಾಗಿ ಹೆಚ್ಚಬೇಕು. ಮತ್ತು ವೈಯಕ್ತಿಕ ರಕ್ಷಣಾ ಸಾಧನಗಳ ಉತ್ಪಾದನೆ ದೊಡ್ಡ ಪ್ರಮಾಣದಲ್ಲಿ ಆಗಬೇಕು.

ವೈರಾಣು ಪರೀಕ್ಷೆಗೆ ವೈಜ್ಞಾನಿಕ ಅವಿಷ್ಕಾರ ಬೇಕಾಗಿಲ್ಲ. ಸಂಪನ್ಮೂಲ ಬೇಕು. ಇದನ್ನು ಹೆಚ್ಚಿಸಲು ನಾವು ಬದ್ಧರಾದರೆ ತಾಂತ್ರಿಕ ಅನ್ವೇಷಣೆಯಿಂದ ಖರ್ಚು ಕಡಿಮೆಯಾಗುತ್ತದೆ. ಮತ್ತು ಲಭ್ಯವಿರುವ ಪರೀಕ್ಷಾ ಕ್ರಮದ ವೇಗವೂ ಹೆಚ್ಚಾಗುತ್ತದೆ. ಹಲವು ಕಡೆಗಳಲ್ಲಿ ಸಾರ್ಸ್–ಕೋವ್–2 ಪರೀಕ್ಷಾ ಪ್ರಕ್ರಿಯೆಗೆ ಹಲವು ದಿನಗಳು ಬೇಕಾಗುತ್ತಿದೆ. ಸಿಲಿಕಾನ್ ವ್ಯಾಲಿ ಕಂಪೆನಿಯೊಂದಕ್ಕೆ 45 ನಿಮಿಷಗಳಲ್ಲಿ ಫಲಿತಾಂಶ ನೀಡುವ ಪರೀಕ್ಷಾ ಕಿಟ್ಟುಗಳನ್ನು ಮಾರಲು ಅನುಮತಿ ಕೊಡುವುದಾಗಿ ಆಹಾರ ಮತ್ತು ಔಷಧ ಆಡಳಿತವು ಇತ್ತೀಚೆಗೆ ತಿಳಿಸಿದೆ. ಇತರ ಉದ್ದಿಮೆಗಳು ಹಾಗೂ ಸಂಶೋಧನಾ ತಂಡಗಳು ಇಂತಹ ಕಿಟ್ಟುಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವ ಪರ್ಯಾಯ ಸಾಧ್ಯತೆಗಳನ್ನು ಪರಿಶೀಲಿಸುತ್ತಿವೆ. ಎಷ್ಟೋ ಆಸ್ಪತ್ರೆಗಳು ತಮ್ಮದೇ ಪರೀಕ್ಷಾ ಕ್ರಮಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿವೆ.

ಈ ಹೊಸ ಪರೀಕ್ಷಾ ವಿಧಾನಗಳ ಬೆಲೆ ಕಡಿಮೆಯಾಗಬಹುದು ಮತ್ತು ಎಲ್ಲರನ್ನು ಪರೀಕ್ಷಿಸುವುದಕ್ಕೆ, ಮರು ಪರೀಕ್ಷಿಸುವುದಕ್ಕೆ ಸಾಧ್ಯವಾಗಬಹುದು. ಕೇವಲ ರೋಗಲಕ್ಷಣ ಕಾಣಿಸಿಕೊಂಡವರನ್ನು ಮಾತ್ರವಲ್ಲ. ವೈರಾಣು ಪರೀಕ್ಷೆ ವ್ಯಾಪಕವಾಗಿ ಮಾಡುವುದರಿಂದ ರೋಗಲಕ್ಷಣಗಳು ಇನ್ನೂ ಕಾಣಿಸಿಕೊಂಡಿರದ, ಆದರೆ ಸೋಂಕನ್ನು ಹರಡುತ್ತಿರುವವರನ್ನು ಗುರುತಿಸಿ






ಪ್ರತ್ಯೇಕಿಸುವುದಕ್ಕೆ ಸಾಧ್ಯವಾಗುತ್ತದೆ.

ನಾವು ಸಾರ್ವಜನಿಕರನ್ನು ವಾರವಾರವೂ ಪರೀಕ್ಷಿಸುವುದಕ್ಕೆ ಪ್ರಾರಂಭಿಸಬಹುದು. ಆರೋಗ್ತ ನೋಡಿಕೊಳ್ಳುತ್ತಿರುವ ಹಾಗೂ ತುರ್ತು ಜವಾಬ್ದಾರಿ ನಿರ್ವಹಿಸುತ್ತಿರುವವರನ್ನು ಪ್ರತಿದಿನ ಪರೀಕ್ಷಿಸುವುದು ಒಳ್ಳೆಯದು. ಈಗ ಅದನ್ನು ಮಾಡುವ ಸಾಮರ್ಥ್ಯ ನಮ್ಮಲ್ಲಿಲ್ಲ. ಇದು ಸಾಧ್ಯವಾಗಬೇಕಾದರೆ ಕೊರೊನಾ ವೈರಾಣು ಪರೀಕ್ಷೆ ತಮ್ಮ ತುರ್ತುಗುರಿ ಎಂದು ಫೆಡರಲ್ ಸರ್ಕಾರ ಪರಿಗಣಿಸಬೇಕು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಕೊರೊನಾ ವೈರಾಣುವಿಗೆ ಸಂಬಂಧಿಸಿದಂತೆ ಅಂಟಿಬಾಡಿಗಳನ್ನು ಪರೀಕ್ಷಿಸಲು ಬೇಕಾದ ಟೆಸ್ಟ್‌ಗಳು ಸಿಗಲು ಪ್ರಾರಂಭವಾಗಿದೆ. ಚೇತರಿಸಿಕೊಂಡವರಿಗೆ ಇಮ್ಯುನಿಟಿಯಿದೆ ಎನ್ನುವುದು ಖಾತ್ರಿಯೆಂದಾದರೆ, ಈ ರೀತಿಯ ಪರೀಕ್ಷೆ ಮಾಡುವುದರಿಂದ ಯಾರಿಗೆ ವೈರಾಣುವಿಗೆ ತೆರೆದುಕೊಳ್ಳುವುದರಿಂದ ಅಪಾಯವಿಲ್ಲ ಅನ್ನುವುದು ತಿಳಿಯುತ್ತದೆ. ಹಾಗೆಯೇ ಅವರಿಂದ ಬೇರೆಯವರಿಗೆ ಅಪಾಯವಿಲ್ಲ ಅನ್ನುವುದು ಗೊತ್ತಾಗುತ್ತದೆ. ಅವರಿಗೆ ಮತ್ತೆ ಪರೀಕ್ಷೆ ಮಾಡಬೇಕಾದ ಅವಶ್ಯಕತೆಯೂ ಇರುವುದಿಲ್ಲ.

ಇಮ್ಯುನಿಟಿ ಬೆಳೆಸಿಕೊಂಡಿರುವವರು ಮತ್ತು ವೈರಾಣು ಸೋಂಕು ಇಲ್ಲದವರು ಕೆಲಸಕ್ಕೆ ಮರಳಬಹುದು. ತಮ್ಮ ಕೆಲಸಗಳನ್ನು ಮತ್ತೆ ಪ್ರಾರಂಭಿಸಿಕೊಳ್ಳಬಹುದು. ಉಳಿದವರಿಗೂ ಅಪಾಯದ ಸಾಧ್ಯತೆ ಕಡಿಮೆ.

ಅಂಟಿ ಬಾಡೀಸ್ ಇಲ್ಲದವರಿಗೆಲ್ಲಾ ರಕ್ಷಣಾ ಸಾಧನಗಳನ್ನು ಕೊಡಬೇಕು. ಬೇರೆಯವರಿಂದ ಅವರಿಗೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ವೈದ್ಯರು, ನರ್ಸುಗಳು ಹಾಗೂ ಸೋಂಕಿತರನ್ನು ನೋಡಿಕೊಳ್ಳುತ್ತಿರುವವರಿಗೆ ಸೋಂಕು ತಗಲುವ ಅಪಾಯ ಹೆಚ್ಚು. ಇಟಲಿಯ ಲೋಂಬಾರ್ಡಿಯ ಆರೋಗ್ಯ ಸಿಬ್ಬಂದಿಗಳಲ್ಲಿ ಶೇಕಡ 20ರಷ್ಟು ಜನಕ್ಕೆ ಸೋಂಕು ತಗುಲಿದೆ.

ವ್ಯಾಪಕವಾಗಿ ಪರೀಕ್ಷೆ ಮಾಡುವುದರಿಂದ ಸೋಂಕಿತ ರೋಗಿಗಳನ್ನು ಗುರುತಿಸುವುದಕ್ಕೆ ಸಹಾಯವಾಗುತ್ತದೆ. ಅಧಿಕಾರಿಗಳು ಅಂತಹವರನ್ನು ತಮ್ಮಷ್ಟಕ್ಕೆ ಪ್ರತ್ಯೇಕವಾಗಿ ಉಳಿಯುವುದಕ್ಕೆ ಪ್ರೋತ್ಸಾಹಿಸಬಹುದು. ಕೆಲವರು ಒಪ್ಪದಿರಬಹುದು. ಇನ್ನೂ ಕೆಲವರು ಖಾಯಿಲೆಯಿಂದ ತುಂಬಾ ಬಳಲಿರಬಹುದು. ಅವರಿಗೆ ತಕ್ಷಣ ಶುಶ್ರೂಷೆ ಬೇಕಾಗಬಹುದು. ಪ್ರತಿಯೊಬ್ಬ ಆರೋಗ್ಯ ರಕ್ಷಣೆಯ ಸಿಬ್ಬಂದಿಗೂ ಮಾಸ್ಕಗಳು, ಗ್ಲೋವ್ಸ್‌ಗಳು, ಗೌನುಗಳು ಹಾಗೂ ಮುಖ ಕವಚಗಳು ತಕ್ಷಣ ಸಿಗುವಂತಿರಬೇಕು.

ದಶಕಗಳ ಹಿಂದೆಯೇ ಎಪಿಡಮ್ಲಾಲಜಿಸ್ಟರು ಅಂತಹ ಸಾಧನಗಳನ್ನು ಹೇರಳವಾಗಿ ಸ್ಟಾಕ್ ಮಾಡಿಕೊಳ್ಳಲು ಎಚ್ಚರಿಸಿದ್ದರು. ಮತ್ತೆ ಮಹಾಮಾರಿ ಬಂದಾಗ ಬಳಸುವುದಕ್ಕೆ ಬೇಕಾಗುತ್ತದೆ ಎಂದು ತಿಳಿಸಿದ್ದರು. ನಾವು ಆ ರೀತಿಯ ಸಿದ್ಧತೆ ಮಾಡಿಕೊಳ್ಳುವುದರಲ್ಲಿ ಸೋತಿದ್ದೇವೆ. ಅದನ್ನು ಸರಿದೂಗಿಸಿಕೊಳ್ಳುವುದಕ್ಕೆ ಇಂದು ದೊಡ್ಡ ಪ್ರಮಾಣದಲ್ಲಿ ಅವುಗಳನ್ನು ಉತ್ಪಾದನೆ ಮಾಡಬೇಕು.

ಪೂರ್ಣ ರಕ್ಷಣಾ ಉಡುಪುಗಳು ಇಂದು ತುಂಬಾ ತುರ್ತಾಗಿ ಬೇಕು. ಈಗ ಇರುವ ಉಡುಪು ಬಳಸುವುದಕ್ಕೆ ಅಷ್ಟು ಸಲೀಸಲ್ಲ. ಹಾಕಿಕೊಳ್ಳುವುದು ಮತ್ತು ಬಿಚ್ಚುವುದು ಸ್ವಲ್ಪ ಪ್ರಯಾಸದ ಕೆಲಸ. ಸಾಂಪ್ರದಾಯಿಕ ಸಾಧನಗಳ ಉತ್ಪಾದನೆಯನ್ನು ಹೆಚ್ಚಿಸುವ ಸಂದರ್ಭದಲ್ಲಿ ಹೊಸ ಹಾಗೂ ಉತ್ತಮ ಮಾದರಿಯ ರಕ್ಷಾ ಸಾಧನಗಳನ್ನು ತ್ವರಿತವಾಗಿ ತಯಾರಿಸುವ ಕಾರ್ಯಕ್ರಮಕ್ಕೆ ಹಣ ಹೂಡಬೇಕು.

ಅದು ತಯಾರಾದೊಡನೆ ಅವಶ್ಯಕತೆ ಇರುವ ಕೆಲಸಗಾರರಿಗೆ ರಕ್ಷಣೆ ನೀಡಬೇಕು: ಮೊದಲಿಗೆ ಆರೋಗ್ಯ ಸಿಬ್ಬಂದಿಗಳಿಗೆ, ನಂತರ ಔಷಧದ ಅಂಗಡಿಯವರಿಗೆ, ಪೋಲಿಸ್ ಅಧಿಕಾರಿಗಳಿಗೆ, ಅಗ್ನಿಶಾಮಕ ದಳದವರಿಗೆ, ಸಾರ್ವಜನಿಕ ಅವಶ್ಯಕತೆಗಳನ್ನು ನೋಡಿಕೊಳ್ಳುತ್ತಿರುವವರಿಗೆ ಹಾಗೂ ಆಹಾರ ಸರಬರಾಜು ಮಾಡುತ್ತಿರುವವರಿಗೆ ಕೊಡಬೇಕು. ಅನಂತರ ಪ್ರತಿಯೊಬ್ಬರಿಗೂ ಅದು ಸಿಗುವಂತಾಗಬೇಕು.

ಸೋಂಕಿನ ಪ್ರಮಾಣ ಹೆಚ್ಚಾಗಿ ಇರುವ ತನಕ, ರಕ್ಷಣಾ ಸಾಧನಗಳು ದಿನಸಿ ಅಂಗಡಿಗಳಲ್ಲಿ ಕೆಲಸ ಮಾಡುವ ಎಲ್ಲರಿಗೂ ಮತ್ತು ಅಲ್ಲಿ ವ್ಯಾಪಾರಕ್ಕೆ ಬರುವ ಎಲ್ಲರಿಗೂ ಧರಿಸುವುದಕ್ಕೆ ಸಲೀಸಾಗಿರುವಂತೆ ಇರಬೇಕು. ಇದಕ್ಕೆ ಎರಡು ತಿಂಗಳ ಒಳಗೆ ಶೇಕಡ 25ರಷ್ಟು ಕೆಲಸಗಾರರಿಗೆ ಬೇಕಾದಷ್ಟು ರಕ್ಷಣಾ ಉಡುಪನ್ನು ಮತ್ತು ನಾಲ್ಕುತಿಂಗಳಲ್ಲಿ ಶೇಕಡ 75ರಷ್ಟು ಕೆಲಸಗಾರ–ರಿಗೆ ಬೇಕಾಗುವಷ್ಟನ್ನು ಕೊಡುತ್ತೇವೆ ಮಹತ್ವಾಕಾಂಕ್ಷೆಯ ಒಂದು ಗುರಿಯನ್ನು ಇಟ್ಟುಕೊಳ್ಳಬೇಕು.

ಆರ್ಥಿಕ ಹಿಂಜರಿಕೆಯನ್ನು ತಡೆಯುವುದಕ್ಕೆ ಸಾಂಪ್ರದಾಯಿಕ ವಿತ್ತೀಯ ಕ್ರಮವನ್ನು ಅನುಸರಿಸಬೇಕಾದರೆ ಸರ್ಕಾರ ಟ್ರಿಲಿಯನ್ ಗಟ್ಟಲೆ ಡಾಲರ್ ಖರ್ಚು ಮಾಡಬೇಕಾಗುತ್ತದೆ. ರಕ್ಷಣಾ ಕವಚಗಳನ್ನು ಒದಗಿಸುವುದಕ್ಕೆ ಮತ್ತು ವ್ಯಾಪಕವಾಗಿ ಪರೀಕ್ಷೆ ಮಾಡುವುದಕ್ಕೆ ಅಷ್ಟೊಂದು ದುಡ್ಡು ಬೇಕಾಗುವುದಿಲ್ಲ. ಅದು ಅರ್ಥಿಕತೆಯನ್ನು ಪುನರ್ಚೇತನಗೊಳಿಸುವುದಕ್ಕೆ ರಿಯಾಯಿತಿಯನ್ನು ತೋರಿಸುವುದು, ಹಣ ವರ್ಗಾಯಿಸುವುದು ಇತ್ಯಾದಿ ಕ್ರಮಗಳಿಗಿಂತ ಒಳ್ಳೆಯ ಹಾದಿ.



ಮಾರುಕಟ್ಟೆಯ ಆರ್ಥಿಕತೆಯಲ್ಲಿ ಸ್ಥಿರ ಬೇಡಿಕೆಯನ್ನು ಪೂರೈಸುವುದಕ್ಕೆ ಉದ್ದಿಮೆಗಳು ಸಜ್ಜಾಗಿರುತ್ತವೆ. ಆದರೆ ಬಿಕ್ಕಟ್ಟು ಬರಬಹುದು ಅನ್ನುವ ನಿರೀಕ್ಷೆಯಲ್ಲಿ ಅದು ದಾಸ್ತಾನನ್ನು ಪೇರಿಸಿಕೊಳ್ಳುವುದಿಲ್ಲ. ಈಗ ನಮಗೆ ಕೊರತೆ ಇದೆ. ನಾವು ಅವರು ಉತ್ಪಾದನೆಯನ್ನು ಎರಡರಷ್ಟು, ನಾಲ್ಕರಷ್ಟು ಹೆಚ್ಚಿಸಬೇಕು ಅನ್ನುತ್ತೇವೆ.  ಆದರೆ ಅವರು ಯಂತ್ರಗಳನ್ನು ಕೊಳ್ಳುವುದಕ್ಕೆ ಬಯಸುವುದಿಲ್ಲ. ಒಮ್ಮೆ ಕೊರತೆ ಹೋಗಿ, ಬೇಡಿಕೆ ಮಾಮೂಲಿಯಾದರೆ ಆ ಯಂತ್ರಗಳಿಗೆ ಕೆಲಸ ಇರುವುದಿಲ್ಲ. ಗೇಟ್ಸ್ ಫೌಂಡೇಷನ್ ಅಂತಹ ಸಂಸ್ಥೆಗಳು ನೀಡುವ ಕೊಡುಗೆ ಅನುಕೂಲವಾಗುತ್ತದೆ. ಆದರೆ ಈ ಬಿಕ್ಕಟ್ಟಿನ ಸಂದರ್ಭದಲ್ಲಿ ನಮ್ಮ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಕೇವಲ ಫೆಡರಲ್ ಸರ್ಕಾರಕ್ಕೆ ಮಾತ್ರ ಸಾಧ್ಯ. ಅದಕ್ಕಷ್ಟೇ ದೊಡ್ಡ ಪ್ರಮಾಣದ ಕೈಗಾರಿಕಾ ಸಂಘಟನೆಯನ್ನು ಆಯೋಜಿಸುವುದಕ್ಕೆ ಮತ್ತು ಅದಕ್ಕೆ  ಹಣ ಹೂಡುವುದಕ್ಕೆ ಸಾಧ್ಯ.

ದೀರ್ಘ ಕಾಲದಲ್ಲಿ ಇದಕ್ಕಿಂತ ಉತ್ತಮ ಮಾರ್ಗಗಳು ತೆರೆದುಕೊಳ್ಳಬಹುದು. ಉದಾಹರಣೆಗೆ ಲಸಿಕೆ ಅಥವಾ ಪರಿಣಾಮಕಾರಿಯಾದ ಔಷಧಿಗಳು ಬರಬಹುದು. ಒಂದು ಹಂತದಲ್ಲಿ ಬಹುತೇಕ ಜನರಿಗೆ ರೋಗನಿರೋಧಕ ಶಕ್ತಿ ಬಂದು ಉಳಿದವರಿಗೂ ಸೋಂಕು ತಗಲುವ ಸಾಧ್ಯತೆಗಳು ಕಮ್ಮಿಯಾಗಬಹುದು. ಅಂತಹ ಸಾಮೂಹಿಕ ರೋಗನಿರೋಧಕ ಶಕ್ತಿ ಬೆಳೆದ ಸಂದರ್ಭದಲ್ಲಿ ಕೊರೋನಾ ವೈರಾಣುವನ್ನು ಹೆಚ್ಚು ಸಲೀಸಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗಬಹುದು. ಅದು ದೊಡ್ಡ ಭೀತಿಯಾಗಿ ಉಳಿಯದೇ ಇರಬಹುದು. ಆದರೆ ನಾವು ಅದನ್ನು ನಿರೀಕ್ಷಿಸುತ್ತಾ ಅದಕ್ಕಾಗಿ ಕಾಯುತ್ತಾ ಕೂರುವ ಸ್ಥಿತಿಯಲ್ಲಿಲ್ಲ. ಜಾನ್ ಮೇನಾರ್ಡ ಕೇನ್ಸ್ ಅವನ ಪ್ರಖ್ಯಾತ ಮಾತಿನಂತೆ ದೀರ್ಘಾವಧಿಯಲ್ಲಿ ನಾವೆಲ್ಲಾ ಸತ್ತಿರುತ್ತೇವೆ. ವೈರಾಣುವನ್ನು ನಿಯಂತ್ರಿಸುವುದಕ್ಕೆ ಸಧ್ಯಕ್ಕೆ ನಾವು ಅನುಸರಿಸುತ್ತಿರುವ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಕ್ರಮವನ್ನೇ ಮುಂದಿನ 12ರಿಂದ 18ತಿಂಗಳು ಅನುಸರಿಸಿದರೆ ನಮ್ಮಲ್ಲಿ ಹೆಚ್ಚಿನವರು ಬದುಕಿರುತ್ತೇವೆ, ನಿಜ. ಆದರೆ ನಮ್ಮ ಆರ್ಥಿಕತೆ ಸತ್ತು ಹೋಗಿರುತ್ತದೆ.

# ಶ್ರೀಮಂತರನ್ನು ಎಷ್ಟು ಕೇಳಬೇಕು?

ಸುಗತ ಶ್ರೀನಿವಾಸರಾಜು

ಮುಂಬೈ ಮಿರರ್‌ನಲ್ಲಿ ಪ್ರಕಟವಾದ ಸುಗತ ಶ್ರೀನಿವಾಸರಾಜು ಅವರ ಇಂಗ್ಲೀಷ್ ಲೇಖನದ ಅನುವಾದ

ಇವೆಲ್ಲಾ ಅಲಿ ಬಾಬಾ ಗುಂಪಿನ ಜಾಕ್ ಮ ಅವರಿಂದ ಪ್ರಾರಂಭವಾಯಿತು. ತನ್ನ ದತ್ತಿ ಸಂಸ್ಥೆ ಏಷ್ಯಾದ ಕೆಲವು ದೇಶಗಳಿಗೆ 18 ಲಕ್ಷ ಮಾಸ್ಕ್‌ಗಳನ್ನು 2.1 ಲಕ್ಷ ಟೆಸ್ಟ್ ಕಿಟ್‌ಗಳನ್ನು, 36,000 ರಕ್ಷಾಕವಚಗಳನ್ನು, ಜೊತೆಗೆ ವೆಂಟಿಲೇಟರ್, ಥರ್ಮಾಮೀಟರ್ ಇವೆಲ್ಲವನ್ನು ಕೊಡುವುದಾಗಿ ಟ್ವೀಟ್ ಮಾಡಿದ. ಆ ಪಟ್ಟಿಯಲ್ಲಿ ಭಾರತ ಇರಲಿಲ್ಲ. ಭಾರತಾದ್ಯಂತ ಲಾಕ್ ಡೌನ್ ಘೋಷಿಸಿದ್ದು ಮಾರ್ಚ್ 24ರಂದು. ಈ ಟ್ವೀಟ್ ಮಾಡಿದ್ದು ಒಂದೆರಡು ದಿನಗಳ ಮುನ್ನ.

ಇದಕ್ಕೆ ಹಲವು ರೀತಿಯ ಪ್ರತಿಕ್ರಿಯೆಗಳು ಬಂದವು. ಮೊದಲನೆಯದು ಆ ಪಟ್ಟಿಯಲ್ಲಿ ಭಾರತ ಯಾಕಿಲ್ಲ, ಅಂತ. ಎರಡನೆಯದು ಭಾರತದ ಕೋಟ್ಯಾಧಿಪತಿಗಳು ಯಾಕೆ ಉದಾರತನ ತೋರುತ್ತಿಲ್ಲ ಅಂತ ಕೇಳಿ ಅವರ ಆತ್ಮಸಾಕ್ಷಿಗೆ ಮನವಿ ಮಾಡಿಕೊಂಡವು. 'ಭಿಕ್ಷಾ'ಪಾತ್ರೆಯನ್ನು ಹಿಡಿದು ಹೋದವರನ್ನು ಅವಮಾನಿಸಿ ಹುಸಿ ಹೆಮ್ಮೆಯ ಪ್ರದರ್ಶನವೂ ನಡೆಯಿತು. ಈ ಮೂರು ಅಭಿಪ್ರಾಯದಲ್ಲೂ ಒಂದು ಸಮಾನ ಅಂಶ ಇದೆ. ಅದನ್ನು ಸ್ವಲ್ಪ ಒರಟಾಗಿ ಹೇಳುವುದಾದರೆ ಶ್ರೀಮಂತರು ನಮ್ಮನ್ನು ಉಳಿಸಬಹುದೋ ಏನೋ ಎಂಬ ಭರವಸೆ, ವಿಶ್ವಾಸ. ಆಮೇಲೆ ಲಾಕ್‌ಡೌನ್ ಚಾಲೂ ಆದ ಮೇಲೆ ಹಲವು ಭಾರತೀಯ ಕೋಟ್ಯಾಧಿಪತಿಗಳು ಕೋವಿಡ್–19ಕ್ಕೆ ತಮ್ಮ ಕೊಡುಗೆಯನ್ನು ಘೋಷಿಸಿದರು. ಕೆಲವು ಸುಳ್ಳು ಸುದ್ದಿಗಳೂ ಹರಡಿಕೊಂಡವು. ಅವರು ಕೊಟ್ಟ ಕೊಡುಗೆಯನ್ನು ಒಂದಿಷ್ಟು ಉತ್ಪ್ರೇಕ್ಷಿಸಿ ಕೆಲವು ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳೂ ಹರಿದಾಡಿದವು. ಒಟ್ಟಾರೆ ದೇಣಿಗೆಯ ಸ್ಪರ್ಧೆ ಪ್ರಾರಂಭವಾದ ಹಾಗೆ ಭಾಸವಾಯಿತು. ಬಿಲಿಯನೇರುಗಳು ಒಳ್ಳೆಯವರಾಗಿ ಕಾಣಿಸಿಕೊಳ್ಳುವ ಪ್ರಯತ್ನ ಆರಂಭವಾಯಿತು. ಒಂದು ಗುಂಪಿನ ಜನರನ್ನು ಓಲೈಸುವುದಕ್ಕೆ ಪ್ರಾರಂಭಿಸಿದರು.

ಈ ಚರ್ಚೆ ಒಟ್ಟಾರೆಯಾಗಿ ಕೆಲವು ಪ್ರಶ್ನೆಗಳನ್ನು ಮುನ್ನೆಲೆಗೆ ತರುತ್ತವೆ. ಪ್ರತಿಬಾರಿ ಬಿಕ್ಕಟ್ಟು ಬಂದಾಗಲೂ ಸಹಾಯಕ್ಕಾಗಿ ನಾವೇಕೆ ಕೋಟ್ಯಾಧಿಪತಿಗಳ ಮೊರೆಹೋಗುತ್ತೇವೆ? ಅವರು ನಮ್ಮ ಋಣ ತೀರಿಸಬೇಕೆನೋ ಎಂಬಂತೆ ಅವರನ್ನು ಏಕೆ ಒತ್ತಾಯಿಸುತ್ತೇವೆ? ಉದ್ಯಮಪತಿಗಳು, ಕೋಟ್ಯಾಧಿಪತಿಗಳು ಪರ್ಯಾಯ ಸರ್ಕಾರ ಎಂದು ನಾವು ಭಾವಿಸಿದ್ದೇವೆಯೇ? ಚುನಾಯಿತ ಸರ್ಕಾರಕ್ಕಿಂತ ಕಾರ್ಪೋರೇಷನ್ನುಗಳು ಹೆಚ್ಚು ವಿಶ್ವಾಸಾರ್ಹ ಎಂದುಕೊಂಡಿದ್ದೇವೆಯೇ? ಸರ್ಕಾರಕ್ಕೆ ತುರ್ತಾಗಿ, ನಿಷ್ಪಕ್ಷಪಾತದಿಂದ ನಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದು ನಮ್ಮ ಅಭಿಪ್ರಾಯವೇ? ಸರ್ಕಾರಕ್ಕೆ ಯೋಗ್ಯತೆ ಮತ್ತು ಕಾರ್ಯಪಟುತ್ವ ಇಲ್ಲ ಎಂದು ಕೊಂಡಿದ್ದೇವೆಯೇ?

ಬಿಲಿಯನೇರುಗಳು ಸಂಕಷ್ಟದ ಸಮಯದಲ್ಲಿ ಭರವಸೆಯ ಸಾಮ್ರಾಟರಾಗಿ ಕಾಣುತ್ತಾರೆ. ಆದರೆ ಸಾಮಾನ್ಯ ಸನ್ನಿವೇಶಗಳಲ್ಲಿ ಅವರನ್ನು ಕಪ್ಪುಹಣದ ಸರದಾರರು, ಸಾಲದ ಮೂಟೆ ಹೊತ್ತು ಬ್ಯಾಂಕುಗಳನ್ನು ಮುಳುಗಿಸುತ್ತಿರುವ ವೀರರು, ಅಧಿಕಾರಸ್ಥರೊಂದಿಗೆ ಅನ್ಯೋನ್ಯತೆಯನ್ನು ಬೆಳೆಸಿಕೊಂಡಿರುವ ಬಂಡವಾಳಶಾಹಿಗಳು ಎಂದು ಸಿನಿಕತನದಿಂದ ನೋಡುತ್ತೇವೆ. ಇದೊಂದು ವಿಪರ್ಯಾಸ ಅಲ್ಲವೇ? ಇದೆಂತಹ ವಿಸ್ಮೃತಿ ನಮ್ಮದು!

ಈ ಚರ್ಚೆಯನ್ನು ತುಕ್ಕು ಹಿಡಿದ ಮಾರ್ಕ್ಸ್‌ವಾದಿ ಗತಿತಾರ್ಕಿಕವಾದದ ಜೊತೆಗೆ ಗೋಜಲು ಮಾಡಿಕೊಳ್ಳುವುದು ಬೇಡ. ಆದರೆ ಇದು ನಮ್ಮ ಪ್ರಜಾಸತ್ತಾತ್ಮಕ ಜಡತ್ವವನ್ನು ಪರೀಕ್ಷಿಸಲು ನೆರವಾಗಬೇಕು. ಇಂತಹ ಬಿಕ್ಕಟ್ಟಿನ ಹೊತ್ತಿನಲ್ಲಿ ಕೆಲವು ವ್ಯಕ್ತಿಗಳನ್ನು ಆಶ್ರಯಿಸುವ ಬದಲು, ಅವರಿಗೆ ಋಣಿಯಾಗಿರುವ ಬದಲು, ನಮ್ಮ ಸರ್ಕಾರಗಳನ್ನು ಇನ್ನೂ ಹೆಚ್ಚಿನ ಜನಪರ ಕಲ್ಯಾಣ ಕ್ರಮಗಳಿಗಾಗಿ ಒತ್ತಾಯಿಸಬೇಕಲ್ಲವೇ? ಅಮೆರಿಕಾ ಮತ್ತು ಇಂಗ್ಲೆಂಡುಗಳಲ್ಲಿ ವೈಯಕ್ತಿಕ ಕೊಡುಗೆಗಳನ್ನು ಕುರಿತು ಯಾರೂ ಹೀಗೆ ತುತ್ತೂರಿ ಊದುವುದಿಲ್ಲ, ಆಡಂಬರದ ಪ್ರದರ್ಶನವನ್ನೂ ಮಾಡುವುದಿಲ್ಲ. ಆದರೆ ರಾಷ್ಟ್ರೀಯ ತುರ್ತು ಸಂದರ್ಭಗಳಲ್ಲಿ ಖಾಸಗಿಯವರನ್ನು ಸರ್ಕಾರಗಳು ನಿಯಂತ್ರಿಸುತ್ತವೆ. ಇತ್ತೀಚಿಗೆ ಅಧ್ಯಕ್ಷ ಟ್ರಂಪ್ ಡಿಫೆನ್ಸ್ ಪ್ರೊಡಕ್ಷನ್ ಕಾಯಿದೆಯನ್ನು ಜಾರಿಗೆ ತಂದು, ಜನರಲ್ ಮೋಟಾರ್ಸ್ ಕಂಪನಿಯನ್ನು 1,00,000 ವೆಂಟಿಲೇಟರುಗಳನ್ನು ತಯಾರಿಸುವಂತೆ ಒತ್ತಾಯಿಸಿದ. ಇಂಗ್ಲೆಂಡಿನ ಟೋರಿ ಸರ್ಕಾರ ತನ್ನ ಆರ್ಥಿಕ ಸಾಂಪ್ರದಾಯಿಕ ನಿಲುವುಗಳನ್ನು ಬದಿಗೆ ಸರಿಸಿ ಜನರ ಕ್ಷೇಮಾಭಿವೃದ್ಧಿಯ ಅವಶ್ಯಕತೆಗಳನ್ನು ಪೂರೈಸುವಂತೆ ಖಾಸಗಿ ಕಂಪೆನಿಗಳಿಗೆ ಆಜ್ಞೆ ಮಾಡಿದೆ.



ಸರ್ಕಾರದೊಳಗೂ ನಮ್ಮನ್ನು ರಕ್ಷಿಸಬಲ್ಲ ಸೂಪರ್‌ಮ್ಯಾನ್‌ಗಳನ್ನು ಪ್ರಧಾನ ಮಂತ್ರಿಗಳಲ್ಲೋ ಅಥವಾ ಮುಖ್ಯಮಂತ್ರಿಗಳಲ್ಲೋ ಹುಡುಕುತ್ತಿರುತ್ತೇವೆ. ಇಡೀ ವ್ಯವಸ್ಥೆಯನ್ನು ಬಳಸಿಕೊಳ್ಳುವುದಿಲ್ಲ. ಸರ್ಕಾರಿ ವ್ಯವಸ್ಥೆ ಎನ್ನುವುದು ಹೆಚ್ಚು ವ್ಯಾಪಕವಾದ ಮತ್ತು ತೆರಿಗೆದಾರರ ಹೇರಳ ಹಣದಿಂದ ಕಟ್ಟಿ ನಡೆಸುತ್ತಿರುವ ವ್ಯವಸ್ಥೆ. ಉದಾಹರಣೆಗೆ ಈಗ ಕೆಲಸ ಮಾಡುವುದಕ್ಕೆ ಅತ್ಯುತ್ತಮ ಜಾಲ ಅಂದರೆ ನಮ್ಮ ಪಂಚಾಯಿತಿಗಳು ಮತ್ತು ಮುನಿಸಿಪಾಲಿಟಿಗಳು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಂಚಾಯತ್ ಮಂತ್ರಿಗಳು ಈಗ – ವೈದ್ಯಕೀಯ, ಆರ್ಥಿಕ ಹಾಗೂ ಮಾನವೀಯ ನೆರವನ್ನು ಹೊಂದಿಸಿಕೊಂಡು ಸರಿಯಾದ ಕ್ರಮದಲ್ಲಿ ಕೆಲಸ ಮಾಡುವುದರಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು. ನಮ್ಮ ಅಗತ್ಯಗಳ ಮತ್ತು ವಿಚಾರಗಳ ಪಟ್ಟಿ ನಮ್ಮ ಅಧಿಕಾರ ವಿಕೇಂದ್ರೀಕರಣದ ಮೂಲ ಘಟಕಗಳಾದ ಗ್ರಾಮಪಂಚಾಯಿತಿ ಸಂಸ್ಥೆಗಳಿಂದ ನಗರಗಳಲ್ಲಿ ಮತ್ತು ರಾಜಧಾನಿಗಳಲ್ಲಿ ಸ್ಥಾಪಿತವಾಗಿರುವ ವಾರ್ ರೂಮ್‌ಗಳಿಗೆ ಹರಿದಿದ್ದರೆ ಉತ್ತಮವಿತ್ತು. ನಮ್ಮಲ್ಲಿ ದೇಶಾದ್ಯಂತ 2.6 ಲಕ್ಷ ಪಂಚಾಯತ್ ಸಂಸ್ಥೆಗಳು ಇವೆ. 31 ಲಕ್ಷ ಚುನಾಯಿತ ಸದಸ್ಯರಿದ್ದಾರೆ. ಅವರಲ್ಲಿ ಸುಮಾರು 13.75 ಲಕ್ಷ ಮಹಿಳಾ ಪ್ರತಿನಿಧಿಗಳು ಇದ್ದಾರೆ. ಇಷ್ಟೊಂದು ಸಮರ್ಥವಾದ ಬಲಶಾಲಿಯಾದ ವ್ಯವಸ್ಥೆ ಈ ಕ್ಷಣದಲ್ಲಿ ನಮಗೆ ಲಭ್ಯವಿದೆ. ಅಷ್ಟೆ ಅಲ್ಲ ಅದು ತಕ್ಕ ಮಟ್ಟಿಗೆ ಕೆಲಸ ಮಾಡುತ್ತಿದೆ. ಅದನ್ನು ಬಿಟ್ಟು ನಾವು ಪ್ರಧಾನಮಂತ್ರಿಗಳನ್ನು, ಮುಖ್ಯಮಂತ್ರಿಗಳನ್ನು, ಕೋಟ್ಯಾಧಿಪತಿಗಳನ್ನು ಕೇಂದ್ರ ಮಾಡಿಕೊಂಡಿರುವ ತಾತ್ಕಾಲಿಕ ವ್ಯವಸ್ಥೆಯನ್ನು ಯಾಕೆ ಆರಿಸಿಕೊಳ್ಳುತ್ತಿದ್ದೇವೆ?

ಪಂಚಾಯತ್ ರಾಜ್ ಕಾಯ್ದೆಯನ್ನು ಕರ್ನಾಟಕದಲ್ಲಿ ರಾಮಕೃಷ್ಣ ಹೆಗ್ಗಡೆಯವರ ಸರ್ಕಾರ ಅನುಷ್ಠಾನಗೊಳಿಸಿತು. ರಾಜೀವ್ ಗಾಂಧಿ ಇದರಿಂದ ಪ್ರೇರಿತರಾಗಿ ಅದನ್ನು ಕೇಂದ್ರದ ಕಾನೂನಾಗಿಸಬೇಕೆಂದು ತೀರ್ಮಾನಿಸಿದರು. ಕೊನೆಗೆ ಅದು ನರಸಿಂಹರಾವ್ ಅವರ ಕಾಲದಲ್ಲಿ 73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಯಿಂದ ರಾಷ್ಟ್ರದಾದ್ಯಂತ ಜಾರಿಗೆ ಬಂದಿತು. ಈಗ ಅದಕ್ಕೆ ಸುಮಾರು 25 ವರ್ಷಗಳಾಗಿದೆ. ಅದರೆ ಅದನ್ನು ನಾವು ಸಮರ್ಪಕವಾಗಿ ಬಳಸಿಕೊಂಡಿದ್ದೇ ಇಲ್ಲ. ಕೇಂದ್ರೀಯ ಕಾಯ್ದೆಯ ಪ್ರಕಾರ ಈ ತಳಮಟ್ಟದ ಆಡಳಿತ ಸಂಸ್ಥೆಗಳನ್ನು ಎಲ್ಲಾ ರಾಜ್ಯಗಳು ಸ್ಥಾಪಿಸಲೇಬೇಕು. ಅದು ಕಡ್ಡಾಯ. ಆದರೆ ಸರ್ಕಾರದ ಯಾವ ಕೆಲಸಗಳನ್ನು ಅವುಗಳಿಗೆ ವರ್ಗಾಯಿಸಬೇಕು ಅನ್ನುವುದು ರಾಜ್ಯದ ಶಾಸಕಾಂಗ ಸಭೆಗೆ ಬಿಟ್ಟ ವಿಷಯ. ಕೇರಳದಂತಹ ಕೆಲವು ರಾಜ್ಯಗಳು ಈ ವಿಷಯದಲ್ಲಿ ಒಳ್ಳೆಯ ಕೆಲಸ ಮಾಡಿವೆ. ಆದರೆ ಹೆಚ್ಚಿನ ಸರ್ಕಾರಗಳು ಶಾಸಕಕೇಂದ್ರಿತ (ಎಂಎಲ್ಎ) ವ್ಯವಸ್ಥೆಯನ್ನೇ ಸೃಷ್ಟಿಸಿದವು. ಪಂಚಾಯ್ತಿಗಳನ್ನು ರಾಜಕೀಯ ಪಕ್ಷಗಳ ಅಧಿಕಾರ ಮತ್ತು ಪೋಷಣೆಯ ಜಾಲವಾಗಿ ಮಾಡಿಕೊಂಡವು.


ಉದಾಹರಣೆಗೆ ಕರ್ನಾಟಕದಲ್ಲಿ 2004ರಲ್ಲಿ ಧರ್ಮಸಿಂಗ್ ಸರ್ಕಾರ ಒಂದು ದೊಡ್ಡ ಕ್ರಾಂತಿಕಾರಿ ಹೆಜ್ಜೆಯನ್ನಿಟ್ಟಿತು. ಪಂಚಾಯತ್ ಸಂಸ್ಥೆಗಳಿಗೆ ತೆರಿಗೆ ಸಂಗ್ರಹಣೆ ಹಾಗೂ ಅದನ್ನು ಪರಿಷ್ಕರಿಸುವ ಅಧಿಕಾರವನ್ನು ಸೇರಿದಂತೆ ಗರಿಷ್ಠ ಅಧಿಕಾರವನ್ನು ನೀಡಿತು. ಮೊಟ್ಟಮೊದಲ ಬಾರಿಗೆ ಈ ಸಂಸ್ಥೆಗಳಿಗೆ ನೇರವಾಗಿ 3000 ಕೋಟಿ ರೂಪಾಯಿಗಳನ್ನು ವರ್ಗಾಯಿಸಲಾಯಿತು. ಆದರೆ ಸಿಂಗ್ ಅಧಿಕಾರ ಕಳೆದುಕೊಂಡ ತಕ್ಷಣ ಎಲ್ಲವೂ ಬದಲಾಯಿತು. ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಬದ್ಧತೆಯ ಕೊರತೆಯಿಂದ ಕೂಡಿದ ಶಾಸಕರನ್ನು ತೃಪ್ತಿಪಡಿಸುವ ದೃಷ್ಟಿಯಿಂದ ಬದಲಾವಣೆಗಳನ್ನು ಹಿಂತೆಗೆದುಕೊಂಡವು. ರಾಜ್ಯ ಸರ್ಕಾರಗಳು ಅಧಿಕಾರದಲ್ಲಿ ಮುಂದುವರಿಯಲು ಚಂಚಲ ಸ್ವಭಾವದ ಶಾಸಕರ ನಿಷ್ಠೆ ಅವಶ್ಯಕವಾಗಿತ್ತು. ಈಗ ಮಹಾಮಾರಿ ಆಕ್ರಮಿಸಿಕೊಂಡಿರುವ ಈ ಸಂದರ್ಭದಲ್ಲಿ ಶಾಸಕರು ತಾವು ಆಹಾರದ ಪ್ಯಾಕೆಟ್ಟುಗಳು ಮತ್ತು ಅವಶ್ಯಕ ವಸ್ತುಗಳನ್ನು ವಿತರಿಸುತ್ತಿರುವ ವಿಡಿಯೋಗಳನ್ನು ಸಿದ್ಧಪಡಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದಾರೆ. ಇದು ಪಂಚಾಯತಿಗಳ ಕೆಲಸವಾಗಬೇಕಿತ್ತು. ಶಾಸಕರದ್ದಲ್ಲ.

ಒಮ್ಮೆ ಮಹಾಮಾರಿ ಹೋದ ಮೇಲೆ ಜನ ಅಧಿಕಾರವನ್ನು ವಿಕೇಂದ್ರೀಕರಿಸಲು ಒತ್ತಾಯಿಸುತ್ತಾರೆ ಎಂದು ಆಶಿಸಬೇಕು. ಅದು ಒಳ್ಳೆಯದು ಅನ್ನುವ ಕಾರಣಕ್ಕೆ ಅಲ್ಲ. ಕಾರ್ಪೋರೇಟ್ ಪರಿಭಾಷೆಯಲ್ಲಿ ಹೇಳುವುದಾದರೆ ಅದೊಂದು ಪೂರೈಕೆಯ ಕ್ರಮಬದ್ಧ ನಿರ್ವಹಣೆಯ ಮಾದರಿಯ ಒಳ್ಳೆಯ ವಿಧಾನ ಎನ್ನುವ ಕಾರಣಕ್ಕಲ್ಲ. ಮುಂದಿನ ಬಿಕ್ಕಟ್ಟಿಲ್ಲಿ ನಾವು ಬದುಕಿ ಉಳಿಯಬೇಕಾದರೆ ಅದು ನಮಗೆ ಬೇಕೇ ಬೇಕು. ಪಂಚಾಯತಿಗಳು ನಮ್ಮ ಭರವಸೆಯ ಸಾಮ್ರಾಜ್ಯಗಳಾಗಬೇಕು. ಅದನ್ನೇ ನಾವು ನೆಚ್ಚಿಕೊಳ್ಳಬೇಕು. ಪ್ರಧಾನಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಶಾಸಕರಾಗಲಿ, ಕೋಟ್ಯಾಧಿಪತಿಗಳಾಗಲಿ ಅಲ್ಲ. ನಮ್ಮ ಋಣ ಸಂದಾಯವಾಗಬೇಕಾಗಿರುವುದು ನಮ್ಮ ಸಮುದಾಯಗಳಿಗೇ ಹೊರತು, ಉದ್ಧಾರಕರೆಂಬ ಪೋಷಾಕು ತೊಟ್ಟವರಿಗಲ್ಲ.



# ಇದು ಬೇರೆ ರೀತಿಯ ಆಪತ್ತು

## ರಾಬರ್ಟ್ ಶಿಲ್ಲರ್




ರಾಬರ್ಟ್ ಶಿಲ್ಲರ್ ಅವರಿಗೆ 2013ರಲ್ಲಿ ಅರ್ಥಶಾಸ್ತ್ರದಲ್ಲಿ ನೋಬೆಲ್ ಬಹುಮಾನ ಬಂದಿತ್ತು. ಅವರು ಹಣಕಾಸು ಗುಳ್ಳೆಗಳನ್ನು ಕುರಿತಂತೆ ಮಾಡಿದ ಅಧ್ಯಯನಕ್ಕಾಗಿ ಈ ಪ್ರಶಸ್ತಿ ಲಭಿಸಿತ್ತು. ಅವರು ಇತ್ತೀಚೆಗೆ ಆರ್ಥಿಕತೆಯನ್ನು ಪ್ರಭಾವಿಸುವ ಕಥನಗಳು ಹಾಗೂ ಜನಪ್ರಿಯ ಕಥೆಗಳನ್ನು ಕುರಿತು ಅಧ್ಯಯನ ಮಾಡುತ್ತಿದ್ದಾರೆ. ಅದನ್ನು ಕುರಿತಂತೆ ಅವರು ನೆರೇಟಿವ್ ಎಕಾನಮಿಕ್ಸ್ ಅನ್ನುವ ಪುಸ್ತಕ ರಚಿಸಿದ್ದಾರೆ. ಇತ್ತೀಚೆಗೆ ಕ್ವಾರ್ಟ್ಸ್ ಪತ್ರಿಕೆಗೆ ನೀಡಿದ ಸಂದರ್ಶನದ ಕನ್ನಡದ ಅನುವಾದವನ್ನು ಇಲ್ಲಿ ನೀಡುತ್ತಿದ್ದೇವೆ.

**ಕ್ವಾರ್ಟ್ಸ್: ಆರ್ಥಿಕ ಪಥನದಲ್ಲಿ ಕಥನಗಳ ಮಹತ್ವನ್ನು ಕುರಿತು ಬರೆದಿದ್ದಿರಿ. ಈಗ ಆ ಅಂಶ ಹೇಗೆ ಕೆಲಸ ಮಾಡುತ್ತಿದೆ?**

ಶಿಲ್ಲರ್: ಅದನ್ನು ಹೇಳುವುದಕ್ಕೆ ಇದು ತುಂಬಾ ಬೇಗ ಆಯಿತು. ಆದರೆ ಈಗ ಮಾರುಕಟ್ಟೆಗೆ ತೊಂದರೆಯಾಗಿದೆ. ನಾವು ಪ್ರತಿದಿನದ ಚಟುವಟಿಕೆಯಲ್ಲಿ ಆಗುತ್ತಿರುವ ಎರಡು ಪ್ರಮುಖ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದೇವೆ. ಒಂದು ಜನ ಶೇಖರಿಸಿಡುತ್ತಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳಬಹುದು. ಮತ್ತೊಂದು ಸಂಗತಿ, ಜನ ಹಿಂದೆ ಸರಿದುಕೊಂಡಿದ್ದಾರೆ. ಅವರು ಹೊರಗೆ ಹೋಗುತ್ತಿಲ್ಲ. ಅವರು ಸೋಂಕನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಅನ್ನುವುದು.

ಅದು ಆತಂಕಕಾರಿಯದ ವಿಷಯ. ಅದರಿಂದ ಹಲವರ ಹಾಗೂ ಹಲವು ಕಂಪೆನಿಗಳ ನಿಜವಾದ ಆದಾಯ ಕುಸಿಯುತ್ತದೆ. ಇದೊಂದು ಅಸಾಮಾನ್ಯ ಸ್ಥಿತಿ. ಒಂದೆರಡು ತಿಂಗಳ ಹಿಂದೆ ಜನ ಇಂತಹ ಒಂದು ಘಟನೆ ಆಗಬಹುದು ಎಂದು ನಿರೀಕ್ಷಿಸಿಯೇ ಇರಲಿಲ್ಲ. ಈ ಆಧುನಿಕ ಕಾಲದಲ್ಲಿ, ಇಷ್ಟೊಂದು ಗಂಭೀರವಾದ ಮಹಾಮಾರಿ ಬರುತ್ತದೆ ಮತ್ತು ಸರ್ಕಾರ ಅದನ್ನು ನಿಯಂತ್ರಿಸುವುದಕ್ಕೆ ಹೆಣಗಬೇಕಾಗಿದೆ ಅನ್ನುವುದೇ ದೊಡ್ಡ ಸಂಗತಿ.

**ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಆರ್ಥಿಕತೆಯ ದೃಷ್ಟಿಯಿಂದ ಯಾವ ಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಬಹುದು?**

ಇಂದು ನಮಗೆ ಸಮಸ್ಯೆಯ ಮೂಲ ಗೊತ್ತಿದೆ. ಅದು ಅಮೂರ್ತವಾದದ್ದಲ್ಲ, ವಾಸ್ತವ. ಇಂತಹ ಸಮಯದಲ್ಲಿ ಪರಿಣಾಮಕಾರಿಯಾಗಿ ಇರುವುದು ಕಷ್ಟ. 1933ರಲ್ಲಿ ರೂಸ್‌ವೆಲ್ಟ್ ಅಧಿಕಾರಕ್ಕೆ ಬಂದಾಗ "ಯಾವುದೇ ಮಿಡತೆಗಳ ಮಾರಿಯೂ" ಇಲ್ಲ ಎಂದಿದ್ದ. ಅವನು ಆರ್ಥಿಕ ಹಿಂಜರಿಕೆಯ ಸಂದರ್ಭದಲ್ಲಿ ಹೇಳಿದ ಮಾತಿದು. ಮಿಡತೆಗಳು ರಾಶಿ ರಾಶಿಯಾಗಿ ಬಂದು ಬೆಳೆಯನ್ನು ಹಾಳು ಮಾಡಿದ್ದ ಬೈಬಲ್ಲಿನ ಕಥೆಯನ್ನು ಉಲ್ಲೇಖಿಸುತ್ತಿದ್ದ. ಆಗ ಯಾವುದೇ ಮಹಾಮಾರಿಯೂ ಇರಲಿಲ್ಲ. ಆಗಿನ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಯಾವುದೇ ಹುಳ ಅಥವಾ ವೈರಾಣುಗಳು ಇರಲಿಲ್ಲ. ಆದರೆ ಈಗ ಇದೆ. ಅದೇ ನಿಜವಾದ ವ್ಯತ್ಯಾಸ.

**ಈಗ ನೀತಿಗಳನ್ನು ರೂಪಿಸುವವರು, ಹೂಡಿಕೆದಾರರು ಪರಿಸ್ಥಿತಿಯನ್ನು ಹೇಗೆ ವಿಶ್ಲೇಷಿಸಬೇಕು? ಅದೂ ಅಮೆರಿಕೆಯಲ್ಲಿ ಬಡ್ಡಿದರ ಅಷ್ಟೊಂದು ಕಡಿಮೆ ಇರುವ ಸಂದರ್ಭದಲ್ಲಿ ಅದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು?**

ಇದನ್ನು ವಿಶ್ಲೇಷಿಸುವುದು ಕಷ್ಟ. ಯಾಕೆಂದರೆ ಇಂತಹದನ್ನು ನಾವು ಈ ಹಿಂದೆ ಎಂದೂ ನೋಡಿರಲಿಲ್ಲ. ಬಡ್ಡಿ ದರ ಶೇಕ 1ಕ್ಕಿಂತ ಕಮ್ಮಿ ಇರುವ ಸಂದರ್ಭ ಚರಿತ್ರೆಯಲ್ಲೇ ಆಗಿಲ್ಲ. ಮಹಾ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲೂ ದೀರ್ಘಕಾಲೀನ ಬಾಂಡುಗಳಿಗೆ ಕನಿಷ್ಠ ಶೇಕಡ 2ರಷ್ಟು ಹಣ ಸಿಗುತ್ತಿತ್ತು. ಈಗ ನಾವು ಸಾಗುತ್ತಿರುವ ದಾರಿ ಈವರೆಗೂ ಸಾಗಿರದ ಹಾದಿ. ನಮ್ಮ ಈಗಿನ ಸ್ಥಿತಿಗೆ ಚಾರಿತ್ರಿಕ ಒಳನೋಟವನ್ನು ಹೇಗೆ ತರುವುದು ಎಂದು ನನಗೆ ತಿಳಿಯುತ್ತಿಲ್ಲ.

ನಾವು ಈ ವೈರಾಣುವನ್ನು ಎದುರಿಸಬೇಕು. ನಮ್ಮ ವಿತ್ತೀಯ ನೀತಿ ಮೊದಲಿಗೆ ಈ ಮಹಾಮಾರಿಯನ್ನು ಎದುರಿಸುವುದಕ್ಕೆ ತಕ್ಕ ರೀತಿಯಲ್ಲಿ ಇರಬೇಕು.



**ಬಡ್ಡಿ ದರ ಯಾಕೆ ಇಷ್ಟೊಂದು ಕಡಿಮೆ ಆಗಿದೆ. ಕೇಂದ್ರ ಬ್ಯಾಂಕುಗಳ ಹೆಚ್ಚಿರುವ ಬ್ಯಾಲೆನ್ಸ್ ಷೀಟ್ ಒಂದು ಕಾರಣವಿರಬಹುದೇ?**

ಕ್ವಾಂಟಿಟೇಟಿವ್ ಈಸಿಂಗಿನ – ಅಂದರೆ ಕೇಂದ್ರ ಬ್ಯಾಂಕು ಧೀರ್ಘ ಕಾಲೀನ ಬಾಂಡುಗಳನ್ನು ಕೊಂಡು ಮಾರುಕಟ್ಟೆಯಲ್ಲಿ ದ್ರವ್ಯತೆಯನ್ನು ಹೆಚ್ಚು ಮಾಡುವ– ಉದ್ದೇಶವೇ ಅದು. ಅದು ಬಾಂಡುಗಳ ಬೆಲೆಯನ್ನು ಹೆಚ್ಚಿಸಿ ಅದರಿಂದ ಬರುವ ಲಾಭವನ್ನು ಕಡಿಮೆ ಮಾಡುತ್ತದೆ. ಅದರಿಂದ ಬಡ್ಡಿದರ ಇಳಿಯುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಬಡ್ಡಿದರದಲ್ಲಿ ಆಗಿರುವ ದಿಢೀರ್ ಬದಲಾವಣೆಗೆ ಅದು ಕಾರಣವಲ್ಲ. ಕೊರೋನಾ ವೈರಾಣು ಪ್ರಮುಖವಾಗಿ ಅದಕ್ಕೆ ಕಾರಣ.

**ಬಡ್ಡಿದರ ತುಂಬಾ ಕಡಿಮೆ ಇರುವುದರಿಂದ ಆಸ್ತಿಯ ಗುಳ್ಳೆ ಪ್ರಾರಂಭವಾಗಬಹುದೇ?. ಜನರಿಗೆ ರಿಸ್ಕ್ ತೆಗೆದುಕೊಳ್ಳುವಂತೆ ಇದು ಪ್ರೇರೇಪಿಸಬಹುದೇ?**

ಚಾರಿತ್ರಿಕವಾಗಿ ಸ್ಟಾಕ್ ಮಾರುಕಟ್ಟೆಗೂ ಬಡ್ಡಿದರಕ್ಕೂ ಅಂತಹ ಸಂಬಂಧವಿಲ್ಲ. 70ರ ಕೊನೆ ಮತ್ತು 80ರ ಮೊದಲ ಭಾಗದಲ್ಲಿ ಬಡ್ಡಿದರ ತುಂಬಾ ಹೆಚ್ಚಿತ್ತು. ಆದರೆ ಸ್ಟಾಕ್ ಮಾರುಕಟ್ಟೆ ಕುಸಿದಿತ್ತು. ಅದನ್ನು ಅರ್ಥಮಾಡಿಕೊಳ್ಳಬಹುದು. ಅದನ್ನು ಬಿಟ್ಟರೆ ಉಳಿದ ಸಂದರ್ಭದಲ್ಲಿ ಅವರೆಡರ ನಡುವೆ ಸಂಬಂಧ ಕಾಣುವುದಿಲ್ಲ. ಕಥನ ಬದಲಾಗುತ್ತಾ ಇರುತ್ತದೆ. ಈಗ ಅಮೆರಿಕೆಯ ಚರಿತ್ರೆಯ ತೀರಾ ವಿಶಿಷ್ಟವಾದ ಕಥನ ನಮ್ಮ ಮುಂದಿದೆ. ಇದಕ್ಕೆ ತುಂಬಾ ಹತ್ತಿರದ ಉದಾಹರಣೆ ಅಂದರೆ 1918ರ ಇನ್‌ಫ್ಲುಯೆಂಜಾ ಮಹಾಮಾರಿ. ಆದರೆ ಅದು ಸಂಪೂರ್ಣ ಹೀಗೇ ಇರಲಿಲ್ಲ. ಯಾಕೆಂದರೆ ಅದು ಮೊದಲ ಮಹಾಯುದ್ಧದ ಕದನವಿರಾಮಕ್ಕೆ ಮುಂಚೆ ಬಂದಿತ್ತು. ಮಹಾಮಾರಿ ಅಕ್ಟೋಬರ್ 1918ರಲ್ಲಿ ಉತ್ತುಂಗದಲ್ಲಿತ್ತು. ಕದನ ವಿರಾಮಕ್ಕೆ ಸಹಿ ಮಾಡಿದ್ದು ನವೆಂಬರ್ 1918ರಲ್ಲಿ. ಆಗ ಆರ್ಥಿಕ ಹಿಂಜರಿಕೆ ಇತ್ತು. ಆದರೆ ಆಗ ಸ್ಟಾಕ್ ಮಾರುಕಟ್ಟೆಗೆ ದೊಡ್ಡ ಹೊಡೆತ ಬೀಳಲಿಲ್ಲ. ಅದರ ಕಥಾನಕವೇ ಬೇರೆ. ಆಗಿನ ಕಥನದ ಕೇಂದ್ರ ಸಂಗತಿ ಯುದ್ಧ. ಹಾಗಾಗಿ ನಿಜ ಅಂದರೆ ಇಂದಿನ ಪರಿಸ್ಥಿತಿಗೆ ಇನ್ನೊಂದು ಉದಾಹರಣೆ ಸಿಗುವುದಿಲ್ಲ.

**ಬಡ್ಡಿ ದರ ಇಳಿಯುತ್ತಿರುವುದರಿಂದ ಅಮೇರಿಕೆ ಹೆಚ್ಚೆಚ್ಚು ಜಪಾನ್ ಅಥವಾ ಯುರೋಪ್ ದಾರಿಯಲ್ಲಿ ಹೋಗುತ್ತಿದೆಯೇ?**

ಅದಕ್ಕೆ ಸಂಬಂಧಿಸಿದಂತೆ ಬೇರೆಯದೇ ಕಥನ ಇದೆ. ಅದನ್ನು ದೀರ್ಘ ಕಾಲೀನ ಸ್ಥಗಿತತೆ ಎಂದು ಕರೆಯುತ್ತೇನೆ. ಅದು 2011ರಲ್ಲಿ ಲಾರಿ ಸಮ್ಮರ್ ಇಂದ ಪ್ರಾರಂಭವಾಯಿತು. ದೀರ್ಘಕಾಲೀನ ಸ್ಥಗಿತತೆ ಅನ್ನುವುದು ಇನ್ನು ಮುಂದೆ ಅಥವಾ ಬಹು ದೀರ್ಘ ಕಾಲ ನಾವು ಸ್ಥಗಿತತೆಯ ಸ್ಥಿತಿಯಲ್ಲೇ ಇರುತ್ತೇವೆ ಅನ್ನುವ ಭಯ. ಕಡಿಮೆ ಬಡ್ಡಿದರ ಅದರ ಒಂದು ಚಿಹ್ನೆ.

ಅದು ಇನ್ನೊಂದು ಕಥನ. ಆ ಬಗ್ಗೆ ಹೆಚ್ಚು ಚರ್ಚೆ ಆಗಿಲ್ಲ. ಡೋನಾಲ್ಡ್ ಟ್ರಂಪ್ ಆಡಳಿತದಲ್ಲಿ ಆರ್ಥಿಕತೆ ಹೆಚ್ಚು ದೃಢವಾಗಿ ಕಾಣುವುದಕ್ಕೆ ಪ್ರಾರಂಭವಾಗಿತ್ತು. ನಮ್ಮಲ್ಲಿ ನಿರುದ್ಯೋಗದ ದರ ಎಷ್ಟೊಂದು ಕಡಿಮೆ ಇತ್ತು ಅಂದರೆ ಅದು ಸಾಂಪ್ರದಾಯಿಕ ದೀರ್ಘಕಾಲಿನ ಸ್ಥಗಿತತೆಯ ಕಥನಕ್ಕೆ ಹೊಂದಿಕೊಳ್ಳುತ್ತಿರಲಿಲ್ಲ.

**ಧೀರ್ಘ ಕಾಲೀನ ಸ್ಥಗಿತತೆ ಕಥನದ ಬಗ್ಗೆ ನಿಮ್ಮ ವಿಚಾರ ಏನು?**

ನಾವು ತುಂಬಾ ದಿನದಿಂದ ಕಡಿಮೆ ಬಡ್ಡಿದರದ ಸ್ಥಿತಿಯಲ್ಲೇ ಇದ್ದೇವೆ. ಹಾಗಾಗಿ ಅದಕ್ಕೆ ಒಂದಿಷ್ಟು ಸಮರ್ಥನೆ ಇದೆ. ಅದನ್ನು ಕಥೆ ಎಂದೇ ಭಾವಿಸುತ್ತೇನೆ. ದೀರ್ಘ ಕಾಲೀನ ಸ್ಥಗಿತತೆ ಅನ್ನುವ ಪದ ಮೊದಲಿಗೆ ಮಹಾ ಹಿಂಜರಿತದ ಸಮಯಲ್ಲಿ ಹುಟ್ಟಿಕೊಂಡಿತು. ಆಗ ಈ ಪರಿಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಿಲ್ಲ, ನಾವು ಎಂದೆಂದಿಗೂ ಅದೇ ಸ್ಥಿತಿಯಲ್ಲಿ ಇರುತ್ತೇವೆ ಅಂತ ಜನ ಅಂದುಕೊಂಡಿದ್ದರು. ವಿಶೇಷವಾಗಿ 1938ರ ಸುಮಾರಿಗೆ ಅಲ್ವಿನ್ ಹಾನ್ಸನ್ ಈ ಪದವನ್ನು ಸೃಷ್ಟಿಸಿದಾಗ ಇದರಿಂದ ನಾವು ಆಚೆಗೆ ಬರುವುದಕ್ಕೆ ಸಾಧ್ಯವಿಲ್ಲ ಅನ್ನಿಸಿತ್ತು. ಆದರೆ ಈಗ ಮುಖ್ಯವಾಗಿ ನಮ್ಮ ಲಕ್ಷ್ಯ ಇರುವುದು ಆ ಬಗ್ಗೆ ಅಲ್ಲ. ಈಗ ನಮ್ಮನ್ನು ಮುಖ್ಯವಾಗಿ ಕಾಡುತ್ತಿರುವುದು ಕೊರೋನಾ ವೈರಾಣು. ಅತ್ಯಂತ ಕಡಿಮೆ ಬಡ್ಡಿದರ ಭೀತಿಯ ಚಿಹ್ನೆ, ಭೀತಿ ವೈರಾಣು.

**ನಿಮಗೆ ಹಣಕಾಸು ನೀತಿಯಲ್ಲಿ ಏರುಪೇರಿದೆ ಅನ್ನಿಸುತ್ತಿದೆಯಾ? ಅಂದರೆ ಆರ್ಥಿಕತೆ ನಿಧಾನವಾದಾಗ ಅದನ್ನು ಉತ್ತೇಜಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಬೆಳವಣಿಗೆ ಪ್ರಾರಂಭವಾದ ಮೇಲೆ ಅದನ್ನು ನಾರ್ಮಲೈಸ್ ಮಾಡುವುದಕ್ಕೆ ಹಿಂದೇಟು ಹಾಕುತ್ತೇವೆ ಅನ್ನಿಸುತ್ತಿದೆಯ?**

ಬಡ್ಡಿದರ ಮಾಮೂಲಿ ಮಟ್ಟಕ್ಕೆ ಬರಬೇಕು. ನಿರುದ್ಯೋಗ ದರ ಅಷ್ಟೊಂದು ಕಡಿಮೆ ಇದ್ದಾಗ ಅದನ್ನು ಅವರು ಮಾಡಬಹುದಿತ್ತು. ಆದರೆ ಅವರ ನೀತಿ ಅಷ್ಟೊಂದು ಆಪತ್ಕಾರಿಯೇನಲ್ಲ. ಈಗ ನಿಜವಾದ ಆಪತ್ತು ಬಂದಿರುವುದು ಈ ವೈರಾಣುವಿನಿಂದ.

# ಬಿಕ್ಕಟ್ಟು ಅಂತರರಾಷ್ಟ್ರೀಯವಾಗಲಿ

## ಜೋಸೆಫ್ ಈ ಸ್ಟಿಗ್ಲಿಟ್ಜ್

**2001ರಲ್ಲಿ ನೋಬೆಲ್ ಪುರಸ್ಕೃತರು. ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರ ಇತ್ತೀಚಿನ ಪುಸ್ತಕ ಪೀಪಲ್ ಪವರ್ ಅಂಡ್ ಪ್ರಾಫಿಟ್ಸ್: ಪ್ರೊಗ್ರೆಸಿವೆ ಕ್ಯಾಪಿಟಲಿಸಂ ಫಾರ್ ಎನ್ ಎಜ್ ಆಫ್ ಡಿಸ್ಕಂಟೆಂಟ್**

.ಈ ಕೊರೋನಾ ವೈರಸ್ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹರಡುತ್ತಾ ಹೋಗುತ್ತಿದೆ. ಅದು ಯಾವುದೇ ರಾಷ್ಟ್ರೀಯ ಗಡಿಗಳನ್ನಾಗಲಿ ಅಥವಾ "ದೊಡ್ಡ, ಸುಂದರವಾದ" ಗಡಿ–ಗೋಡೆಗಳನ್ನಾಗಲಿ ಲೆಕ್ಕಿಸುತ್ತಿಲ್ಲ. ಅಥವಾ ಬಿಕ್ಕಟ್ಟಿನಿಂದ ಆಗುತ್ತಿರುವ ಆರ್ಥಿಕ ದುಷ್ಪರಿಣಾಮಗಳು ನಿಲ್ಲುತ್ತಿಲ್ಲ. ಕೋವಿಡ್–19 ಪಿಡುಗು ಪ್ರಾರಂಭವಾಗುತ್ತಿದ್ದಂತೆಯೇ ಇದು ಜಾಗತಿಕ ಸಮಸ್ಯೆ ಹಾಗೂ ಇದಕ್ಕೆ ಪರಿಹಾರವನ್ನು ಜಾಗತಿಕ ಮಟ್ಟದಲ್ಲೇ ಯೋಚಿಸಬೇಕು ಅನ್ನುವುದು ಸ್ಪಷ್ಟವಾಗಿತ್ತು.

ಶ್ರೀಮಂತ ಆರ್ಥಿಕತೆಗಳು ಇದಕ್ಕೆ ಹಲವು ಮಗ್ಗಲಿನಿಂದ ಪ್ರತಿಕ್ರಿಯಿಸಬೇಕು. ಅವರಲ್ಲಿ ಕರುಣೆ ಅನ್ನುವುದು ಇದ್ದರೆ ಸಾಕು. ಹೀಗೆ ಸ್ಪಂದಿಸುವುದಕ್ಕೆ ಇನ್ಯಾವ ಸಮರ್ಥನೆಯೂ ಬೇಕಾಗಿಲ್ಲ. ಆದರೆ ಜಾಗತಿಕ ಕ್ರಿಯೆ ಅನ್ನುವುದು ಸ್ವಹಿತಾಸಕ್ತಿಯ ವಿಷಯವೂ ಹೌದು. ಈ ಮಹಾಮಾರಿ ಎಲ್ಲೇ ಇದ್ದರೂ ಜಗತ್ತಿನ ಎಲ್ಲಾ ಕಡೆಗೂ ಅದರ ಅಪಾಯ ತಟ್ಟುತ್ತದೆ. ಅದು ಆರ್ಥಿಕವಾಗಿ ಹಾಗೂ ಒಂದು ಸೋಂಕಾಗಿ ಎಲ್ಲರನ್ನೂ ಕಾಡುತ್ತದೆ.

ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಕೋವಿಡ್–19 ಪ್ರಭಾವ ಈಗ ಕಾಣಿಸಿಕೊಳ್ಳುತ್ತಿದೆ. ಆದರೆ ಮುಂದುವರಿದ ದೇಶಗಳಿಗೆ ಹೋಲಿಸಿದರೆ ಈ ದೇಶಗಳು ಈ ಪಿಡುಗಿನಿಂದ ಹೆಚ್ಚು ಹಾನಿಗೊಳಗಾಗುತ್ತವೆ ಅನ್ನುವುದು ಸ್ಪಷ್ಟ. ಬಡದೇಶಗಳಲ್ಲಿ ಜನ ಹೆಚ್ಚು ಒತ್ತೊತ್ತಿಗೆ ಬದುಕುತ್ತಿರುತ್ತಾರೆ. ಅಲ್ಲಿಯ ಬಹುಪಾಲು ಜನರಿಗೆ ಈಗಾಗಲೇ ಆರೋಗ್ಯದ ಸಮಸ್ಯೆಗಳಿವೆ. ಹಾಗಾಗಿ ಅವರಿಗೆ ಈ ಸೋಂಕು ತಗುಲುವ ಅಪಾಯ ಹೆಚ್ಚು. ಮತ್ತು ಮುಂದುವರಿದ ದೇಶಗಳಿಗೆ ಹೋಲಿಸಿದರೆ ಈ ದೇಶಗಳ ಆರೋಗ್ಯ ವ್ಯವಸ್ಥೆ ಕೂಡ ಪಿಡುಗನ್ನು ನಿರ್ವಹಿಸುವುದಕ್ಕೆ ಅಷ್ಟೊಂದು ಸಿದ್ಧವಾಗಿಲ್ಲ.

ಮಾರ್ಚ್ 30ರ ಸಂಯುಕ್ತ ರಾಷ್ಟ್ರಗಳ ವ್ಯಾಪಾರ ಹಾಗೂ ಅಭಿವೃದ್ಧಿ ಸಮ್ಮೇಳನದ ವರದಿ ನೋಡಿದರೆ ಈ ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ರಾಷ್ಟ್ರಗಳು ಅನುಭವಿಸಬೇಕಿರುವ ಪಾಡಿನ ಒಂದು ಚಿತ್ರ ಸಿಗುತ್ತದೆ. ಅವುಗಳಲ್ಲಿ ಅತ್ಯಂತ ಯಶಸ್ವಿಯಾಗಿರುವ ದೇಶಗಳು ರಫ್ತನ್ನು ಆಧರಿಸಿಯೇ ಬೆಳವಣಿಗೆಯನ್ನು ಸಾಧಿಸಿರುವುದು. ಈಗ ಜಾಗತಿಕ ಆರ್ಥಿಕತೆ ಕುಗ್ಗುವುದರಿಂದ ಸ್ವಾಭಾವಿಕವಾಗಿಯೇ ರಫ್ತು ಕುಸಿಯುತ್ತದೆ. ಜಾಗತಿಕ ಹೂಡಿಕೆಯ ಹರಿವೂ ತುಂಬಾ ಕಡಿಮೆಯಾಗುತ್ತಿದೆ. ಜೊತೆಗೆ ಸರಕಿನ ಬೆಲೆಗಳು ಕುಸಿಯುತ್ತಿವೆ. ನೈಸರ್ಗಿಕ ಸಂಪನ್ಮೂಲಗಳನ್ನು ರಫ್ತು ಮಾಡುತ್ತಿರುವ ರಾಷ್ಟ್ರಗಳ ಹಾದಿ ತುಂಬಾ ಕಠಿಣವಾಗಿದೆ ಎನ್ನುವುದನ್ನು ಇದರಿಂದ ಅರ್ಥಮಾಡಿಕೊಳ್ಳಬಹುದು.

ಹಿಂದುಳಿದ ರಾಷ್ಟ್ರಗಳ ಸಾವರಿನ್ ಸಾಲದ ವರಮಾನದ ಹರವನ್ನು (ಈಲ್ಡ್ ಸ್ಪ್ರೆಡ್) ಗಮನಿಸಿದರೆ ಸಮಸ್ಯೆ ಈಗಲೇ ಪ್ರಾರಂಭವಾಗಿದೆ ಅನ್ನುವುದು ತಿಳಿಯುತ್ತದೆ. ಈ ವರ್ಷ ತೀರಿಸಬೇಕಾಗಿರುವ ಸಾಲಗಳನ್ನು ಹೊಂದಿಸುವುದಕ್ಕೆ ಹಲವು ಸರ್ಕಾರಗಳಿಗೆ ತುಂಬಾ ಕಷ್ಟವಾಗುತ್ತದೆ.

ಅಷ್ಟೇ ಅಲ್ಲ ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ರಾಷ್ಟ್ರಗಳಿಗೆ ಈ ಮಹಾಮಾರಿಯನ್ನು ಎದುರಿಸುವುದಕ್ಕೆ ಇರುವ ದಾರಿಗಳೂ ಕೆಲವೇ. ಅವು ಬಡರಾಷ್ಟ್ರಗಳ ಮಟ್ಟಿಗೆ ಸುಲಭದ ದಾರಿಗಳೂ ಅಲ್ಲ. ಅಲ್ಲಿಯ ಜನ ಅಂದಿನ ಊಟವನ್ನು ಅಂದೇ ದುಡಿದುಕೊಳ್ಳಬೇಕು. ಜೊತೆಗೆ ಅವಶ್ಯಕವಾಗಿರುವ ಸಾಮಾಜಿಕ ರಕ್ಷಣೆಯೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಆದಾಯವೂ ಇಲ್ಲ ಅಂದರೆ ಉಪವಾಸವೇ ಗತಿ. ಆದರೆ ಈ ದೇಶಗಳಿಗೆ ಅಮೇರಿಕೆಯಲ್ಲಿ ಕೊಡುತ್ತಿರುವಷ್ಟು ಪರಿಹಾರವನ್ನು ತಮ್ಮ ದೇಶಗಳಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ. ಅಮೇರಿಕೆಯಲ್ಲಿ 2 ಟ್ರಿಲಿಯನ್ ನೆರವಿನ ಪ್ಯಾಕೇಜ್ ಘೋಷಿಸಿದ್ದಾರೆ. ಅದರಿಂದ ವಿತ್ತೀಯ ಕೊರತೆ ಜಿಡಿಪಿಯ ಶೇಕಡ 10ರಷ್ಟು ಹೆಚ್ಚಾಗುತ್ತದೆ. ಮಹಾಮಾರಿಗೆ ಮೊದಲು ಅದು ಶೇಕಡ 5ರಷ್ಟಿತ್ತು.

ಜಿ20ರ ನಾಯಕರು ಮಾರ್ಚ್ 26ರಂದು ನಡೆದ ತುರ್ತು ಶೃಂಗ ಸಭೆಯ ಅಧಿಕೃತ ಪ್ರಕಟಣೆಯಲ್ಲಿ "ಮಹಾಮಾರಿಯಿಂದ ಆಗಿರುವ ಆರ್ಥಿಕ ಹಾಗೂ ಸಾಮಾಜಿಕ ಹಾನಿಯನ್ನು ಕಡಿಮೆ ಮಾಡಲು, ಜಾಗತಿಕ ಬೆಳವಣಿಗೆಯನ್ನು ಮತ್ತೆ ಪ್ರಾರಂಭಿಸಲು, ಮಾರುಕಟ್ಟೆಯ ಸ್ಥಿರತೆಯನ್ನು ಕಾಪಾಡಿಕೊಳ್ಳಲು, ಹಾಗೂ ಚೇತರಿಕೆಯನ್ನು ಬಲಪಡಿಸಲು ಬೇಕಾದ್ದನ್ನೆಲ್ಲಾ ಮಾಡಲು ಹಾಗೂ ಲಭ್ಯವಿರುವ ಎಲ್ಲಾ ನಿಯಮಗಳನ್ನು ಬಳಸಿಕೊಳ್ಳಲು" ತಿಳಿಸಿದೆ. ಮತ್ತು ಅದಕ್ಕೆ ಬದ್ಧವಾಗಿದೆ. ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ರಾಷ್ಟ್ರಗಳು ಇಂದು ಇರುವ ದುಸ್ಥಿತಿಯಲ್ಲಿ ಇದನ್ನು ಸಾಧಿಸುವುದಕ್ಕೆ ಕನಿಷ್ಠ ಎರಡು ಕೆಲಸಗಳನ್ನು ಮಾಡಬಹುದು. ಮೊದಲನೆಯದಾಗಿ ಅಂತರಾಷ್ಟ್ರೀಯ ಹಣಕಾಸು ನಿಧಿಯ ವಿಶೇಷ




ಪಡೆಯುವ ಹಕ್ಕಿನ (ಸ್ಪೆಷಲ್ ಡ್ರಾಯಿಂಗ್ ರೈಟನ– ಎಸ್‌ಡಿಆರ್) ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು. ಇದೊಂದು ರೀತಿಯ "ಜಾಗತಿಕ ನಗದು." ಇದನ್ನು ಸೃಷ್ಟಿಸುವ ಅಧಿಕಾರ ಆ ಸಂಸ್ಥೆಗಳಿಗೆ ಇದೆ. ಜಾನ್ ಮೆನಾರ್ಡ್ ಕೇನ್ಸ್ ಇದನ್ನು 1944ರ ಬ್ರೆಟನ್‌ವುಡ್ ಸಮ್ಮೇಳನದಲ್ಲಿ ಸೂಚಿಸಿದ. ಇದು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಅವಶ್ಯಕ ಭಾಗ.

ಪ್ರತಿಯೊಂದು ದೇಶವೂ ತನ್ನ ಪ್ರಜೆಗಳನ್ನು ಮತ್ತು ತನ್ನ ದೇಶದ ಆರ್ಥಿಕತೆಯನ್ನು ಈ ಬಿಕ್ಕಟ್ಟಿನ ಸಂದರ್ಭದಲ್ಲಿ ರಕ್ಷಿಸುವುದಕ್ಕೆ ಬಯಸುತ್ತದೆ. ಇಂತಹ ಸಮಯದಲ್ಲಿ ಅಂತರ್ರಾಷ್ಟ್ರೀಯ ನಿಧಿ ಅಂತಹ ರಾಷ್ಟ್ರಗಳಿಗೆ ನೆರವು ನೀಡಬೇಕು. ಹಾಗೂ ಅಂತಹ ನೆರವು ನೀಡುವುದಕ್ಕೆ ಬೇಕಾದ ಸಾಧನಗಳು ಅಂತಹ ಸಂಸ್ಥೆಗಳಿಗೆ ಇರಬೇಕು. ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ರಾಷ್ಟ್ರಗಳ ಬಜೆಟ್ಟಿಗೆ ಹೊರೆಯಾಗಬಾರದು. ಸಾಮಾನ್ಯವಾಗಿ ಎಸ್‌ಡಿಆರ್‌ನಲ್ಲಿ ಶೇಕಡ 40ರಷ್ಟು ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ಆರ್ಥಿಕತೆಗೆ ಹೋಗುತ್ತವೆ. ಅದು ಆ ರಾಷ್ಟ್ರಗಳ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಅದರ ಜೊತೆಗೆ ಅಮೇರಿಕೆಯಂತಹ ಶ್ರೀಮಂತ ರಾಷ್ಟ್ರಗಳು ತಮ್ಮ ಪಾಲಿನ ಎಸ್‌ಡಿಆರ್‌ಗಳನ್ನು ಬಡ ರಾಷ್ಟ್ರಗಳ ನೆರವಿಗೆ ರಚನೆಯಾಗಿರುವ ಟ್ರಸ್ಟ್ ಒಂದಕ್ಕೆ ಕೊಡುಗೆಯಾಗಿ ಕೊಟ್ಟರೆ ಅಥವಾ ಸಾಲವಾಗಿ ನೀಡಿದರೆ ಇನ್ನೂ ಒಳ್ಳೆಯದು. ನೆರವನ್ನು ಪಡೆದುಕೊಳ್ಳುತ್ತಿರುವ ದೇಶಗಳಿಗೆ ಕೆಲವು ಷರತ್ತುಗಳನ್ನು ಹಾಕಬಹುದು. ಉದಾಹರಣೆಗೆ ಈ ಹಣವನ್ನು ಸಾಲ ತೀರಿಸುವುದಕ್ಕೆ ಬಳಸಬಾರದು. ಇದು ನಿರೀಕ್ಷಿತವೇ ಆಗಿದೆ.

ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ಆರ್ಥಿಕತೆಗಳಿಗೆ ಸಾಲವನ್ನು ಮರುಪಾವತಿ ಮಾಡುವುದಕ್ಕೆ ನೀಡುವ ಅವಧಿಯನ್ನು ವಿಸ್ತರಿಸಬೇಕು. ಇದು ತುಂಬಾ ಮುಖ್ಯ. ಅಮೇರಿಕೆಯ ಆರ್ಥಿಕತೆಯನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಅಮೇರಿಕೆಯ ಗೃಹ ಹಾಗೂ ನಗರಾಭಿವೃದ್ಧಿ ಇಲಾಖೆಯು ಫೆಡರಲ್ ವಿಮೆ ಇರುವ ಅಡಮಾನವನ್ನು 60 ದಿನ ರದ್ದುಮಾಡುವುದಿಲ್ಲ ಎಂದು ಘೋಷಿಸಿದೆ. ಇದರ ಅರ್ಥ ಇಷ್ಟೆ. ಅಂದರೆ ಕೋವಿಡ್–19ರ ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿ ಇಡೀ ಅಮೇರಿಕೆಯ ಆರ್ಥಿಕತೆಯನ್ನು "ತಟಸ್ಥ"ಗೊಳಿಸಲಾಗಿದೆ. ಈ ಘೋಷಣೆ ಅದರ ಒಂದು ಭಾಗ. ಕೆಲಸಗಾರರು ಮನೆಯಲ್ಲಿದ್ದಾರೆ. ಹೋಟೆಲ್ಲುಗಳು ಮುಚ್ಚಿವೆ. ವಿಮಾನಗಳು ಹಾರುತ್ತಿಲ್ಲ. ಸಾಲಗಾರ ಒಬ್ಬ ಮಾತ್ರ ಯಾಕೆ ಹಣ ಮಾಡುತ್ತಾ ಹೋಗಬೇಕು. ಅವರು ವಿಧಿಸುತ್ತಿರುವ ಬಡ್ಡಿದರ ಅವರಿಗೆ ಸಾಕಷ್ಟು ಆದಾಯವನ್ನು ತಂದುಕೊಟ್ಟಿದೆ. ಅವರಿಗೆ ನಷ್ಟ ಇಲ್ಲ. ಹಾಗಿದ್ದಾಗ ಸಾಲಕೊಟ್ಟವರು ಅಂತಹ ರಿಯಾಯ್ತಿ ತೋರಬೇಕಾಗುತ್ತದೆ. ಇಲ್ಲದೇ ಹೋದರೆ ಸಾಲಪಡೆದವರು ತಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ತೆರಬೇಕಾಗುತ್ತದೆ. ಈ ಬಿಕ್ಕಟ್ಟಿನಿಂದಾಗಿ ಅಂತಹ ಹಲವಾರು ಸಾಲಗಾರರು ಸೃಷ್ಟಿಯಾಗುತ್ತಾರೆ.

ಈ ರೀತಿಯ ರಿಯಾಯ್ತಿಯನ್ನು ದೇಶದೊಳಗೆ ಹಾಗು ಅಂತರರಾಷ್ಟ್ರೀಯವಾಗಿ ನೀಡುವುದು ತುಂಬಾ ಮುಖ್ಯ. ಪ್ರಸ್ತುತ ಪರಿಸ್ಥಿತಿಯಲ್ಲಿ ಹಲವಾರು ದೇಶಗಳು ಸಾಲ ತೀರಿಸುವ ಸ್ಥಿತಿಯಲ್ಲಿ ಇಲ್ಲ. ಮರುಪಾವತಿಗೆ ಜಾಗತಿಕವಾಗಿ ರಿಯಾಯಿತಿ ತೋರಿಸದಿದ್ದರೆ ಬೇಪಾವತಿಯ ಪ್ರಕರಣಗಳು ತುಂಬಾ ಹೆಚ್ಚಬಹುದು. ಬಹುತೇಕ ಅಭಿವೃದ್ಧಿಶೀಲ ಹಾಗೂ ಉದಯೋನ್ಮುಖ ಆರ್ಥಿಕತೆಗಳಲ್ಲಿ ಸರ್ಕಾರಕ್ಕೆ ಇರುವುದು ಎರಡೇ ಆಯ್ಕೆ. ಒಂದು ಹೆಚ್ಚಿನ ವರಮಾನವನ್ನು ಸಾಲಕೊಟ್ಟ ವಿದೇಶಿಯರಿಗೆ ಕೊಡುವುದು ಅಥವಾ ತನ್ನ ಹೆಚ್ಚಿನ ಪ್ರಜೆಗಳನ್ನು ಸಾಯುವುದಕ್ಕೆ ಬಿಡುವುದು. ಹೆಚ್ಚಿನ ದೇಶಗಳಿಗೆ ಸ್ವಾಭಾವಿಕವಾಗಿಯೇ ಎರಡನೇ ಆಯ್ಕೆ ಸಾಧ್ಯವಿಲ್ಲ. ಹಾಗಾಗಿ ಅಂತರರಾಷ್ಟ್ರೀಯ ಸಮುದಾಯ ಈಗ ರಿಯಾಯ್ತಿಯನ್ನು ತೋರಬೇಕು. ಅದು ಕ್ರಮಬದ್ಧವಾದ ರಿಯಾಯಿತಿಯಾಗಿದ್ದರೆ ಪರವಾಗಿಲ್ಲ. ಇಲ್ಲದೇ ಹೋದರೆ ಅನಿವಾರ್ಯವಾಗಿ ಅದು ತೀವ್ರವಾದ ಪ್ರಕ್ಷುಬ್ಧತೆಗೆ ದಾರಿಮಾಡಿಕೊಡುತ್ತದೆ. ಜಾಗತಿಕ ಆರ್ಥಿಕತೆಗೆ ಅಪಾರವಾದ ನಷ್ಟ



ಉಂಟಾಗುತ್ತದೆ

ಸಾವರಿನ್ ಸಾಲವನ್ನು ಪುನರ್ ಹೊಂದಿಸುವುದಕ್ಕೆ ಒಂದು ಸಾಂಸ್ಥಿಕ ವ್ಯವಸ್ಥೆ ಇದ್ದರೆ ಅದು ಇನ್ನೂ ಒಳ್ಳೆಯದು. 2015ರಲ್ಲಿ ಅಂತರರಾಷ್ಟ್ರೀಯ ಸಮುದಾಯ ಅಂತಹ ಒಂದು ಪ್ರಯತ್ನ ಮಾಡಿತ್ತು. ಆಗ ಸಂಯುಕ್ತ ರಾಷ್ಟ್ರಗಳ ಅಸೆಂಬ್ಲಿ ಎಲ್ಲರೂ ಹಂಚಿಕೊಳ್ಳಬಹುದಾದ ಒಂದು ನಿಯಮಗಳ ಗುಚ್ಛವನ್ನು ತಯಾರಿಸಿತ್ತು. ಅದಕ್ಕೆ ಒಳ್ಳೆಯ ಬೆಂಬಲವೂ ಸಿಕ್ಕಿತ್ತು. ದುರಾದೃಷ್ಟ ಅಂದರೆ ಪ್ರಮುಖ ಲೇಣಿದಾರ ದೇಶಗಳಿಂದ ಅವಶ್ಯಕವಾದ ಷೇರುಗಳನ್ನು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಿರಲಿಲ್ಲ. ಇಂದಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅಂತಹ ಒಂದು ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ಬಹುಶಃ ಈಗ ತುಂಬಾ ತಡವಾಗಿರಬಹುದು. ಆದರೆ ಮುಂಬರುವ ದಿನಗಳಲ್ಲಿ ಹಲವು ಬಿಕ್ಕಟ್ಟುಗಳು ಬರಲಿವೆ. ಅಂದರೆ ಮಹಾಮಾರಿಯ ನಂತರದ ಪುನರ್‌ಚೇತನಕ್ಕೆ ಸಾವರಿನ್ ಸಾಲದ ಪುನರ್‌ಸಂಘಟನೆಗೆ ಅವಕಾಶ ಮಾಡಿಕೊಡಬೇಕು. ಅದು ಆದ್ಯತೆಯ ಕೆಲವಾಗಬೇಕು.

ಜಾನ್ ಡೋನ್ ಅವರ ಪ್ರಖ್ಯಾತ ಮಾತುಗಳನ್ನು ನೆನಪಿಸಿಕೊಳ್ಳೋಣ "ಯಾವೊಬ್ಬ ಮನುಷ್ಯನೂ ದ್ವೀಪವಲ್ಲ. . ." ಮನುಷ್ಯ ಮಾತ್ರವಲ್ಲ ಯಾವ ದೇಶವೂ ದ್ವೀಪವಲ್ಲ. ಇದನ್ನು ಕೋವಿಡ್–19ರ ಬಿಕ್ಕಟ್ಟು ಸೊಗಸಾಗಿ ಮನವರಿಕೆ ಮಾಡಿಕೊಟ್ಟಿದೆ. ಅಂತರರಾಷ್ಟ್ರೀಯ ಸಮುದಾಯ ಇದನ್ನು ಅಲಕ್ಷಿಸಬಾರದು.

# ಎಚ್ಚರದ ಹೆಜ್ಜೆಗಳನ್ನು ಇಡೋಣ

ಕೌಶಿಕ್ ಬಸು

ಕೃಪೆ: ಇಂಡಿಯನ್ ಎಕ್ಸಪ್ರೆಸ್

ಕೋವಿಡ್–19ರ ಸುರಂಗದಿಂದ ಹೊರಗೆ ಬಂದ ಮೇಲೆ ಜಗತ್ತು ಹೇಗೆ ಕಾಣಬಹುದು ಅಂತ ಊಹಿಸುವುದಕ್ಕೆ ಇದು ತುಂಬಾ ಬೇಗ ಆಯಿತು. ಸುರಂಗದ ತುದಿಯಲ್ಲಿ ಇನ್ನೂ ಬೆಳಕು ಕಾಣುತ್ತಿಲ್ಲ. ಹಿಂದೆ ಇನ್‌ಫ್ಲುಯೆಂಜಾ ರೋಗದ ವಿಷಯದಲ್ಲಿ ಆದ ಹಾಗೆ ಇದಕ್ಕೂ ಒಂದು ಒಳ್ಳೆಯ ಲಸಿಕೆಯನ್ನು ಕಂಡು ಹಿಡಿದು, ಹೆದರಿಕೆಯಿಲ್ಲದೆ ಈ ಕೋವಿಡ್ ಜೊತೆಯಲ್ಲೇ ಬದುಕುವುದಕ್ಕೆ ಸಾಧ್ಯವಾಗಬಹುದಾ? ಸಧ್ಯಕ್ಕೆ ನಮಗೆ ಗೊತ್ತಿಲ್ಲ. ಅಥವಾ ಇನ್ನೂ ಕೆಲವು ವರ್ಷ ಲಸಿಕೆ ಕಂಡುಹಿಡಿಯುವುದಕ್ಕೆ ಸಾಧ್ಯವಾಗದೆ ಕೋವಿಡ್–19ರ ನೆರಳಿನಲ್ಲೇ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುತ್ತಾ, ಪದೇ ಪದೇ ಪರೀಕ್ಷೆ ಮಾಡಿಸಿಕೊಳ್ಳುತ್ತಾ ನಮಗೆ ವೈರಾಣು ಸೋಂಕು ತಗುಲಿಲ್ಲ ಅನ್ನುವುದನ್ನು ಖಾತ್ರಿ ಮಾಡಿಕೊಳ್ಳುತ್ತಾ ಪ್ರಾಣ ಕಾಪಾಡಿಕೊಳ್ಳುತ್ತಾ, ಜೀವನ ಸಾಗಿಸುತ್ತಾ ಇರಬೇಕಾಗುತ್ತಾ? ಅದೂ ಗೊತ್ತಿಲ್ಲ.

ಕೋವಿಡ್‌ನ ದಾರಿ ನಮಗೆ ಇನ್ನೂ ನಿಗೂಢವಾಗಿಯೇ ಇದೆ. ಹಾಗೆಯೇ ಅದರ ಪರಿಣಾಮವನ್ನು ಎದುರಿಸುವುದಕ್ಕೆ ತೆಗದುಕೊಳ್ಳಬೇಕಾದ ಆರ್ಥಿಕ ಕ್ರಮಗಳ ಬಗ್ಗೆಯೂ ನಮಗೆ ಸ್ಪಷ್ಟವಾಗಿ ಗೊತ್ತಿಲ್ಲ. ನಮಗೆ ಜಾಗತಿಕ ಯುದ್ಧ ಹಾಗೂ ಸಾಂಕ್ರಮಿಕ ಪಿಡುಗುಗಳ ಚರಿತ್ರೆಯಿಂದ ಅಂತಹ ದುರಂತಗಳು ಮಾಡಬಹುದಾದ ಪರಿಣಾಮಗಳ ಬಗ್ಗೆ ಒಂದಿಷ್ಟು ಗೊತ್ತಿದೆ. ಅಂತಹ ದುರಂತಗಳು ದೇಶಗಳ ಹಾದಿಯನ್ನು ತಿರುಗುಮುರುಗು ಮಾಡಿಬಿಡಬಹುದು ಅನ್ನುವುದನ್ನು ಚರಿತ್ರೆಯಲ್ಲಿ ನೋಡಿದ್ದೇವೆ. ಗೆದ್ದಿರುವವರು ಸೋಲಬಹುದು, ಸೋತಿರುವವರು ಗೆಲ್ಲಬಹುದು. ಎಲ್ಲವೂ ಅನಿಶ್ಚಿತ. ಹಾಗೆಂದು ಸುಮ್ಮನಿರಲಾಗುವುದಿಲ್ಲ. ಭವಿಷ್ಯದ ಸ್ಥಿತಿಗತಿಗಳ ಬಗ್ಗೆ ಯೋಚಿಸಬೇಕು. ಅದು ತುಂಬಾ ಮುಖ್ಯ. ಜಾಗತಿಕ ಆರ್ಥಿಕತೆ, ಮತ್ತು ಎಲ್ಲಾ ದೇಶಗಳ ಆರ್ಥಿಕತೆಗಳೂ ಸುಸ್ಥಿತಿಯಲ್ಲಿರಬೇಕು. ಅದಕ್ಕೆ ಸಾಧ್ಯವಾದ ಎಲ್ಲವನ್ನೂ ಮಾಡಬೇಕು. ಜನ ಅನಾವಶ್ಯಕವಾಗಿ ಸಂಕಟಪಡಬಾರದು. ರಾಷ್ಟ್ರಗಳ ಆರ್ಥಿಕತೆ ಯಾವ ಹಾದಿಯಲ್ಲಿ ಸಾಗುತ್ತಿದೆ ಅನ್ನುವ ಪ್ರಾರಂಭದ ಸೂಚನೆಗಳು ಕಾಣತೊಡಗಿವೆ. ಅದನ್ನು ಆಧರಿಸಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ನಮ್ಮ ನಡುವಿನ ವ್ಯತ್ಯಾಸಗಳನ್ನು ಬದಿಗಿಡಬೇಕು. ಮನುಕುಲದ ಮುಂದಿರುವ ಈ ಸವಾಲನ್ನು ಎಲ್ಲರೂ ಒಟ್ಟಾಗಿ ಎದುರಿಸಬೇಕು. ಹಾಗೆ ಒಟ್ಟಾಗಿ ಕೆಲಸಮಾಡುವುದಕ್ಕೆ ಇದು ಸಕಾಲ.

ಈಗ ವೈರಾಣವನ್ನೂ ತಡೆಯಬೇಕು. ಆರ್ಥಿಕ ಚಟುವಟಿಕೆಯನ್ನೂ ಮುಂದುವರೆಸಿಕೊಂಡು ಹೋಗಬೇಕು. ಇದು ನಮ್ಮ ಮುಂದಿರುವ ದೊಡ್ಡ ಸವಾಲು. ಇವೆರಡರ ನಡುವೆ ಸರಿಯಾದ ಸಮತೋಲನವನ್ನು ಕಾಪಾಡಿಕೊಳ್ಳುವುದು ನಿಜವಾದ, ಬಹುಮುಖ್ಯವಾದ ಸಮಸ್ಯೆ. ವೈರಾಣುವನ್ನು ನಿಯಂತ್ರಿಸುವ ಸಂದರ್ಭದಲ್ಲಿ ಬಡವರು, ಕಾರ್ಮಿಕರು ಮತ್ತು ವಲಸೆಗಾರರು ಸಂಕಟಕ್ಕೆ ಸಿಲುಕಬಾರದು. ಹಾಗೆಯೇ ಆರ್ಥಿಕತೆಯ ಬುನಾದಿಯೇ ನಾಶವಾಗುವುದಕ್ಕೆ ಬಿಡಬಾರದು. ಮಹಾಮಾರಿಯಿಂದ ಹೊರಬಂದ ಮೇಲೆ ಆರ್ಥಿಕ ಬರಡುಭೂಮಿಯಲ್ಲಿ ಇರುವುದು ನಮಗೆ ಬೇಕಿಲ್ಲ. ಜೀವ ಹಾಗೂ ಜೀವನದ ನಡುವಿನ ಆಯ್ಕೆ, ಜೀವ ಜೀವದ ನಡುವಿನ ಆಯ್ಕೆಯೂ ಹೌದು.

ಕೊರೋನಾ ವೈರಾಣುವನ್ನು ನಿಯಂತ್ರಿಸುವ ಭಾರತದ ಪ್ರಯತ್ನವನ್ನೂ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಕೇವಲ ಕೇರಳದ ಪ್ರಯತ್ನವನ್ನು ಮಾತ್ರವಲ್ಲ. ಒಟ್ಟಾರೆ ದೇಶದ ಪ್ರಯತ್ನವನ್ನೂ ಮೆಚ್ಚಿಕೊಂಡಿದ್ದಾರೆ. ಕೇರಳದ ಪ್ರಯತ್ನವನ್ನಂತೂ ಎಲ್ಲಾ ದೇಶಗಳೂ ಕೊಂಡಾಡಿವೆ. ಕೋವಿಡ್–19 ಪ್ರಕರಣಗಳು ಭಾರತದಲ್ಲಿ ಕಡಿಮೆ ಇದೆ. ಪ್ರತಿ ಒಂದುಕೋಟಿ ಜನರಲ್ಲಿ ಸಧ್ಯಕ್ಕೆ 5ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಕೇವಲ ಬೆಲ್ಜಿಯಂಗೆ ಹೋಲಿಸಿ ಮಾತನಾಡುತ್ತಿಲ್ಲ. ಬೆಲ್ಜಿಯಂನಲ್ಲಿ ಸಾವಿನ ಸಂಖ್ಯೆ ಜಗತ್ತಿನಲ್ಲೇ ಅತಿ ಹೆಚ್ಚು. ಅಲ್ಲಿ ಪ್ರತಿ ಕೋಟಿಗೆ 5180 ಜನ ಸಾಯುತ್ತಿದ್ದಾರೆ. ಬೇರೆ ಹಲವು ದೇಶಗಳಿಗಿಂತಲೂ ನಮ್ಮಲ್ಲಿ ಕಡಿಮೆ ಇದೆ. ಅಮೇರಿಕೆಯಲ್ಲಿ ಹಾಗೆ ಸಾಯುತ್ತಿರುವವರ ಸಂಖ್ಯೆ 1370. ಸ್ಪೈನಿನಲ್ಲಿ 4550, ಇಟಲಿಯಲ್ಲಿ 4080, ಇಂಗ್ಲೆಂಡಿನಲ್ಲಿ 2550.

ನಿಷ್ಪಕ್ಷಪಾತವಾಗಿ ಹೇಳುವುದಾದರೆ ಹೀಗೆ ಸಾಯುತ್ತಿರುವವರ ಸಂಖ್ಯೆ ಕಡಿಮೆ ಇರುವುದು ಭಾರತದಲ್ಲಿ ಮಾತ್ರವಲ್ಲ. ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾದ ಹೆಚ್ಚಿನ ದೇಶಗಳಲ್ಲಿ ಸಾವಿನ ಪ್ರಮಾಣ ಕಡಿಮೆ ಇದೆ. ಬಾಂಗ್ಲಾದೇಶದಲ್ಲಿ 7, ಶ್ರೀಲಂಕಾದಲ್ಲಿ 3, ಪಾಕಿಸ್ತಾನದಲ್ಲಿ 9, ತಾಂಜೇನಿಯಾದಲ್ಲಿ 2, ನೈಜೀರಿಯಾದಲ್ಲಿ 1, ಇಥಿಯೋಪಿಯಾದಲ್ಲಿ 0.3. ಯೂರೋಪ್, ಉತ್ತರ ಅಮೇರಿಕಾ ಮತ್ತು ಆಫ್ರಿಕಾ, ದಕ್ಷಿಣ ಏಷ್ಯಾ ರಾಷ್ಟ್ರಗಳ ನಡುವೆ ತುಂಬಾ ವ್ಯತ್ಯಾಸವಿದೆ. ಆ ದೇಶಗಳು ಹೆಚ್ಚು ಪ್ರತ್ಯೇಕವಾಗಿವೆ. ಹಾಗಾಗಿ ಇಲ್ಲಿ ಸಾವಿನ ಪ್ರಮಾಣ ಕಡಿಮೆ ಅಂತ ಹೇಳುವುದಕ್ಕೆ ಆಗುವುದಿಲ್ಲ. ಬಾಂಗ್ಲಾದೇಶೀಯರು ಜಗತ್ತಿನ ಎಲ್ಲಾ ಕಡೆಯೂ ಅತಿ ಹೆಚ್ಚು ಸಂಖ್ಯೆಯಲ್ಲಿ ಹಂಚಿಹೋಗಿದ್ದಾರೆ. ಇಥಿಯೋಪಿಯಾಕ್ಕೆ ಚೀನಾ ಜೊತೆ ತುಂಬಾ ಒಡನಾಟವಿದೆ. ಆದರೆ ಅವೆರಡು ದೇಶಗಳಲ್ಲಿ ಸಾವಿನ ಪ್ರಮಾಣ ತುಂಬಾ ಕಡಿಮೆ. ಹೀಗೇಕೆ?

ಸರಳವಾಗಿ ಹೇಳಬೇಕೆಂದರೆ ನಮಗೆ ಗೊತ್ತಿಲ್ಲ. ಅದು ಏನೇ ಆಗಲಿ, ವೈರಾಣುವನ್ನು ನಿಯಂತ್ರಣದಲ್ಲಿಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಒಂದಂಶವನ್ನು ಮನವರಿಕೆ ಮಾಡಿಕೊಳ್ಳಬೇಕು. ರಿಸ್ಕೇ ಇಲ್ಲದ ಸ್ಥಿತಿ ಇರುವುದಕ್ಕೆ ಸಾಧ್ಯವಿಲ್ಲ. ಬದುಕಿನಲ್ಲಿ ರಿಸ್ಕೇ ಇಲ್ಲದ ಚಟುವಟಿಕೆಯೇ ಇಲ್ಲ. ವೈರಾಣುವನ್ನು ಮಣಿಸುವುದಕ್ಕೆ "ಮರುಉತ್ಪಾದನೆಯ ಸಂಖ್ಯೆಯನ್ನು" ಅಥವಾ ಆರ್–0 ಅನ್ನು ಒಂದಕ್ಕಿಂತ ಕಡಿಮೆ ಇರುವಂತೆ ನೋಡಿಕೊಳ್ಳಬೇಕು. ಆರ್–0 ಅಂದರೆ ಪ್ರತಿ ಸೋಂಕಿತ



ವ್ಯಕ್ತಿಯಿಂದ ಸೋಂಕು ಹರಡಿದ ಜನರ ಸಂಖ್ಯೆಯ ಸರಾಸರಿ. ಕೇರಳದಲ್ಲಿ ಆಗಿರುವಂತೆ ಯಾವುದೇ ಪ್ರದೇಶದಲ್ಲಿ ಆರ್–0 ಸಂಖ್ಯೆ ಒಂದಕ್ಕಿಂತ ಕಡಿಮೆಯಾದರೆ, ಆ ಪ್ರದೇಶದಲ್ಲಿ ಸೋಂಕಿನ ಪ್ರಕರಣಗಳು ನಿಲ್ಲುತ್ತಿದೆ ಅಂತ ಅರ್ಥ.

ಈಗ ಲಾಕ್ ಡೌನ್‌ನಿಂದ ಹೇಗೆ ಹೊರಗೆ ಬರುವುದು ಎನ್ನುವುದು ಒಂದು ದೊಡ್ಡ ಆರ್ಥಿಕ ನೀತಿಯ ಸವಾಲು. ಇದನ್ನು ತುಂಬಾ ಜಾಗರೂಕತೆಯಿಂದ ನಿರ್ವಹಿಸಬೇಕು. ಆದರೆ ತ್ವರಿತವಾಗಿ ಮಾಡಬೇಕು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಕೆಲ ಸಂಶೋಧಕರು ಜಗತ್ತಿನ 73 ದೇಶಗಳಲ್ಲಿ ಲಾಕ್‌ಡೌನ್ ಜಾರಿಗೆ ತಂದಿರುವುದರ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಅವರ ಪ್ರಕಾರ ಲಾಕ್‌ಡೌನನ್ನು ಹೆಚ್ಚು ಕಟ್ಟುನಿಟ್ಟಾಗಿ ಜಾರಿಗೆ ತಂದ ದೇಶಗಳಲ್ಲಿ ಭಾರತ ಪ್ರಥಮಸ್ಥಾನದಲ್ಲಿದೆ. ಕೆಲ ಕಾಲ ಇದು ಒಳ್ಳೆಯದು. ಅಷ್ಟೇ ಅಲ್ಲ ಭಾರತದಂತಹ ಹೆಚ್ಚು ಜನಸಂಖ್ಯೆ ಇರುವ ದೇಶಗಳಲ್ಲಿ ಇದು ನಿಜವಾಗಿ ಮೆಚ್ಚುವಂತಹದ್ದು. ಆದರೆ ಹೀಗೆ ಕಟ್ಟುನಿಟ್ಟಾಗಿ ಜಾರಿಗೊಳಿಸುವುದರಲ್ಲಿ ಪ್ರಥಮ ಸ್ಥಾನದಲ್ಲಿ ಬಹುಕಾಲ ಇರುವುದು ಯಾವುದೇ ದೇಶಕ್ಕೂ ಒಳ್ಳೆಯದಲ್ಲ. ಅದು ಬಡವರ ಮೇಲೆ ಭೀಕರ ಪರಿಣಾಮ ಬೀರುತ್ತದೆ. ಮತ್ತು ದೇಶದ ದೀರ್ಘಕಾಲೀನ ಆರ್ಥಿಕತೆಗೆ ತೊಂದರೆ ಮಾಡುತ್ತದೆ. ಭಾರತದ ನಿರುದ್ಯೋಗ ದರ ಈಗ ಶೇಕಡ 24ರಷ್ಟಿದೆ ಎಂದು ಹಲವು ಅಧ್ಯಯನಗಳು ತಿಳಿಸುತ್ತವೆ. ಈವರೆಗೂ ಎಂದೂ ಅದು ಇಷ್ಟಾಗಿರಲಿಲ್ಲ. ಮಾರ್ಚ್‌ನಲ್ಲಿ ಭಾರತದಿಂದ ಅಪಾರ ಪ್ರಮಾಣದ ಬಂಡವಾಳವು ಹೊರ ಹರಿದಿದೆ. ಒಂದೇ ತಿಂಗಳು ಸುಮಾರು 15 ಬಿಲಿಯನ್ ಡಾಲರ್ ದೇಶದಿಂದ ಹೊರಗೆ ಹೋಯಿತು. ಹಿಂದೆಂದೂ ಈ ಪ್ರಮಾಣದ ಹೊರಹರಿವು ಆಗಿರಲಿಲ್ಲ. ಇದು ಇಡೀ ಅಭಿವೃದ್ಧಶೀಲ ರಾಷ್ಟ್ರಗಳಲ್ಲೇ ಅತಿ ಹೆಚ್ಚು. ಆರ್ಥಿಕತೆ ಸ್ಥಗಿತಗೊಂಡಿರುವುದರಿಂದ ಜಾಗತಿಕ ಉದ್ದಿಮೆದಾರರು ಹೀಗೆ ಪ್ರತಿಕ್ರಿಯಿಸುತ್ತಿದ್ದಾರೆ. ಇದರಿಂದ ಭಾರತದ ರೂಪಾಯಿ ದುರ್ಬಲವಾಗಿದೆ. ಈಗ ಅತ್ಯಂತ ಕೆಳಮಟ್ಟ ತಲುಪಿದೆ. ಇದೂ ಕೂಡ ಹಿಂದೆಂದೂ ಈ ರೀತಿ ಆಗಿರಲಿಲ್ಲ. ನಿಜ, ಇಂದು ಜಾಗತಿಕ ಪರಿಸ್ಥಿತಿ ಅತ್ಯಂತ ಸಂಕಷ್ಟದಲ್ಲಿದೆ. ಇಂತಹ ಕೆಲವು ಸಮಸ್ಯೆಗಳು ಅನಿವಾರ್ಯ. ಕೇವಲ ಕೆಲವು ದಿನಗಳು ಅಂತಾದರೆ ನಿರ್ವಹಿಸಿಬಿಡಬಹುದು. ಆದರೆ ಈ ಸಮಸ್ಯೆಗಳು ಬಹುಕಾಲ ಕಾಡುವುದಕ್ಕೆ ಪ್ರಾರಂಭಿಸಿಬಿಟ್ಟರೆ ಕಷ್ಟ. ಜಾಗತಿಕ ವ್ಯಾಪಾರದಲ್ಲಿ, ರಫ್ತಿನಲ್ಲಿ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಬೇರೆ ದೇಶಗಳು ಕಸಿದುಕೊಳ್ಳಬಹುದು. ಕಾರ್ಮಿಕರ ಸಂಕಷ್ಟ ತೀವ್ರವಾಗಿಬಿಡುತ್ತದೆ.

ಮೇ 3ರಂದು ಲಾಕ್‌ಡೌನ್ ಹಂತ ಮುಗಿದ ಮೇಲೆ, ನಾವು ವ್ಯವಹಾರವನ್ನು ಪ್ರಾರಂಭಿಸಬೇಕು. ಖಾಸಗೀ ಕ್ಷೇತ್ರಕ್ಕೆ ಅವಕಾಶ ಮಾಡಿಕೊಡಬೇಕು. ಅದರಲ್ಲೂ ವಿಶೇಷವಾಗಿ ಅಸಂಘಟಿತ ಉದ್ದಿಮೆಗಳನ್ನು ಮತ್ತು ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲಿ ಜನ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಬೇಕು. ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು, ಮಾಸ್ಕ್ ಧರಿಸುವುದು, ಕೈತೊಳೆದುಕೊಳ್ಳುವುದು ಇತ್ಯಾದಿ ಕ್ರಮಗಳು ಜಾರಿಯಲ್ಲಿರಬೇಕು. ಬಡ ಕಾರ್ಮಿಕರು ಕೆಲಸಕ್ಕೆ ಬರುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು. ನಮ್ಮ ತೋಟಗಳು ಮತ್ತು ಕಾರ್ಖಾನೆಗಳು ಕೆಲಸ ಮಾಡಬೇಕು. ನಿಯಮಗಳು ಜನ "ಪಾಲ್ಗೊಳ್ಳುವುದಕ್ಕೆ" ಪ್ರೋತ್ಸಾಹಿಸಬೇಕೇ ಹೊರತು ಅಧಿಕಾರಶಾಹಿಯ "ಅನುಮತಿ" ಪಡೆಯುವಂತೆ ಇರಬಾರದು. ಭಾರತಕ್ಕೆ "ಪರ್ಮಿಟ್‌ರಾಜ್"ನ ದೀರ್ಘ ಇತಿಹಾಸವೇ ಇದೆ. ಎಲ್ಲ ವ್ಯವಹಾರಗಳನ್ನು ಅಧಿಕಾರಶಾಹಿ ನಿಯಂತ್ರಿಸುವ ಒಂದು ಪರಂಪರೆ ಇದೆ. ಇಂತಹ ಪ್ರವೃತ್ತಿ ದೊಡ್ಡ ಉದ್ದಿಮೆಗಳನ್ನು ಉಸಿರುಕಟ್ಟಿಸಿ ದೇಶದ ಆರ್ಥಿಕ ಬೆಳವಣಿಗೆ ಆಗದಂತೆ ಬಹುಕಾಲ ನೋಡಿಕೊಂಡಿದೆ. ಈ ಹಳೆಯ ಅಭ್ಯಾಸಕ್ಕೆ ಮರಳದಂತೆ ನೋಡಿಕೊಳ್ಳಬೇಕು. ಈ ಹಳೆಯ ಅಭ್ಯಾಸಕ್ಕೆ ಮರಳುವುದೆಂದರೆ ಭಾರತದ ಬೆಳವಣಿಗೆಗೆ ಇತಿಶ್ರೀ ಹಾಡಿದಂತೆಯೇ.

ಇಂದು ಭಾರತ, ಅಷ್ಟೇ ಏಕೆ ಎಲ್ಲಾ ಉದಯೋನ್ಮುಖ ರಾಷ್ಟ್ರಗಳು ಒಂದು ಕವಲುದಾರಿಯಲ್ಲಿವೆ. ಇಂದು ಜಗತ್ತು ಅನಿರೀಕ್ಷಿತವಾದ ತಿರುವುದಾರಿಯಲ್ಲಿದೆ. ಒಂದು ತಪ್ಪು ಹೆಜ್ಜೆಯೂ ತೀವ್ರವಾದ ದುಷ್ಪರಿಣಾಮ ಬೀರುತ್ತದೆ. ಅದು ತಪ್ಪಾಯಿತು, ಸರಿಪಡಿಸಿಕೊಂಡೆವು ಎನ್ನುವ ಒಂದು ಸಾಧಾರಣ ಘಟನೆಯಾಗುವುದಿಲ್ಲ. ತಪ್ಪುಹೆಜ್ಜೆಗಳು ದೇಶದ ಮುಂದಿನ ದಶಕಗಳ ಹಾದಿಯನ್ನೇ ಬದಲಿಸಿಬಿಡುತ್ತವೆ.

# ಪಿಡುಗಿನ ರೇಖೆಯನ್ನು ಹಾಗೂ ಆರ್ಥಿಕ ಹಿನ್ನಡೆಯ ರೇಖೆಯನ್ನು ಸಪಾಟು ಮಾಡೋಣ

ಪಿಯೆರೆ ಒಲಿವಿಯರ್ ಗೊರಿಂಚಸ್

UC Berkeley

Source: Mitigating the COVID Economic Crisis: Act Fast and Do Whatever It Takes

ಈಗ ಎರಡು ಬಿಕ್ಕಟ್ಟುಗಳನ್ನು ನಾವು ಎದುರಿಸುತ್ತಿದ್ದೇವೆ. ಒಂದು ಆರೋಗ್ಯದ ಬಿಕ್ಕಟ್ಟು ಮತ್ತೊಂದು  ಆರ್ಥಿಕ ಬಿಕ್ಕಟ್ಟು. ಆದರೆ ಈ ಅಗಾಧ ಪ್ರಮಾಣದ ಬಿಕ್ಕಟ್ಟನ್ನು ನಾವು ಚರಿತ್ರೆಯ ಇತ್ತೀಚಿನ ದಿನಗಳಲ್ಲಿ ಕಂಡಿರಲಿಲ್ಲ. ಈಗ ಪಿಡುಗನ್ನು ನಿಯಂತ್ರಿಸುವುದು ತುಂಬಾ ಮುಖ್ಯ. ಅದನ್ನು ಮೊದಲಿಗೆ ಒಪ್ಪಿಕೊಂಡುಬಿಡುತ್ತೇನೆ. ಇಂತಹ ಪಿಡುಗಿನ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯತಜ್ಞರು ಸಾಮಾನ್ಯವಾಗಿ ತೆಗೆದುಕೊಳ್ಳುವ ಕ್ರಮಗಳನ್ನು ಮೊದಲ ಚಿತ್ರ ಸ್ಥೂಲವಾಗಿ ಹೇಳುತ್ತದೆ.

ಯಾವುದೇ ದೇಶದ ಆರೋಗ್ಯ ವ್ಯವಸ್ಥೆಯ ಸಾಮರ್ಥ್ಯಕ್ಕೆ ಒಂದು ಮಿತಿ ಇರುತ್ತದೆ. ಅದರಲ್ಲಿನ ತೀವ್ರ ನಿಗಾ ಘಟಕಗಳು, ಹಾಸಿಗೆಗಳು, ವೃತ್ತಿಪರ ಸಿಬ್ಬಂದಿಗಳು, ವೆಂಟಿಲೇಟರುಗಳು ಇವೆಲ್ಲವೂ ಒಂದು ನಿರ್ದಿಷ್ಟ ಸಂಖ್ಯೆಯಲ್ಲಿರುತ್ತವೆ. ಹಾಗಾಗಿ ಒಂದು ನಿರ್ದಿಷ್ಟ ಸಂಖ್ಯೆಯ ರೋಗಿಗಳಿಗೆ ಮಾತ್ರ ಪರಿಣಾಮಕಾರಿಯಾಗಿ ಶುಶ್ರೂಷೆ ನೀಡುವುದಕ್ಕೆ ಒಂದು ವ್ಯವಸ್ಥೆಗೆ ಸಾಧ್ಯವಾಗುತ್ತದೆ. ಅದು ಅದಕ್ಕಿರುವ ಸಾಮರ್ಥ್ಯ. ಅದನ್ನು ಚಿತ್ರದಲ್ಲಿರುವ ಅಡ್ಡರೇಖೆ ಸೂಚಿಸುತ್ತದೆ.

ಕೊರೋನಾ ವೈರಾಣುವಿನ ಹರಡುವಿಕೆಯನ್ನು ನಿಯಂತ್ರಿಸದಿದ್ದರೆ, ಲಭ್ಯವಿರುವ ಸೌಲಭ್ಯದಿಂದ ಅದನ್ನು ನಿಭಾಯಿಸಲು ಸಾಧ್ಯವಿಲ್ಲ. ಹಲವಾರು ಸೋಂಕಿತರಿಗೆ ಶುಶ್ರೂಷೆ ಮಾಡುವುದಕ್ಕೆ ಆಗುವುದಿಲ್ಲ. ಸಾವಿನ ಪ್ರಮಾಣ ಏರುತ್ತದೆ. ಅಪಾಯಕಾರಿ ಮಟ್ಟವನ್ನು ತಲುಪುತ್ತದೆ. ಅಂತಹ ಸ್ಥಿತಿಯನ್ನು ಗ್ರಹಿಸಿಕೊಳ್ಳುವುದಕ್ಕೂ ಕಷ್ಟ. ಸೂಕ್ತ ಆರೋಗ್ಯ ವ್ಯವಸ್ಥೆ ಇಲ್ಲದ ಸಂದರ್ಭದಲ್ಲಿ ಶೇಕಡ 2ರಷ್ಟು ಜನ ಸಾಯಬಹುದು ಅನ್ನುವುದು ಒಂದು ಅಂದಾಜು. ಅದನ್ನು ಆಧಾರವಾಗಿಟ್ಟುಕೊಂಡು ಲೆಕ್ಕ ಹಾಕಿದರೆ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡ 50ರಷ್ಟು ಸೋಂಕು ತಗುಲಿದರೆ, ಅವರಲ್ಲಿ ಶೇಕಡ 2ರಷ್ಟು ಅಂದರೆ, ಒಟ್ಟಾರೆಯಾಗಿ 760 ಲಕ್ಷ ಜನ ಸಾಯುತ್ತಾರೆ. ಅದನ್ನು ಕೆಂಪು ರೇಖೆಯಲ್ಲಿ ಸೂಚಿಸಲಾಗಿದೆ. ಇರುವ ಆರೋಗ್ಯ ವ್ಯವಸ್ಥೆಯ ಸಾಮರ್ಥ್ಯವನ್ನು ಮೀರಿದ ಪ್ರಕರಣಗಳ ಸಂಖ್ಯೆಯನ್ನು ಕೆಂಪು ಬಣ್ಣ ತುಂಬಿರುವ ಭಾಗ ತೋರಿಸುತ್ತದೆ. ಅಂತಹ ಪ್ರಕರಣಗಳಲ್ಲಿ ಸಾವಿನ ಅಪಾಯ ಜಾಸ್ತಿ.

ಹಾಗೆ ಪರಿಸ್ಥಿತಿ ಕೈ ಮೀರಿ ಹೋಗಲು ಬಿಡುವ ಬದಲು ಸೋಂಕನ್ನು ನಿಯಂತ್ರಿಸಲು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು ಹಾಗೂ ಶುಶ್ರೂಷೆಗೆ ಸಂಬಂಧಿಸಿದಂತೆ ಸ್ವಲ್ಪಮಟ್ಟಿನ ಕ್ರಮಗಳನ್ನು ತೆಗೆದುಕೊಂಡರೆ, ಪಿಡುಗಿನ ರೇಖೆ ಸ್ವಲ್ಪಮಟ್ಟಿಗೆ ಸಪಾಟಾಗಿರುತ್ತದೆ. ಅಂತಹ ದೇಶಗಳಲ್ಲಿ ದಿಢೀರನೆ ಸೋಂಕು ಹೆಚ್ಚಾಗದೆ, ಹೆಚ್ಚಿನ ಅವಧಿಯಲ್ಲಿ ಅದು ಹರಡಿಕೊಂಡಿರುತ್ತದೆ. ಅದರಿಂದ ಹೆಚ್ಚು ಜನರಿಗೆ ಸೂಕ್ತ ಶುಶ್ರೂಷೆ ಸಿಗುವುದಕ್ಕೆ ಸಾಧ್ಯವಾಗಿದೆ. ಸಾವಿನ ಸಂಖ್ಯೆಯೂ ಕಡಿಮೆಯಾಗಿದೆ. ಇದನ್ನು ನೀಲಿ ರೇಖೆ ಸೂಚಿಸುತ್ತದೆ. ತೈವಾನ್, ಸಿಂಗಪುರ್, ಹಾಗೂ ಚೀನಾ ಅಂಥಹ ದೇಶಗಳಲ್ಲಿ ಈ ಕ್ರಮಗಳನ್ನು ಹೆಚ್ಚು ತೀವ್ರವಾಗಿ, ಕಠಿಣವಾಗಿ ಜಾರಿಗೆ ತರಲಾಗಿದೆ. ಅಂತಹ ದೇಶಗಳಲ್ಲಿ ಸೋಂಕು ಹರಡುವ ಹಾಗೂ ಸಾವಿನ ದರ ತೀವ್ರವಾಗಿ ಕಡಿಮೆಯಾಗಿದೆ. ಈಗ ಅಲ್ಲೆಲ್ಲಾ ಸೋಂಕು ಇಳಿಮುಖವಾಗುತ್ತಿದೆ. ಇದು ತಕ್ಷಣಕ್ಕೆ ತೆಗೆದುಕೊಳ್ಳಬಹುದಾದ ಸೂಕ್ತವಾದ ಅಲ್ಪಾವಧಿ ಸಾರ್ವಜನಿಕ ಆರೋಗ್ಯನೀತಿ ಅನ್ನುವುದರಲ್ಲಿ ಸಂದೇಹವೇ ಇಲ್ಲ.

ಅರೋಗ್ಯ ಅಧಿಕಾರಿಗಳು ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಹಾಗಾಗಿ ನಾವು ಇಂದು  ಸಪಾಟಾದ ಸೋಂಕಿನ ರೇಖೆಯ ಮೇಲೆ ಇದ್ದೇವೆ ಎಂದು ಭಾವಿಸೋಣ. ಇದರ ಬೃಹತ್ (ಮೇಕ್ರೋ) ಆರ್ಥಿಕ ಪರಿಣಾಮಗಳೇನು?

ಅಲ್ಪ ಕಾಲಾವಧಿಯಲ್ಲಿ ಸೋಂಕಿನ ರೇಖೆಯನ್ನು ಸಪಾಟುಗೊಳಿಸಲು ಪ್ರಯತ್ನಿಸಿದಾಗ ಬೃಹತ್ ಆರ್ಥಿಕ ಹಿಂಜರಿತದ ರೇಖೆ ಹೆಚ್ಚು ತೀವ್ರವಾಗುತ್ತದೆ. ಇದು ಅನಿವಾರ್ಯ.  ಚೀನಾ ಅಥವಾ ಇಟಲಿಯ ಉದಾಹರಣೆಯನ್ನು ಗಮನಿಸಿ. ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕಾದರೆ ಶಾಲೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ಮುಚ್ಚಬೇಕು. ಅಷ್ಟೊಂದು ಅವಶ್ಯಕವಲ್ಲದ ವ್ಯಾಪಾರವನ್ನು ನಿಲ್ಲಿಸಬೇಕು. ಹೆಚ್ಚಿನ ಕಾರ್ಮಿಕರನ್ನು ಮನೆಯಲ್ಲಿ ಉಳಿದುಕೊಳ್ಳಲು ಹೇಳಬೇಕು. ಕೆಲವು ಕೆಲಸಗಳನ್ನು ಮನೆಯಿಂದಲೇ ಮಾಡುವುದಕ್ಕೆ ಸಾಧ್ಯವಾಗಬಹುದು. ಆದರೆ ಹಾಗೆ ಮನೆಯಿಂದಲೇ ಕೆಲಸ ಮಾಡಬಹುದಾದ ಕೆಲಸಗಾರರ ಸಂಖ್ಯೆ ತುಂಬಾ ಕಡಿಮೆ. ಜೊತೆಗೆ ಅದರಿಂದ ತಕ್ಷಣ ನಿತ್ಯದ ಕೆಲಸದ ರೂಢಿಕ್ರಮದಲ್ಲಿ ಹಾಗೂ ಸಂಸಾರದ ದಿನನಿತ್ಯದ ಕ್ರಮದಲ್ಲೂ ವ್ಯತ್ಯಾಸವಾಗುತ್ತದೆ. ಇದು ಏರುಪೇರು ಉತ್ಪಾದನೆಯ ಮೇಲೂ ಪರಿಣಾಮ ಬೀರುತ್ತದೆ. ಅಂದರೆ ಸೋಂಕನ್ನು ನಿಯಂತ್ರಿಸಲು ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡರೆ ಅರ್ಥಿಕತೆ ದಿಢೀರನೆ ಸ್ಥಗಿತಗೊಳ್ಳುತ್ತದೆ. ಚೀನಾ ದೇಶದ ಯಾವುದೇ ಸೂಚ್ಯಾಂಕವನ್ನು ಗಮನಿಸಿದರೂ ಉತ್ಪಾದನೆ ಹಾಗೂ ವಾಣಿಜ್ಯದಲ್ಲಿ ಗಣನೀಯವಾಗಿ ಕುಸಿತವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಒಂದು ಪರಿಪೂರ್ಣ ಜಗತ್ತಿನಲ್ಲಿ ಸೋಂಕಿನ ಪ್ರಮಾಣ ಕಡಿಮೆಯಾಗುವವರೆಗೂ ಮತ್ತು ಸಾರ್ವಜನಿಕ ಆರೋಗ್ಯ ಅಧಿಕಾರಿಗಳು ಎಲ್ಲವು ಸರಿಹೋಗಿದೆ ಎಂದು ಘೋಷಿಸುವವರೆಗೂ ಜನ ತಾವಾಗಿಯೇ ಏಕಾಂತದಲ್ಲಿ ಉಳಿಯುತ್ತಾರೆ. ಸೋಂಕು ನಿಂತ ಮೇಲೆ ಆರ್ಥಿಕ ಯಂತ್ರಗಳು ಮತ್ತೆ ಕೆಲಸ ಆರಂಭಿಸುತ್ತವೆ. ಕೆಲಸಗಾರರು ಮತ್ತೆ ಕೆಲಸಕ್ಕೆ ಬರುತ್ತಾರೆ. ಫ್ಯಾಕ್ಟರಿಗಳು ಪ್ರಾರಂಭವಾಗುತ್ತವೆ. ಹಡುಗುಗಳು ಸರಕುಗಳನ್ನು ತುಂಬಿಕೊಳ್ಳುತ್ತವೆ. ವಿಮಾನಗಳು ಹಾರುತ್ತವೆ.

ಆದರೆ ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. 'ಪರಿಪೂರ್ಣ' ಜಗತ್ತಿನಲ್ಲೂ, ಇದರ ಪರಿಣಾಮವಾಗಿ ಆಗುವ ಆರ್ಥಿಕ ಹಾನಿ ಗಣನೀಯವಾಗಿರುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಸೋಣ. ಒಂದು ದೇಶದಲ್ಲಿ ಆರ್ಥಿಕ ಚಟುವಟಿಕೆ ಒಂದು ನಿರ್ದಿಷ್ಟ ಮಟ್ಟದಲ್ಲಿ ಸಾಗುತ್ತಿದೆ ಎಂದು ಭಾವಿಸಿಕೊಳ್ಳಿ. ರೋಗ ನಿಯಂತ್ರಣ ಕ್ರಮಗಳು ಒಂದು ತಿಂಗಳು ಆರ್ಥಿಕ ಚಟುವಟಿಕೆಯನ್ನು ಶೇಕಡ 50ರಷ್ಟು ಕಡಿಮೆ ಮಾಡುತ್ತದೆ ಎಂದು ಭಾವಿಸಿಕೊಳ್ಳೋಣ. ಮತ್ತೊಂದು ತಿಂಗಳು ಶೇಕಡ 25ರಷ್ಟು ಕಡಿಮೆ ಮಾಡುತ್ತದೆ ಎಂದು ಭಾವಿಸಿಕೊಳ್ಳೋಣ. ನಂತರ ಆರ್ಥಿಕತೆ ಸಾಮಾನ್ಯ ಮಟ್ಟದಲ್ಲಿ ಕೆಲಸ ಮಾಡಲು ಪ್ರಾರಂಭಿಸುತ್ತದೆ ಎಂದುಕೊಳ್ಳೋಣ. ಕಾರ್ಮಿಕರು ಕೆಲಸಕ್ಕೆ ಬರುವುದಕ್ಕಾಗದೇ ಇರುವ ಪರಿಸ್ಥಿತಿಯಲ್ಲಿ ಇದೇನೂ ಆಶ್ಚರ್ಯವಲ್ಲ. ಅದಕ್ಕಿಂತ ಹೆಚ್ಚಿನ ಪ್ರಮಾಣದ ಕುಸಿತವೂ ಸಾಧ್ಯ. ಇದರಿಂದ ದೇಶದ ಜಿಡಿಪಿಗೆ ದೊಡ್ಡ ಹಾನಿಯಾಗುತ್ತದೆ. ಇದರಿಂದ ಜಿಡಿಪಿ ಹಿಂದಿನ ವರ್ಷಕ್ಕಿಂತ ಶೇಕಡ 6.5ರಷ್ಟು ಕುಸಿಯಬಹುದು. ಇನ್ನೊಂದು ತಿಂಗಳು ಅದು ಮುಂದುವರಿದರೆ, ಜಿಡಿಪಿ ಶೇಕಡ 10ರಷ್ಟು ಕುಸಿಯುತ್ತದೆ! ಅನೇಕ ಅರ್ಥಶಾಸ್ತ್ರಜ್ಞರು ಹೇಳುವಂತೆ ಹೀಗೆ ನಷ್ಟವಾದ ಜಿಡಿಪಿ ಮತ್ತೆ ಬರುವುದಿಲ್ಲ.

ನಿಜ, ನಾವು ಲಾಕ್ ಡೌನ್ ಸಮಯದಲ್ಲಿ ಹಲವು ಬಾಳಿಕೆ ಬರುವ ವಸ್ತುಗಳನ್ನು ಕೊಳ್ಳುವುದನ್ನು ಮುಂದಕ್ಕೆ ಹಾಕಿರುತ್ತೇವೆ. ಲಾಕ್‌ಡೌನ್ ನಂತರ ಅವುಗಳನ್ನು ಕೊಳ್ಳುವುದಕ್ಕೆ ಮುಂದಾಗುತ್ತೇವೆ. ಆಗ ಅವುಗಳು ಮಾರಾಟದಲ್ಲಿ ಹೆಚ್ಚಳವನ್ನು ಕಾಣಬಹುದು. ಆದರೂ ಆರ್ಥಿಕ ಚಟುವಟಿಕೆ ಮಾಮೂಲಿ ಮಟ್ಟಕ್ಕೆ ಬರಬಹುದೇ ಹೊರತು ಹೆಚ್ಚುವ ಸಾಧ್ಯತೆ ಇಲ್ಲ.


2008–09ರ ಆರ್ಥಿಕ ಮುಗ್ಗಟ್ಟಿನ ಸಮಯವನ್ನು ಹೋಲಿಕೆಗಾಗಿ ಗಮನಿಸೋಣ. ಆಗ ಅಮೇರಿಕೆಯ ಬೆಳವಣಿಗೆ ಶೇಕಡ 4.5ರಷ್ಟು ಕುಸಿದಿತ್ತು. ಈಗಿನ ಕುಸಿತಕ್ಕೆ ಹೋಲಿಸಿದರೆ ಅದು ಅತ್ಯಲ್ಪ ಅನ್ನಿಸಿಬಿಡುತ್ತದೆ. ಈಗ ಯಾಕೆ ಆ ಪ್ರಮಾಣದ ಕುಸಿತವನ್ನು ಕಾಣುತ್ತಿದ್ದೇವೆ?

ಸರಳವಾಗಿ ಹೇಳುವುದಾದರೆ, ಹಣಕಾಸಿನ ಮುಗ್ಗಟ್ಟು ಉತ್ತುಂಗದಲ್ಲಿದ್ದ ಸಂದರ್ಭದಲ್ಲಿ ಒಂದು ತಿಂಗಳಿನಲ್ಲಿ 800,000 ಜನ ಕೆಲಸ ಕಳೆದುಕೊಂಡಿದ್ದರು. ಉಳಿದಂತೆ ಬಹುಪಾಲು ಜನರಿಗೆ ಉದ್ಯೋಗ ಇತ್ತು. ಅವರು ಕೆಲಸಮಾಡುತ್ತಿದ್ದರು. ಆಗ ನಿರುದ್ಯೋಗದ ದರ 'ಕೇವಲ' ಶೇಕಡ 10ರಷ್ಟಿತ್ತು. ಅದಕ್ಕೆ ವ್ಯತಿರಿಕ್ತವಾಗಿ ಈಗ ಕೊರೋನಾ ಬಿಕ್ಕಟ್ಟಿನಲ್ಲಿ ಕೆಲ ಕಾಲ ಶೇಕಡ 50ಕ್ಕಿಂತ ಹೆಚ್ಚು ಜನಕ್ಕೆ ಕೆಲಸ ಇಲ್ಲ. ಆರ್ಥಿಕ ಚಟುವಟಿಕೆಯ ಮೇಲಿನ ಅದರ ಪರಿಣಾಮವೂ ಅದೇ ಪ್ರಮಾಣದಲ್ಲಿ ಹೆಚ್ಚುತ್ತದೆ. ಆದರೆ ಇದು "ಆಶಾದಾಯಕ'ವಾದ ಪರಿಸ್ಥಿತಿ. ನಾವು ಅಂತಹ "ಪರಿಪೂರ್ಣ ಜಗತ್ತಿನಲ್ಲಿ" ಬದುಕುತ್ತಿಲ್ಲ.

ಈ ಪ್ರಮಾಣದಲ್ಲಿ ಕುಸಿತ ಆರ್ಥಿಕತೆಯಲ್ಲಿ ಆತಂಕವನ್ನು ಮೂಡಿಸುತ್ತದೆ. ಅದರಿಂದ ಗಂಭೀರವಾದ ಪರಿಣಾಮಗಳು ಆಗಬಹುದು. ಸರಿಯಾಗಿ ನಿರ್ವಹಿಸದೇ ಹೋದರೆ ಅದರಿಂದ ಅಪಾರವಾದ ಆರ್ಥಿಕ ನಷ್ಟವಾಗಬಹುದು. ಅಷ್ಟೇ ಅಲ್ಲ ಅದು ಧೀರ್ಘ ಕಾಲ ಕಾಡಬಹುದು.

ಆಧುನಿಕ ಕಾಲದ ಆರ್ಥಿಕತೆ ಅನ್ನುವುದು ಒಂದು ಸಂಕೀರ್ಣವಾದ ಬಲೆ. ಅದರಲ್ಲಿ ಉದ್ದಿಮೆದಾರರು, ಉದ್ದಿಮೆಗಳು, ಬಳಕೆದಾರರು, ಬ್ಯಾಂಕರುಗಳು ಹಾಗೂ ಹಣಕಾಸು ಮಧ್ಯವರ್ತಿಗಳು ಹೀಗೆ ಹಲವರು ಅದರ ಭಾಗವಾಗಿರುತ್ತಾರೆ. ಒಬ್ಬರು ಇನ್ನೊಬ್ಬರ ಕೆಲಸಗಾರರು, ದಣಿಗಳು, ಬಳಕೆದಾರರು, ಸಾಲಗಾರರು ಹೀಗೆ ಏನೇನೋ ಆಗಿರುತ್ತಾರೆ. ಧಿಡೀರನೆ ಆರ್ಥಿಕತೆ ಸ್ಥಗಿತಗೊಂಡಾಗ ಹಲವು ಘಟನೆಗಳು ಸಂಭವಿಸುತ್ತವೆ. ಪ್ರತ್ಯೇಕವಾಗಿ ನೋಡಿದಾಗ ಅವೆಲ್ಲಾ ಒಳ್ಳೆಯ ನಿರ್ಣಯಗಳೇ ಆಗಿರಬಹುದು. ಆದರೆ ಒಟ್ಟಾರೆಯಾಗಿ ನೋಡಿದಾಗ ಅದು ಅಪಾಯಕಾರಿಯಾದ ತೀರ್ಮಾನವಾಗಿರುತ್ತವೆ. ಅವುಗಳ ಪರಿಣಾಮ ಭೀಕರವಾಗಿರುತ್ತದೆ, ಗಂಭೀರವಾಗಿರುತ್ತದೆ.

ಮನೆಯಲ್ಲೇ ಉಳಿಯಿರಿ, ಹೊರಗೆ ಬರಬೇಡಿ ಅಂದಾಗ ಜನ 'ಇಲ್ಲ ನಮಗೆ ಹೊರಗೆ ಮಾಡುವುದಕ್ಕೆ ತುಂಬಾ ಮುಖ್ಯವಾದ ಕೆಲಸ ಇದೆ' ಎಂದು ಒಪ್ಪದೇ ಇರಬಹುದು. ಅದರಿಂದ ಸೋಂಕು ತೀವ್ರವಾಗುತ್ತದೆ. ಇದೇ ರೀತಿಯಲ್ಲಿ ವೈಯಕ್ತಿಕ ಮಟ್ಟದಲ್ಲಿ ಜನ ತೆಗೆದುಕೊಳ್ಳುವ ತೀರ್ಮಾನಗಳು ಒಟ್ಟಾರೆಯಾಗಿ ಆರ್ಥಿಕ ಕುಸಿತವನ್ನು ತೀವ್ರಗೊಳಿಸಬಹುದು. ಮನೆಯಲ್ಲೇ ಉಳಿದುಕೊಂಡ ಬಳಕೆದಾರನಿಗೆ ಹಣ ಖರ್ಚುಮಾಡುವುದಕ್ಕೆ ಅವಕಾಶಗಳು ಕಡಿಮೆ. ಅದು ಅನಿವಾರ್ಯ. ಆದರೂ ಭವಿಷ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಅನಿಶ್ಚಿತತೆ ಇರುವಾಗ ಇನ್ನಷ್ಟು ಖರ್ಚು ಕಡಿಮೆ ಮಾಡಿಕೊಳ್ಳೋಣ ಅನ್ನುವುದು ಸ್ವಾಭಾವಿಕ ಅನಿಸಿಕೆ







*Figure 2: Flattening the Recession Curve*

ಇರಬಹುದು. ಇದರಿಂದ ಉದ್ದಿಮೆಗಳ ವರಮಾನ ಇನ್ನಷ್ಟು ಕಡಿಮೆಯಾಗುತ್ತದೆ. ಹಾಲಿ ಇರುವ ದಾಸ್ತಾನು ಕೂಡ ವರಮಾನ ತಂದುಕೊಡುವುದಿಲ್ಲ. ಅವರ ಉತ್ಪನ್ನಗಳಿಗೆ ಬೇಡಿಕೆ ಕುಸಿಯುತ್ತದೆ. ಉದ್ದಿಮೆಗಳು ಖರ್ಚನ್ನು ಕಡಿಮೆ ಮಾಡಿಕೊಳ್ಳಲು ಬಯಸುತ್ತವೆ. ಮನೋರಂಜನೆ, ಪ್ರವಾಸದಂತಹ ಉದ್ದಿಮೆಗಳಂತೂ ಸಂಪೂರ್ಣವಾಗಿ ಕುಸಿಯುತ್ತವೆ. ಸಂಪೂರ್ಣ ನಾಶವಾಗುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಉದ್ದಿಮೆಗಳು ಖರ್ಚು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತವೆ. ಕೆಲಸಗಾರರನ್ನು ತೆಗೆಯುವ ಪ್ರಯತ್ನ ಮಾಡುತ್ತವೆ. ತೀರಿಸಲಾಗದ ಸಾಲದ ಹೊರೆ ಜಾಸ್ತಿಯಾಗುವುದರಿಂದ ಬ್ಯಾಂಕುಗಳು ಸಾಲಕೊಡುವುದನ್ನು ಕಡಿಮೆ ಮಾಡುತ್ತದೆ. ಹಣಕಾಸೇತರ ಕ್ಷೇತ್ರದ ಭವಿಷ್ಯ ಇನ್ನಷ್ಟು ಮಸಕಾಗುತ್ತದೆ. ಪೂರೈಕೆದಾರರನ್ನು ಹಣ ಪಾವತಿಸಲು ಒತ್ತಾಯಿಸಲಾಗುತ್ತದೆ. ಆತಂಕ ಹಾಗೂ ಭರವಸೆಯ ಕೊರತೆ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. ಒಂದಕ್ಕೊಂದು ಸೇರಿಕೊಂಡು ವ್ಯವಹಾರ ವಿಫಲಗೊಳ್ಳುತ್ತದೆ. ಮತ್ತೆ ಉದ್ದಿಮೆಗಳನ್ನು ಮುಚ್ಚುತ್ತವೆ. ಹಣಕಾಸು ಅಸ್ಥಿರತೆ ಹೆಚ್ಚುತ್ತದೆ. ಅಂದರೆ ವೈರಾಣು ಆರ್ಥಿಕ ಚಟುವಟಿಕೆಯನ್ನು ಮಂದಗೊಳಿಸುತ್ತದೆ. ನಮ್ಮ ಆರ್ಥಿಕ ವ್ಯವಸ್ಥೆಯೂ 'ಸೋಂಕಿ'ಗೆ ಒಳಗಾಗುತ್ತದೆ.

ನಮ್ಮ ದೇಹದಿಂದ ವೈರಾಣು ನಿರ್ಮೂಲವಾಗಬಹುದು. ಆದರೆ ನಮ್ಮ ಆರ್ಥಿಕ ವ್ಯವಸ್ಥೆಗೆ 'ಸೋಂಕು' ತಗಲುತ್ತದೆ. ಸೋಂಕಿನ ಆರ್ಥಿಕ ಸ್ವರೂಪ ಖಂಡಿತಾ ಮಾರಣಾಂತಿಕವಲ್ಲ. ಆದರೆ ಅದು ನಿಜವಾದ ಹಾನಿಯನ್ನು ಮಾಡಬಲ್ಲದು. ಅರ್ಥಶಾಸ್ತ್ರಜ್ಞರು ಎರಡು ಸಂದರ್ಭದಲ್ಲೂ – ಸೋಂಕು ಹಾಗೂ ಆರ್ಥಿಕ ಕುಸಿತ – ಬಾಹ್ಯವಾದ ಪರಿಣಾಮ ಆಗುತ್ತದೆ ಎನ್ನುತ್ತಾರೆ. ಪ್ರತ್ಯೇಕವಾಗಿ ನೋಡಿದಾಗ ಎಲ್ಲವೂ ಯುಕ್ತವಾದ ಕ್ರಿಯೆಯೇ ಆಗಿದ್ದರೂ ಒಟ್ಟಾರೆಯಾಗಿ ಅದು ಹಾನಿಕಾರಕವಾಗಿರಬಹುದು. ಅದರ ಫಲವಾಗಿ ಆರ್ಥಿಕತೆಯ ರೇಖೆಯನ್ನು 'ಸಪಾಟುಗೊಳಿಸಬೇಕಾದ' ಸಮಸ್ಯೆ ಬರುತ್ತದೆ. ಅದಕ್ಕೆ ಬೃಹತ್ ಆರ್ಥಿಕ ಬೆಂಬಲ ಬೇಕು. ಇಲ್ಲದೇ ಹೋದರೆ ರೇಖೆ ತೀವ್ರವಾಗಿ ಕುಸಿಯುತ್ತದೆ. ಅದನ್ನು ಚಿತ್ರ–2ರ ಕೆಂಪು ರೇಖೆ ಅದನ್ನು ವಿವರಿಸುತ್ತದೆ. ರೇಖೆಯ ತೀವ್ರ ಇಳಿತ ಉತ್ಪಾದನೆಯಲ್ಲಿ ತೀವ್ರವಾಗಿ ಹಾಗೂ ವೇಗವಾಗಿ ಆಗುತ್ತಿರುವ ನಷ್ಟವನ್ನು ಸೂಚಿಸುತ್ತದೆ. ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕೋಟ್ಯಾಂತರ ವಿಭಿನ್ನ ಜನ ಖರ್ಚಿನಲ್ಲಿ ಕಡಿತಮಾಡಿಕೊಳ್ಳುತ್ತಾರೆ, ಹೂಡಿಕೆಯನ್ನು ಕಡಿಮೆಮಾಡಿಕೊಳ್ಳುತ್ತಾರೆ. ಹೀಗೆ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಅದರ ಪರಿಣಾಮ ಆರ್ಥಿಕತೆಯ ಮೇಲೆ ತೀವ್ರವಾಗಿ ಆಗುತ್ತದೆ. ಇದೆ ಇಲ್ಲಿಯ ವ್ಯಂಗ್ಯ. ಈ ರೀತಿಯಲ್ಲಿ ಮನೆಯೊಳಗೆ ಉಳಿಯುವುದು ಆರ್ಥಿಕತೆಯ ದೃಷ್ಟಿಯಿಂದ ಋಣಾತ್ಮಕವಾದ ಬಾಹ್ಯಪರಿಣಾಮ.

ನಮಗೆ ಹೆಚ್ಚುವರಿಯಾದ ನಮಗೆ ಹೆಚ್ಚುವರಿ "ಆರ್ಥಿಕ ಸೋಂಕನ್ನು" ತಡೆಯುವುದಕ್ಕೆ ಸಾಧ್ಯವಾದರೆ ಆಗುವ ಆರ್ಥಿಕ ಕುಸಿತ ಸ್ವಲ್ಪ ಕಡಿಮೆ ಇರುತ್ತದೆ. ಅದನ್ನು ನೀಲಿಬಣ್ಣದ ಭಾಗ ತೋರಿಸುತ್ತದೆ. ಅಂದರೆ ಲಾಕ್ ಡೌನ್ ಸಂದರ್ಭದಲ್ಲಿ ಆದ ಉತ್ಪಾದನೆಯಲ್ಲಿನ ನಷ್ಟಕ್ಕೆ ನಮ್ಮ ಆರ್ಥಿಕ ನಷ್ಟವನ್ನು ಸೀಮಿತಮಾಡಿಕೊಂಡರೆ ಆಗುವ ಪರಿಣಾಮವನ್ನು ಅದು ತೋರಿಸುತ್ತದೆ. ಅದರ ಪರಿಣಾಮವೂ ಋಣಾತ್ಮಕವೇ. ಅದರ ಪ್ರಮಾಣವೂ ಹೆಚ್ಚೆ.

ಆದರೆ ಆರ್ಥಿಕತೆಗೇ 'ಸೋಂಕಾದಾಗ' ಅದರ ಪರಿಣಾಮ ಹೆಚ್ಚು ತೀವ್ರವಾಗುತ್ತದೆ. ಜೊತೆಗೆ ಮೇಲೆ ಸೂಚಿಸಿದ ಬೇರೆ ಬೇರೆ ಋಣಾತ್ಮಕ ಪರಿಣಾಮಗಳೂ ಸೇರಿಕೊಂಡು ಆರ್ಥಿಕ ಕುಸಿತ ಇನ್ನಷ್ಟು ತೀವ್ರವಾಗುತ್ತದೆ. ಇದನ್ನು ಕೆಂಪು ರೇಖೆ ಹಾಗೂ ಕೆಂಪು ಬಣ್ಣದ ಭಾಗ ವಿವರಿಸುತ್ತದೆ. ಆರೋಗ್ಯ ಬಿಕ್ಕಟ್ಟನ್ನು ಉಪಶಮನಗೊಳಿಸಲು ಬಳಸುವ ಕ್ರಮಗಳು ಆರ್ಥಿಕ ಬಿಕ್ಕಟ್ಟನ್ನು ತೀವ್ರಗೊಳಿಸುತ್ತದೆ. ಇದು ಕಾಕತಳೀಯವಲ್ಲ. ಇದು ಅಲ್ಪಕಾಲೀನವಾಗಿಯಾದರೂ ನಿಜ. ಇದರ ವಿರುದ್ಧವೂ ನಿಜ. ಅಂದರೆ ಆರ್ಥಿಕ ಬಿಕ್ಕಟ್ಟಿನ ಪರಿಹಾರವು ಆರೋಗ್ಯದ ಬಿಕ್ಕಟ್ಟನ್ನು ಬಿಗಡಾಯಿಸುತ್ತದೆ. ದೊಡ್ಡ ನೀಲಿ ಬಣ್ಣದ ಭಾಗವನ್ನು ಗಮನಿಸಿ. ಇದು ಆಯ್ಕೆಯ ಪ್ರಶ್ನೆ ಅನ್ನಿಸಬಹುದು. ಆದರೆ ಅಲ್ಲ. ನಿರುದ್ಯೋಗ ಹಾಗೂ ಸಾವಿನ ನಡುವೆ ಚರ್ಚಿಸುವುದಕ್ಕೆ ಏನೂ ಇಲ್ಲ (ಅದು ಈಗ ಸಂಭವಿಸುತ್ತಿರುವ ಅಪಾರವಾದ ಸೋಂಕು ಹಾಗೂ ಸಾವಿನ ಸಂದರ್ಭದಲ್ಲಂತೂ ಇಲ್ಲ). ಅಷ್ಟೇ ಅಲ್ಲ ಯಾವುದೇ ನಿಯಂತ್ರಣ ಕ್ರಮ ತೆಗೆದುಕೊಳ್ಳದೇ ಹೋಗಿದ್ದರೂ ಆರ್ಥಿಕ ಹಿಂಜರಿತ ಇದ್ದೇ ಇರುತ್ತಿತ್ತು. ಜನರು ಹಾಗೂ ಉದ್ದಿಮೆಗಳು ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು. ಜೊತೆಗೆ ಸರ್ಕಾರವೂ ಸೂಕ್ತವಾಗಿ ಸ್ಪಂದಿಸದೇ ಹೋದಾಗ ಉದ್ದಿಮೆಗಳಲ್ಲೂ ಈ ಪಿಡುಗನ್ನು ನಿಭಾಯಿಸುವುದನ್ನು ಕುರಿತಂತೆ ಅನಿಶ್ಚಿತತೆ ಇರತ್ತಿತ್ತು. ಅದರಿಂದ ಕುಸಿತ ಇನ್ನಷ್ಟು ಹೆಚ್ಚುತ್ತಿತ್ತು.

ನೆಮ್ಮದಿಯ ವಿಷಯವೆಂದರೆ "ಈ ಆರ್ಥಿಕ ಸೋಂಕನ್ನು" ತಪ್ಪಿಸುವ ಹಲವು ಆರ್ಥಿಕ ನೀತಿಗಳು ನಿರ್ಣಾಯಕವಾಗಿ ಕೆಲಸ ಮಾಡಬಲ್ಲವು. ಈ ಕ್ರಮಗಳ ಮೂಲ ಉದ್ದೇಶ ಎರಡು. ಒಂದು ಆರ್ಥಿಕ ರೇಖೆಯನ್ನು ಸಪಾಟು ಮಾಡುವುದು. ಮತ್ತು ಆರ್ಥಿಕ ಹಾನಿಯನ್ನು ಕೇವಲ ಕಾರ್ಮಿಕರು ಮನೆಯಲ್ಲಿ ಉಳಿದುಕೊಂಡಿದ್ದರಿಂದ ಆಗುವ ಆರ್ಥಿಕ ನಷ್ಟಕ್ಕೆ ಸೀಮಿತಗೊಳಿಸುವುದು. ಇದಕ್ಕೆ ಆಧುನಿಕ ಅರ್ಥಶಾಸ್ತ್ರದಲ್ಲಿ ಹಲವು ಕ್ರಮಗಳು ಚಾಲ್ತಿಯಲ್ಲಿವೆ. ಅವನ್ನು ಆರ್ಥಿಕ ವ್ಯವಸ್ಥೆಯ 'ತೀವ್ರ ನಿಗಾ ಘಟಕಗಳು, ಹಾಸಿಗೆಗಳು ಮತ್ತು

ವೆಂಟಿಲೇಟರುಗಳು' ಎಂದು ಭಾವಿಸಿಕೊಳ್ಳಿ.

ವಿಶೇಷವಾಗಿ ಕೇಂದ್ರ ಬ್ಯಾಂಕುಗಳು ಹಣಕಾಸು ಕ್ಷೇತ್ರಕ್ಕೆ ದ್ರವ್ಯತೆಯನ್ನು ಒದಗಿಸಬಹುದು. ವಿತ್ತೀಯ ಸ್ಥಿರತಾ ಕ್ರಮಗಳು ( ಸರ್ಕಾರದ ವಿತ್ತೀಯ ಆದಾಯವನ್ನು ಇಳಿಸುವುದು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ನೆರವನ್ನು ವರ್ಗಾಯಿಸುವುದು) ಕುಟುಂಬಗಳ ಮತ್ತು ಉದ್ದಿಮೆಗಳ ಮೇಲಿನ ಆರ್ಥಿಕ ಕುಸಿತದ ಪೆಟ್ಟನ್ನು ಕಡಿಮೆ ಮಾಡುವುದಕ್ಕೆ ನೆರವಾಗುತ್ತದೆ. ಇದರ ಜೊತೆಗೆ ಸರ್ಕಾರಗಳು ನಿರ್ದಿಷ್ಟ ವಿತ್ತೀಯ ಕ್ರಮಗಳನ್ನು ಅಥವಾ ಆರ್ಥಿಕ ಚಟುವಟಿಕೆಗಳನ್ನು ಬೆಂಬಲಿಸುವುದಕ್ಕೆ ಬೇಕಾದ ವಿಶಾಲವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಈ ಕ್ರಮಗಳು 'ಆರ್ಥಿಕ ರೇಖೆಯನ್ನು ಸಪಾಟು ಮಾಡು'ವುದಕ್ಕೆ ಅಂದರೆ ಆರ್ಥಿಕ ನಷ್ಟವನ್ನು ಕಡಿಮೆ ಮಾಡುವುದಕ್ಕೆ ನೆರವಾಗುತ್ತದೆ. ಇದನ್ನು ಚಿತ್ರ –2ರಲ್ಲಿ ತೋರಿಸಲಾಗಿದೆ. ಆರ್ಥಿಕ ನೀತಿ ಏನು ಮಾಡಬಲ್ಲದು, ಏನು ಮಾಡಲಾಗುವುದಿಲ್ಲ ಎನ್ನುವುದು ನಮಗೆ ಗೊತ್ತಿರಬೇಕು. ಆರ್ಥಿಕ ನೀತಿಗಳ ಉದ್ದೇಶ ಆರ್ಥಿಕ ಹಿಂಜರಿತವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವುದಲ್ಲ. ಅದು ಸಾಧ್ಯವೂ ಇಲ್ಲ. ಆರ್ಥಿಕ ಹಿಂಜರಿತ ಇದ್ದೇ ಇರುತ್ತದೆ. ಅದರ ಪ್ರಮಾಣವೂ ಅಪಾರವಾಗಿರುತ್ತದೆ. ಅದರೆ ಬಹುಶಃ ಅಲ್ಪಕಾಲಿಕವಾಗಿರಬಹುದು. ಸಧ್ಯಕ್ಕೆ ನಮ್ಮ ಅಧ್ಯತೆ ಅದರ ಎಲ್ಲಾ ದುಷ್ಪರಿಣಾಮಗಳನ್ನು ಕಡಿಮೆ ಮಾಡುವುದಾಗಬೇಕು. ಇಲ್ಲದೇ ಹೋದರೆ ಅದರ ಋಣಾತ್ಮಕ ಪರಿಣಾಮ ತೀವ್ರವಾಗಿಬಿಡಬಹುದು. ಹಾಗಾಗಿ ಆ ನಿಟ್ಟಿನಲ್ಲಿ ಕ್ರಮತೆಗೆದುಕೊಳ್ಳಬೇಕು. ಇಲ್ಲದೇ ಹಾಗೆ ಬಿಟ್ಟರೆ ಅದು ಉಲ್ಬಣಗೊಂಡು ತೀರಾ ಸಂಕೀರ್ಣವಾದ ಆರ್ಥಿಕ ಸರಪಳಿಯನ್ನು ನಾಶಗೊಳಿಸಬಹುದು. ಮತ್ತೆ ಅದನ್ನು ಸರಿಪಡಿಸುವುದಕ್ಕೆ ದೀರ್ಘಕಾಲ ಹಿಡಿಯುತ್ತದೆ.

**ಈ ದೃಷ್ಟಿಯಿಂದ ನಮ್ಮ ಆದ್ಯತೆಗಳು:**

1. ಕೆಲಸಗಾರರು ಉದ್ಯೋಗದಲ್ಲಿರುವಂತೆ ನೋಡಿಕೊಳ್ಳಬೇಕು. ಕ್ವಾರಂಟೇನ್ ಆಗಿದ್ದಾಗ ಅಥವಾ ಮನೆಯಲ್ಲೇ ಉಳಿದುಕೊಳ್ಳಬೇಕಾದ ಸಂದರ್ಭದಲ್ಲೂ ಅವರಿಗೆ ಅವರ ಕೂಲಿ ಸಿಗುವಂತಾಗಬೇಕು. ತಾತ್ಕಾಲಿಕವಾಗಿ ಅವರನ್ನು ಕೆಲಸದಿಂದ ತೆಗೆಯದಂತೆ ನೋಡಿಕೊಳ್ಳಬೇಕು. ಅವರಿಗೆ ನೆರವಾಗಬೇಕು. ಇಲ್ಲದೇ ಹೋದರೆ ಸಾರ್ವಜನಿಕ ಆರೋಗ್ಯ ನೀತಿಯನ್ನು ನೋಡಿಕೊಳ್ಳುವುದಕ್ಕೆ ಆಗುತ್ತದೆಯೇ ಅನ್ನುವುದು ಅನುಮಾನ. ಜನರಿಗೆ ಬಾಡಿಗೆ, ವಿಮೆ ಇತ್ಯಾದಿ ಮೂಲಭೂತ ಪಾವತಿಯನ್ನು ಮಾಡುವುದಕ್ಕೆ ಸಾಧ್ಯವಾಗುವಂತೆ ನೋಡಿಕೊಳ್ಳಬೇಕು.

2. ಉದ್ದಿಮೆಗಳು ದಿವಾಳಿಯಾಗಬಾರದು. ಈ ಬಿರುಗಾಳಿಯನ್ನು ದಾಟಿಕೊಳ್ಳುವುದಕ್ಕೆ ಅವರಿಗೆ ಬೆಂಬಲ ನೀಡಬೇಕು. ಅದಕ್ಕೆ ಸರಳವಾದ ಸಾಲದ ವ್ಯವಸ್ಥೆ, ತೆರಿಗೆ ಪಾವತಿಗೆ ತಾತ್ಕಾಲಿಕ ವಿನಾಯಿತಿ ನೀಡುವುದು, ಸಾಲದ ಪಾವತಿಯನ್ನು ರದ್ದುಗೊಳಿಸುವುದು, ಅಥವಾ ಅವಶ್ಯಕತೆ ಇರುವ ಕಡೆ ನೇರವಾಗಿ ಹಣಕಾಸಿನ ನೆರವನ್ನು ನೀಡುವುದು.

3. ತೀರಿಸಲಾಗದ ಸಾಲದ ಪ್ರಮಾಣ ಹೆಚ್ಚುವುದರಿಂದ ಹಣಕಾಸು ವ್ಯವಸ್ಥೆಗೆ ಬೆಂಬಲ ನೀಡಬೇಕು. ಹಾಗೆ ಬೆಂಬಲ ನೀಡುವುದರಿಂದ ಇದು ಮುಂದೆ ಹಣಕಾಸಿನ ಬಿಕ್ಕಟ್ಟಾಗುವುದು ತಪ್ಪುತ್ತದೆ.

ಈ ಕ್ರಮಗಳಿಂದ ಬಹುಶಃ ಆರ್ಥಿಕ ಬಿಕ್ಕಟ್ಟಿನ ತೀವ್ರತೆ ಕಡಿಮೆಯಾಗುತ್ತದೆ. ಮತ್ತು ಆರ್ಥಿಕ ಕುಸಿತವೂ ಕಡಿಮೆಯಾಗುತ್ತದೆ. ನಾವು ಕ್ರಮ ತೆಗೆದುಕೊಳ್ಳುವ ಸಮಯ ತುಂಬಾ ಮುಖ್ಯ. ಆರ್ಥಿಕತೆ ಸ್ಥಗಿತವಾಗಿರುವಾಗ ಆರ್ಥಿಕ ಕ್ರಮಗಳು ತುಂಬಾ ಅವಶ್ಯಕ. ನಾವು ಈಗ ನಿರ್ಣಾಯಕವಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಆರೋಗ್ಯ ಬಿಕ್ಕಟ್ಟು ಮುಗಿದ ಮೇಲೆ ಹೆಚ್ಚಿನ ಪ್ರೋತ್ಸಾಹಕ ಪ್ಯಾಕೇಜುಗಳು ಬೇಕಾಗುತ್ತದೆ. ಆಗ ಅದು ಇನ್ನೂ ತುಂಬಾ ದುಬಾರಿಯಾಗುತ್ತದೆ.

ಕ್ರಮಗಳನ್ನು ಸೂಕ್ತ ಸಮಯದಲ್ಲಿ ಕ್ರಮ ತೆಗೆದುಕೊಳ್ಳಬೇಕು ಅನ್ನುವುದಕ್ಕೆ ಇನ್ನೊಂದು ಆಯಾಮವೂ ಇದೆ. ಕಟ್ಟುನಿಟ್ಟಾದ ಆರೋಗ್ಯ ಕ್ರಮಗಳು ಸೋಂಕು ಹರಡುವುದನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಆದರೆ ಅದರಲ್ಲಿ ಒಂದು ತೊಂದರೆ ಇದೆ. ಜನಸಂಖ್ಯೆಯ ಬಹುಪಾಲು ಜನ ಸೋಂಕಿಗೆ ತೆರೆದುಕೊಂಡಿರುವುದಿಲ್ಲ. ಹಾಗಾಗಿ ನಿಯಂತ್ರಣದ ಕ್ರಮಗಳನ್ನು ಬಹುಕಾಲ ಮುಂದುವರಿಸಬೇಕಾಗಬಹುದು. ಇಲ್ಲದೇ ಹೋದರೆ ಮತ್ತೆ ಪಿಡುಗು ಪ್ರಾರಂಭವಾಗಬಹುದು.

ಚೀನಾ ಹಾಗೂ ತೈವಾನಿನಲ್ಲಿ ಮತ್ತೆ ಪ್ರಕರಣಗಳ ಸಂಖ್ಯೆ ಹೆಚ್ಚುವ ಸೂಚನೆಗಳೂ ಕಾಣುತ್ತಿವೆ. ಹಾಗಾದರೆ ಎಷ್ಟು ದಿನ ಲಾಕ್‌ಡೌನ್ ಅನ್ನು ಎಷ್ಟು ದಿನ ಮುಂದುವರಿಸಬಹುದು? ಆರ್ಥಿಕ ಹಿಂಜರಿತ ಅತ್ಯಂತ ಅಪಾಯಕಾರಿ ಪ್ರಮಾಣ ಮುಟ್ಟುವುದನ್ನು ಎಲ್ಲಿಯವರೆಗೆ ತಡೆಯಬಹುದು?

ಈಗಾಗಲೇ ಹೇಳಿದ ಸರಳವಾದ ಲೆಕ್ಕಾಚಾರವನ್ನು ಮತ್ತೆ ನೋಡೋಣ. ಮೊದಲ ತಿಂಗಳಿನಲ್ಲಿ ಶೇಕಡ 50ರಷ್ಟು ಮತ್ತು ಅನಂತರ ಎರಡು ತಿಂಗಳು ಶೇಕಡ 25ರಷ್ಟು ಉತ್ಪನ್ನವನ್ನು ಕಡಿಮೆ ಮಾಡಿದರೆ ಒಟ್ಟಾರೆಯಾಗಿ ಉತ್ಪನ್ನ ಜಿಡಿಪಿಯ ಶೇಕಡ 10ರಷ್ಟು ಕಡಿಮೆಯಾಗುತ್ತದೆ. ಇನ್ನೆರಡು ತಿಂಗಳು ಶೇಕಡ 75ರಷ್ಟು ಉತ್ಪಾದನೆಯನ್ನು ನಿರ್ವಹಿಸಿದರೆ ಮತ್ತೆ ಶೇಕಡ 5ರಷ್ಟು ವಾರ್ಷಿಕ ಉತ್ಪನ್ನ ಕಡಿಮೆಯಾಗುತ್ತದೆ. ಹಾಗಾಗಿ ಸರಿಯಾದ ತಂತ್ರ ಅನ್ನೋದು ಒಬಾ ಸೃಜನಶೀಲವಾದದ್ದು. ನಿಜವಾಗಿ ಇಂತಹ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಸರಿಯಾದ ಕ್ರಮ ಅಂದರೆ ಲಭ್ಯವಿರುವ ಆರೋಗ್ಯ ಸೌಲಭ್ಯದ ಸಾಮರ್ಥ್ಯವನ್ನು ಹೆಚ್ಚಿಸುವುದು. ಅಂದರೆ ಚಿತ್ರ ಒಂದರಲ್ಲಿ ಬರುವ ಅಡ್ಡರೇಖೆಯನ್ನು ಮೇಲೆ ಏರಿಸಬೇಕು ಇದರಿಂದ ಹೆಚ್ಚು ಸೋಂಕಿತರನ್ನು ಶುಶ್ರೂಷೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ನಿಯಂತ್ರಣವನ್ನು ಸಡಿಲಗೊಳಿಸುವುದಕ್ಕೂ ಅನುಕೂಲವಾಗುತ್ತದೆ. ಇದರಿಂದ ಆರ್ಥಿಕತೆಗೂ ನೇರವಾಗಿ ಅನುಕೂಲವಾಗುತ್ತದೆ. ಸಾರ್ವಜನಿಕ ಆರೋಗ್ಯಕ್ಕೆ ತೋರುವ ಪ್ರತಿಕ್ರಿಯೆಗೂ ಹಾನಿಯಾಗುವುದಿಲ್ಲ. ಆರ್ಥಿಕತೆಗೂ ಅನುಕೂಲವಾಗುತ್ತದೆ.

ಆದರೆ ಇಂತಹ ಕ್ರಮಗಳಿಂದ ವಿತ್ತೀಯ ಹೊರೆ ಹೆಚ್ಚುತ್ತದೆ. ಅದು ಅನಿವಾರ್ಯ. ಸರ್ಕಾರಗಳು ಒಟ್ಟಾರೆ ಉತ್ಪನ್ನದಲ್ಲಿ ಆಗಿರುವ ನಷ್ಟಕ್ಕೆ ಅನುಗುಣವಾಗಿ ಆದಾಯ ಬೆಂಬಲ ನೀಡಬೇಕು. ಒಟ್ಟಾರೆ ನಷ್ಟ ಜಿಡಿಪಿಯ ಶೇಕಡ 10ರಷ್ಟಾದರೆ ಅದಕ್ಕೆ ಸರಿಗಟ್ಟುವ ಪ್ರಮಾಣದಲ್ಲಿ ವಿತ್ತೀಯ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು. ಆರೋಗ್ಯ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಹಾಕುತ್ತಾ ಕೂರಬಾರದು. ಉದಾಹರಣೆಗೆ ಇಂಗ್ಲೆಂಡ್ 39ಬಿಲಿಯನ್ ಡಾಲರ್ ನೆರವನ್ನು ಘೋಷಿಸಿತು. ಆದರೆ ಇದು ಇಂಗ್ಲೆಂಡಿನ್ ಒಟ್ಟಾರೆ ಉತ್ಪನ್ನದ 'ಕೇವಲ' ಶೇಕಡ 1.5ರಷ್ಟು. ಮಾರುಕಟ್ಟೆ ಇದನ್ನು ಸಂಭ್ರಮಿಸಿತು. ಈ ಪ್ರಮಾಣವನ್ನು ನಿರ್ಧರಿಸುವುದು ಹೇಗೆ? ಆಸ್ಪತ್ರೆಯಲ್ಲಿ ಲಭ್ಯವಿರುವ ಹಾಸಿಗೆಗಳು, ವೆಂಟಿಲೇಟರುಗಳು, ಆರೋಗ್ಯ ಸಿಬ್ಬಂದಿಗಳು ಇವೆಲ್ಲಾ ಒಟ್ಟಾಗಿ ಆರೋಗ್ಯ ವ್ಯವಸ್ಥೆಯ ಸಾಮರ್ಥ್ಯವನ್ನು ನಿರ್ಧರಿಸುತ್ತದೆ. ಹಾಗೆಯೇ ಬೃಹತ್ ಆರ್ಥಿಕ ಕ್ರಮಗಳಿಗೂ ಒಂದು ಮಿತಿ ಅನ್ನುವುದು ಇದೆಯಾ? ಕೆಲವು ಅಪವಾದಗಳನ್ನು ಬಿಟ್ಟರೆ ನಮಗೆ ಅಂತಹ ಮಿತಿಗಳಿಲ್ಲ. ಮೊದಲಿಗೆ ಈಗ ಸಾವರಿನ್ ತುಂಬಾ ಅಗ್ಗವಾಗಿ ಸಿಗುತ್ತದೆ. ಈ ಬಿಕ್ಕಟ್ಟು ಪ್ರಾರಂಭವಾಗುವುದಕ್ಕೆ ಮೊದಲಿದ್ದಕ್ಕಿಂತ ಅದರ ದರ ಇನ್ನೂ ಕಡಿಮೆ ಆಗಿದೆ.

10ವರ್ಷದ ಯುಎಸ್ ಟ್ರಜರಿಯ ಆದಾಯ ಶೇಕಡ 0.88; ಯೂರೋ ಪ್ರದೇಶಗಳಲ್ಲೂ ಅದು ಇದೇ ರೀತಿಯಲ್ಲಿ ತುಂಬಾ ಕಡಿಮೆ ಇದೆ. ಸಾಲ–ಜಿಡಿಪಿ ಪ್ರಮಾಣ ಶೇಕಡ 10ರಷ್ಟು ಹೆಚ್ಚಾದರೂ ವಾರ್ಷಿಕ ಬಡ್ಡಿ ಕೇವಲ ಜಿಡಿಪಿಯ ಶೇಕಡ 0.1ರಷ್ಟಾಗುತ್ತದೆ. ಕುಸಿದು ಹೋಗುತ್ತಿರುವ ಆರ್ಥಿಕತೆಯನ್ನು ಉಳಿಸಲು ಸಾಲಮಾಡುವುದಕ್ಕೆ ಇದಕ್ಕಿಂತ ಸೂಕ್ತ ಸಮಯ ಇನ್ನೊಂದಿರಲಿಕ್ಕಿಲ್ಲ.

ಹೆಚ್ಚು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಸಾರ್ವಜನಿಕ ಸಾಲ ಹೆಚ್ಚುತ್ತದೆ. ಆ ಸವಾಲನ್ನು ಎದುರಿಸುವುದಕ್ಕೆ ಆ ರಾಷ್ಟ್ರಗಳು ಸಿದ್ದರಿರಬೇಕು. ಅದಕ್ಕೆ ಕೆಲವು ಅಪವಾದಗಳಿವೆ. ಇಟಲಿಯಂತಹ ದೇಶಗಳಲ್ಲಿ ಈಗ ಸಾರ್ವಜನಿಕ ಸಾಲದ ಮಟ್ಟ ತುಂಬಾ ಹೆಚ್ಚಿದೆ. ಮತ್ತು ಅಲ್ಲಿ ವಿತ್ತೀಯ ನಿಯಮಗಳು ಹೆಚ್ಚು ಕಠಿಣವಾಗಿದೆ. ಅದಕ್ಕೆ ಉತ್ತರ ಸ್ಪಷ್ಟ. ಯೂರೋ ಕ್ಷೇತ್ರಗಳು ಇದನ್ನು ಬೆಂಬಲಿಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕು. ಬೆಂಬಲ ಯಾವುದೇ ರೂಪದಲ್ಲಾದರೂ ಇರಬಹುದು.

ಮೊದಲನೆಯದಾಗಿ ಯುರೂಪಿಯನ್ ಕಮಿಷನ್ ತಾತ್ಕಾಲಿಕವಾಗಿ ಬಜೆಟ್ ನಿಯಮವನ್ನು ರದ್ದುಗೊಳಿಸುತ್ತದೆ ಅನ್ನುವುದರಲ್ಲಿ ಅನುಮಾನವಿಲ್ಲ. ಅದರಿಂದ ಇಟಲಿಯಂತ ದೇಶಗಳಿಗೆ ಇನ್ನೂ ಹೆಚ್ಚಿನ ಕೊರತೆಗೆ ಅವಕಾಶವಾಗುತ್ತದೆ. ಆದರೆ ಇಟಲಿಯ ಸಮಸ್ಯೆಯನ್ನು ಸರಿತೂಗಿಸುವುದಕ್ಕೆ ಅಷ್ಟು ಸಾಲುವುದಿಲ್ಲ. ಇಟಾಲಿಯ ಸಾಲದ ಮಟ್ಟ ಅತಿ ಹೆಚ್ಚು ಇರುವಾಗ ಮತ್ತು ಸಧ್ಯದ ಹಣಕಾಸು ಪರಿಸ್ಥಿತಿ ಅಸ್ಥಿರವಾಗಿರುವಾಗ ಅದಕ್ಕೆ ಬಲವಾದ ಆಸರೆ ಬೇಕು. ಇಸಿಬಿ ಇಂದ ಔಟ್ ರೈಟ್ ಮಾನಿಟರಿ ಟ್ರಾನ್ಸಾಕ್ಷನ್ ಒಎಂಟಿ ಕಾರ್ಯಕ್ರಮ ಅಂತಹ ಒಂದು



ಕಾರ್ಯಕ್ರಮವಾಗಬಹುದು. ಇದರಲ್ಲಿ ಯುರೋಪಿನ ಕೇಂದ್ರ ಬ್ಯಾಂಕು ಸಾವರಿನ್ ಬಾಂಡನ್ನು ಕೊಂಡುಕೊಳ್ಳುತ್ತದೆ. ಈ ಸಂದರ್ಭದಲ್ಲಿ ಅದು ಸಂಪೂರ್ಣ ಅನಾವಶ್ಯಕ.

ಈ ಬಿಕ್ಕಟ್ಟಿನಲ್ಲಿ 'ಇಟಾಲಿಯನ್' ಅನ್ನುವಂತದ್ದು ಏನೂ ಇಲ್ಲ. ಅಥವಾ "ನಾವೆಲ್ಲರೂ ಇಟಾಲಿಯನ್ನರೇ" ಅಂತ ಯುರೋಪಿಯನ್ನರು ಅರ್ಥ ಮಾಡಿಕೊಳ್ಳಬೇಕು. ಇಂದು ಇಟಲಿ ಇರುವ ಸ್ಥಿತಿಯಲ್ಲೇ ನಾಳೆ ಫ್ರಾನ್ಸ್, ಜರ್ಮನಿ ಹಾಗು ಇತರ ಯುರೋಪಿಯನ್ ದೇಶಗಳೂ ಇರುತ್ತವೆ. ನಮ್ಮೆಲ್ಲರ ಮುಂದಿರುವ ಅಪಾಯ ಸಮಾನವಾದದ್ದು. ಹಾಗಿರುವಾಗ ಪರಿಹಾರವೂ ಒಂದೇ ಆಗಿರುತ್ತದೆ. ಇದನ್ನು ಮೂಲಭೂತ ಆರ್ಥಿಕ ಸಿದ್ಧಾಂತ ಹೇಳಿದೆ.

ಇದಕ್ಕೆ ಒಂದು ಸೂಕ್ತ ಪರಿಹಾರ ಅಂದರೆ ಯುರೋಬಾಂಡ್ ಬಿಡುಗಡೆ ಮಾಡುವುದು. ಎರಡು ನಿರ್ದಿಷ್ಟ ಉದ್ದೇಶಗಳಿಗಾಗಿ ಅದನ್ನು ಬಳಸಿಕೊಳ್ಳಬಹುದು. ಮೊದಲನೆಯದಾಗಿ ಆರೋಗ್ಯ ಸಂಬಂಧಿ ಕ್ರಮಗಳಿಗೆ ಅವಶ್ಯಕವಾದ ಖರ್ಚನ್ನು ಸರಿತೂಗಿಸುವುದಕ್ಕೆ. ಎರಡನೆಯದಾಗಿ ಸಂಕಷ್ಟದಲ್ಲಿರುವ ದೇಶಗಳಲ್ಲಿ ಆರ್ಥಿಕ ಅವ್ಯವಸ್ಥೆ ಆಗದಂತೆ ರಕ್ಷಿಸಿಕೊಳ್ಳುವುದಕ್ಕೆ. ಹಲವು ಯೂರೋ ವಲಯದ ಸದಸ್ಯರು ಯುರೋಬಾಂಡ್ ಸೃಷ್ಟಿಸುವುದನ್ನು ವಿರೋಧಿಸುತ್ತಾರೆ. ಅವರ ಒಂದು ತಕರಾರು ಅಂದರೆ ಅದರಲ್ಲಿ ಒಂದು ನೈತಿಕ ಸಮಸ್ಯೆ ಇದೆ ಎನ್ನುವುದು. ಅಂದರೆ ಮುಂದೆ ಹಲವು ದೇಶಗಳು ವಿತ್ತೀಯ ಶಿಸ್ತನ್ನು ಪಾಲಿಸದೇ ಇರಬಹುದು. ಎಂಬ ಆತಂಕ ಅವರದ್ದು. ತಮ್ಮ ಹೊರೆಯನ್ನು ಬೇರೆ ದೇಶಗಳು ಹೊರುತ್ತ ತಮ್ಮ ಹೊರೆಯನ್ನು ಹೊರುತ್ತವೆ ಎಂದು ಅವು ಯೋಚಿಸಬಹುದು. ಆದರೆ ಕೊರೋನಾ ವೈರಾಣು ನಮ್ಮ ಮುಂದೆ ಒಡ್ಡಿರುವ ಸವಾಲನ್ನು ಗಮನಿಸಿದರೆ ಇದು ದೊಡ್ಡ ತಕರಾರೇನಲ್ಲ. ವೈರಾಣುವಿನ **ಆರ್ ಎನ್ ಎ** ಎಳೆ ನೀವು ಕೊಡುವ ರಿಯಾಯಿತಿಗಳನ್ನಾಗಲಿ, ಅಥವಾ ದೇಶದ ಸರಹದ್ದುಗಳನ್ನಾಗಲಿ ಯಾವುದನ್ನೂ ಲೆಕ್ಕಿಸುವುದಿಲ್ಲ.

ಇಟಲಿಯವರು ಅಳವಡಿಸಿಕೊಂಡ ನೀತಿಗಳನ್ನು ತಪ್ಪು ಅನ್ನುವುದಕ್ಕಾಗುವುದಿಲ್ಲ. ಆ ಪ್ರಾಂತ್ಯದ ಎಲ್ಲಾ ದೇಶಗಳಿಗೂ ಅದರಿಂದ ಅನುಕೂಲವಾಗಿದೆ. ಅವ–ರಿಗೆ ಎಲ್ಲಾ ರೀತಿಯ ಯುರೋಪಿಯನ್ ಬೆಂಬಲವೂ ಸಿಗಬೇಕು. ಒಂದು ಯೂರೋ ಪ್ರದೇಶಕ್ಕೆ "ಕೊರೋನಾ ಬಾಂಡ್" ಬಿಡುಗಡೆ ಮಾಡುವುದ–ರಿಂದ ಯುರೋಪಿಯನ್ ದೇಶಗಳು ತಮ್ಮ ತೀರ ದುರ್ಬಲ ಸದಸ್ಯರ ಬೆಂಬಲಕ್ಕೆ ನಿಲ್ಲುತ್ತೇವೆ ಎಂಬ ಬಲವಾದ ಸಂದೇಶವನ್ನು ರವಾನಿಸಿದಂತೆ ಆಗುತ್ತದೆ. ಒಂದು ಸಮಾನ ಸಂಕಷ್ಟ ಎದುರಾದಾಗ ಎಲ್ಲಾ ಒಟ್ಟಿಗೆ ನಿಲ್ಲುತ್ತೇವೆ ಎಂದು ಗಟ್ಟಿಯಾಗಿ ಹೇಳಿಂದಂತಾಗುತ್ತದೆ. ಇದು ಹಣಕಾಸು ನೀತಿಗಿಂತ ಹೆಚ್ಚು ಪ್ರಬಲವಾದ ಕ್ರಮ. ಇದು ಆರ್ಥಿಕ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಸಂಕಷ್ಟದಲ್ಲಿರುವ ಎಲ್ಲಾ ಯುರೋಪಿಯನ್ ದೇಶಗಳಲ್ಲಿರುವ ಆರೋಗ್ಯ ಅಧಿಕಾರಿಗಳಿಗೆ ನಿಜವಾದ ಯುದ್ಧವನ್ನು ಎದುರಿಸುವುದಕ್ಕೆ ನೆರವಾಗುತ್ತದೆ.

ಒಂದು ನಿರ್ದಿಷ್ಟ ಉದ್ದೇಶಕ್ಕೆ ಯೂರೋಬಾಂಡನ್ನು ಬಿಡುಗಡೆ ಮಾಡುವುದು ಯುರೋಪಿಯನ್ನರಿಗೆ ಒಪ್ಪಿಗೆ ಇಲ್ಲದೇ ಹೋದರೆ ಪರ್ಯಾಯವಾಗಿ ದೊಡ್ಡ ಪ್ರಮಾಣದಲ್ಲಿ ಸಾವರಿನ್ ಡೆಟ್ ಇಸ್ಯುಯೆನ್ಸ್ ಮಾಡಬಹುದು. ಜೊತೆಗೆ ಕೇಂದ್ರ ಬ್ಯಾಂಕು ಮಾರುಕಟ್ಟೆಯಲ್ಲಿರುವ ಬಾಂಡನ್ನು ಕೊಂಡುಕೊಂಡು ಹೆಚ್ಚಿನ ಹಣ ಲಭ್ಯವಿರುವಂತೆ ನೋಡಿಕೊಳ್ಳಬಹುದು.

ಹಲವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಇದೂ ಸಾಧ್ಯವಾಗದೇ ಇರಬಹುದು. ಅಂತಹ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳ (ಜಾಗತಿಕ ಬ್ಯಾಂಕ್, ಐಎಂಎಫ್ ಇತ್ಯಾದಿ) ನೆರವು ಅವುಗಳಿಗೆ ತುಂಬಾ ಸಹಾಯಕ್ಕೆ ಬರುತ್ತದೆ. ಮುಂದುವರಿದ ದೇಶಗಳು ಇಂತಹ ಸಂಸ್ಥೆಗಳಿಗೆ ನೆರವಾಗಬೇಕು. ಆಗ ಅವುಗಳಿಗೆ ಅಭಿವೃದ್ಧಶೀಲ ರಾಷ್ಟ್ರಗಳಿಗೆ ನೆರವಾಗುವುದಕ್ಕೆ ಸಾಧ್ಯವಾಗುತ್ತದೆ. ಈಗ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸೋಂಕನ್ನು ನಿಯಂತ್ರಿಸುವುದಕ್ಕೆ ಆಗದೇ ಹೋದರೆ, ಜಗತ್ತಿನ ಉಳಿದ ಭಾಗಗಳಲ್ಲೂ ಅದನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ. ಈಗಲೇ ಅದನ್ನು ನಿಯಂತ್ರಿಸುವುದಕ್ಕೆ ಪ್ರಯತ್ನಿಸುವುದು ಒಳ್ಳೆಯ ಆರೋಗ್ಯ ನೀತಿ.

ಹಾಗೆಯೇ ಈಗ ಆರ್ಥಿಕ ನೆರವು ನೀಡುವುದಕ್ಕೆ ಕಡಿಮೆ ಹಣ ಸಾಕು. ಅಷ್ಟೇ ಅಲ್ಲ ಆರ್ಥಿಕತೆಗಳು ಮುಂದೆ ದಿವಾಳಿಯಾಗುವ ಸಾಧ್ಯತೆಯು ಕಡಿಮೆಯಾಗುತ್ತದೆ. ನಿಜವಾಗಿ ಮುಂದೆ ಬರಬಹುದಾದ ಮುಗ್ಗಟ್ಟನ್ನು ನಿಯಂತ್ರಿಸಲು ಆರ್ಥಿಕ ಕ್ರಮಗಳನ್ನು ಧೈರ್ಯವಾಗಿ ಈಗಲೇ ತೆಗೆದುಕೊಳ್ಳಬೇಕು. ಅದು ಸಧ್ಯಕ್ಕೆ ನಾವು ಮಾಡಬೇಕಾದ ಕೆಲಸ. ಅದು ಒಳ್ಳೆಯ ಆರ್ಥಿಕ ನೀತಿ.

ಸರಿಯಾದ ನೀತಿ ಅಂದರೆ "ಮಾನವನ ಸೋಂಕನ್ನು" ತಡೆಯಲು ಸಾರ್ವಜನಿಕ ಆರೋಗ್ಯ ನೀತಿಯನ್ನು ರೂಪಿಸಬೇಕು. ಮುಂಚಿತವಾಗಿಯೇ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು. ಹಾಗೆಯೇ ಆರ್ಥಿಕ ವ್ಯವಸ್ಥೆಗೆ ಬಿದ್ದಿರುವ ಹೊಡೆತವನ್ನು ನಿಭಾಯಿಸಲು ಹಾಗೂ "ಆರ್ಥಿಕ ಸೋಂಕನ್ನು" ತಗುಲದಂತೆ ನೋಡಿಕೊಳ್ಳಲು ಈಗಲೇ ವಿತ್ತೀಯ ಹಾಗೂ ಹಣಕಾಸಿನ ನೀತಿಯನ್ನು ಕೂಡ ರೂಪಿಸಬೇಕು. ಇದು ಜಾಗ್ರತೆಯಿಂದ ಇರಬೇಕಾದ ಸಮಯವಲ್ಲ.

# ಕೋವಿಡ್ ಸೋಂಕಿತರು ನಿಜವಾಗಿ ಎಷ್ಟು ಜನ?

ಅರ್ ರಾಮಚಂದ್ರನ್


ಫ್ಂಟ್ ಲೈನ್, ಮೇ 8, 2029

ಯಾವುದೇ ದೇಶದಲ್ಲಿ ಅಥವಾ ಪ್ರಾಂತ್ಯದಲ್ಲಿ ಎಷ್ಟು ಜನ ಕೋವಿಡ್–19 ಸೋಂಕಿತರು ಇದ್ದಾರೆ, ಅದು ಎಷ್ಟು ತೀವ್ರವಾಗಿದೆ ಎನ್ನುವುದು ಆತಂಕದ ವಿಷಯ. ಈ ಸೋಂಕಿನ ತೀವ್ರತೆಯನ್ನು ಲೆಕ್ಕ ಹಾಕುವಾಗ ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದು ಈ ಸೋಂಕು ಎಷ್ಟು ತೀವ್ರವಾಗಿ ಹರಡುತ್ತದೆ ಎನ್ನುವುದು. ಮತ್ತೊಂದು ಇದು ಎಷ್ಟು ಅಪಾಯಕಾರಿ ಅನ್ನುವುದು. ಅಂದರೆ ಸೋಂಕಿತರಲ್ಲಿ ಎಷ್ಟು ಜನ ಸಾಯುತ್ತಾರೆ ಅಥವಾ ಸಾಯುವ ಸಾಧ್ಯತೆ ಎಷ್ಟು ಅನ್ನುವುದು.

ಮೊದಲನೆಯದನ್ನು ಅಂದರೆ ಸೋಂಕು ಎಷ್ಟು ವೇಗವಾಗಿ ಹರಡುತ್ತದೆ ಅನ್ನುವುದನ್ನು ಸೂಚಿಸುವುದಕ್ಕೆ ಮೂಲಭೂತ ಪುನರುತ್ಪಾದಕ ಸಂಖ್ಯೆ ಆರ್0 (ಆರ್ ನಾಟ್) ಅನ್ನು ಮಾಪಕವಾಗಿ ಬಳಸುತ್ತಾರೆ. ಅಂದರೆ ಒಬ್ಬ ಸೋಂಕಿತ ವ್ಯಕ್ತಿ ಎಷ್ಟು ಜನರಿಗೆ ಸೋಂಕು ಹರಡುತ್ತಾನೆ ಅನ್ನುವುದನ್ನು ಆರ್‌ನಾಟ್ ಸೂಚಿಸುತ್ತದೆ. ಯಾವುದೇ ಹೊಸ ಸೋಂಕು ಕಾಣಿಸಿಕೊಂಡಾಗ ಆರ್–0 ಒಂದಕ್ಕಿಂತ ಹೆಚ್ಚಿರುತ್ತದೆ. ಸೋಂಕು ವೇಗವಾಗಿ ಹರಡುತ್ತಿರುವ ಅವಧಿಯಲ್ಲೂ ಇದು ಒಂದಕ್ಕಿಂತ ಹೆಚ್ಚಿರುತ್ತದೆ. ಅಂದರೆ ಒಬ್ಬ ಸೋಂಕಿತ ವ್ಯಕ್ತಿ ಒಬ್ಬರಿಗಿಂತ ಹೆಚ್ಚು ಜನರಿಗೆ ಸೋಂಕು ಹರಡುತ್ತಾನೆ. ಹಾಗೆ ಸೋಂಕಿತರಾದವರೂ ಹೆಚ್ಚು ಜನರಿಗೆ ಹರಡುತ್ತಿರುತ್ತಾರೆ. ಹೀಗೆ ಸೋಂಕು ಹೆಚ್ಚೆಚ್ಚು ತ್ವರಿತವಾಗಿ ಹರಡುತ್ತಿರುತ್ತದೆ.

ಆರ್–0 ಅನ್ನುವುದು ಒಂದು ನಿಶ್ಚಿತ ಸಂಖ್ಯೆಯಲ್ಲ. ಅದು ಬದಲಾಗುತ್ತಿರುತ್ತದೆ. ಸೋಂಕು ಹರಡುತ್ತಿರುವ ಸಮಯದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು, ಕೈತೊಳೆದುಕೊಳ್ಳುವುದೇ ಮೊದಲಾದ ಶುಚಿತ್ವದ ಕ್ರಮಗಳನ್ನು ತೆಗೆದುಕೊಳ್ಳುವುದು, ಸೋಂಕಿತರನ್ನು ಪ್ರತ್ಯೇಕವಾಗಿಡುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಂಡಾಗ ಆರ್‌ನಾಟ್ ದರ ಇಳಿಯುತ್ತದೆ. ಕ್ರಮೇಣ ಅದು ಒಂದಕ್ಕಿಂತ ಕಮ್ಮಿಯಾಗುತ್ತದೆ. ಅಂದರೆ ಸೋಂಕಿನ ಪ್ರಮಾಣ ಕಡಿಮೆಯಾಗುತ್ತಾ ಅಂತಿಮವಾಗಿ ಅದು ನಿಲ್ಲುತ್ತದೆ. ವಿಜ್ಞಾನಿಗಳು ಆಯಾ ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಸೋಂಕು ಹರಡುವುದಕ್ಕೆ ಸಂಬಂಧಿಸಿದಂತೆ ಮಾಡೆಲ್ಲುಗಳನ್ನು ರಚಿಸಿರುತ್ತಾರೆ. ಆ ಮಾಡೆಲ್ಲುಗಳನ್ನು ಆಧರಿಸಿ ಆರ್‌ನಾಟ್ ದರವನ್ನು ಲೆಕ್ಕ ಹಾಕಲಾಗುತ್ತದೆ.

ಎರಡನೆಯ ಅಂಶ ವೈರಾಣುವಿನ ಆಂತರಿಕ ಗುಣಕ್ಕೆ ಸಂಬಂಧಿಸಿದ್ದು.





ನಿರ್ದಿಷ್ಟ ವೈರಾಣು ಎಷ್ಟು ಅಪಾಯಕಾರಿ ಅನ್ನುವುದು. ಅಂದರೆ ಯಾವುದೇ ನಿಯಂತ್ರಣ ಕ್ರಮವನ್ನು ತೆಗೆದುಕೊಳ್ಳದೇ ಹೋದ ಸಂದರ್ಭದಲ್ಲಿ, ಅಥವಾ ಜನರಲ್ಲಿ ಯಾವುದೇ ರೋಗ ನಿರೋಧಕ ಶಕ್ತಿ ಇಲ್ಲದೇ ಇದ್ದ ಸಂದರ್ಭದಲ್ಲಿ ಒಟ್ಟಾರೆ ಸೋಂಕಿತರಲ್ಲಿ ಎಷ್ಟು ಜನ ಸಾಯುತ್ತಾರೆ ಅನ್ನುವುದು. ಇದನ್ನು ಸೂಚಿಸಲು ಮರಣಸಂಖ್ಯೆಯ ಅನುಪಾತ (ಕೇಸ್ ಫೆಟಾಲಿಟಿ ರೇಷಿಯೋ –ಸಿಎಫ್‌ಆರ್) ಲೆಕ್ಕ ಹಾಕುತ್ತಾರೆ. ಮರಣ ಸಂಖ್ಯೆಯ ಅನುಪಾತವನ್ನು ಒಟ್ಟಾರೆ ಸೋಂಕಿನಿಂದ ಸತ್ತವರ ಸಂಖ್ಯೆಯನ್ನು ಒಟ್ಟು ಸೋಂಕಿತರ ಸಂಖ್ಯೆಯಿಂದ ಭಾಗಿಸಿ ಲೆಕ್ಕ ಹಾಕಲಾಗುತ್ತದೆ. ಸಾಮಾನ್ಯವಾಗಿ ಇದನ್ನು ಶೇಕಡವಾರು ಲೆಕ್ಕ ಹಾಕಲಾಗುತ್ತದೆ. ಆದರೆ ಸೋಂಕಿನ ತೀವ್ರತೆ ಸೋಂಕಿತರ ವಯಸ್ಸನ್ನು ಅವಲಂಬಿಸಿರುತ್ತದೆ. ವಯಸ್ಸಾದ ಹಿರಿಯರು ಸೋಂಕಿಗೆ ಬಲಿಯಾಗುವ ಸಾಧ್ಯತೆ ಹೆಚ್ಚು. ಹಾಗಾಗಿ ವಯಸ್ಸನ್ನು ಆಧರಿಸಿ ಮರಣ ಸಂಖ್ಯೆಯ ಅನುಪಾತವನ್ನು ಲೆಕ್ಕ ಹಾಕುವುದು ,ಸಾಂಕ್ರಮಿಕರೋಗಶಾಸ್ತ್ರದ ದೃಷ್ಟಿಯಿಂದ ಹೆಚ್ಚು ಮಹತ್ವಪೂರ್ಣ. ಜೊತೆಗೆ ಎಲ್ಲಿ ಆರೋಗ್ಯ ರಕ್ಷಣೆ ಅಷ್ಟು ಚೆನ್ನಾಗಿಲ್ಲವೋ ಅಲ್ಲಿ ಮರಣ ಸಂಖ್ಯೆಯ ಅನುಪಾತ ಹೆಚ್ಚಿರುತ್ತದೆ. ಆರೋಗ್ಯ ವ್ಯವಸ್ಥೆ ಚೆನ್ನಾಗಿರುವ ಕಡೆ ಕಡಿಮೆ ಇರುತ್ತದೆ.

ಸೋಂಕು ಹರಡುವುದಕ್ಕೆ ಆರಂಭದ ಸಮಯದಲ್ಲಿ ಸೋಂಕಿತರ ಸಂಖ್ಯೆ ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಅದು ನಿಜವಾದ ಸಮಸ್ಯೆ. ಪ್ರಾರಂಭದಲ್ಲಿ ತೀರಾ ಗಂಭೀರವಾದ ಪ್ರಕರಣಗಳಷ್ಟೇ ಪತ್ತೆಯಾಗುವುದು. ಆಗ ಮರಣ ಸಂಖ್ಯೆಯ ಅನುಪಾತ ಹೆಚ್ಚಿರುತ್ತದೆ. ಕ್ರಮೇಣ ಅಷ್ಟೊಂದು ಗಂಭೀರವಲ್ಲದ ಪ್ರಕರಣಗಳೂ ಪತ್ತೆಯಾಗುತ್ತಾ ಹೋಗುತ್ತವೆ. ಆಗ ಈ ಮರಣದ ದರ ಕಡಿಮೆಯಾಗುತ್ತಾ ಹೋಗುತ್ತದೆ. ಕ್ರಮೇಣ ತೀವ್ರವಲ್ಲದ ಹಾಗೂ ರೋಗ ಲಕ್ಷಣಗಳು ಕಾಣಿಸಿಕೊಂಡಿರದ ಪ್ರಕರಣಗಳೂ ಪರೀಕ್ಷೆಯ ಸಮಯದಲ್ಲಿ ತಿಳಿಯುತ್ತಾ ಹೋಗುತ್ತವೆ. ಅದು ಮುಖ್ಯ ಯಾಕೆಂದರೆ, ರೋಗಲಕ್ಷಣ ಕಾಣಿಸಿಕೊಂಡಿರದ ಸೋಂಕಿತರು ಕೂಡ ಸೋಂಕನ್ನು ಹರಡುತ್ತಿರುತ್ತಾರೆ. ಅದು ಕೊರೋನಾ ಪ್ರಕರಣದಲ್ಲಿ ಸ್ಪಷ್ಟವಾಗಿ ಗೊತ್ತಾಗಿದೆ. ಪ್ರಾರಂಭದಲ್ಲಿ ಇದು ಅಷ್ಟು ಸ್ಪಷ್ಟವಾಗಿರಲಿಲ್ಲ. ಈಗ ರೋಗಲಕ್ಷಣ ಇಲ್ಲದವರಲ್ಲೂ ಸೋಂಕು ಇರುವುದು ಹಾಗೂ ಅವರಿಂದಲೂ ಸೋಂಕು ಹರಡುತ್ತಿರುವುದು ಗೊತ್ತಾಗುತ್ತಿದೆ. ಇದಕ್ಕೆ ಸ್ಪಷ್ಟವಾದ ಪುರಾವೆಗಳು ನಮ್ಮ ಮುಂದಿವೆ. ಉದಾಹರಣೆಗೆ ಡೈಮಂಡ್ ಪ್ರಿನ್ಸಸ್ ಹಡಗಿನ ಪ್ರಕರಣ ಇರಬಹುದು. ಅಥವಾ ಯುಎಸ್‌ಎಸ್ ಥಿಯೋಡರ್ ರೂಸ್‌ವೆಲ್ಟ್ ಏರ್ ಕ್ರಾಫ್ಟ್ ಕ್ಯಾರಿಯರ್ ಇರಬಹುದು. ಅಲ್ಲಿದ್ದ ಪ್ರತಿಯೊಬ್ಬರನ್ನು ಪರೀಕ್ಷೆ ಮಾಡಲಾಗಿತ್ತು. ಅದರಲ್ಲಿ ರೋಗ ಲಕ್ಷಣ ಕಾಣಿಸಿಕೊಂಡಿಲ್ಲದ ಹಲವರಿಗೆ ಸೋಂಕು ಇದ್ದುದು ಪತ್ತೆಯಾಯಿತು. ಇದನ್ನು ಸ್ವಾಭಾವಿಕ ನಿಯಂತ್ರಿತ ಗುಂಪು ಎಂದು ಭಾವಿಸಲಾಗುತ್ತದೆ.

ಹಾಗಾಗಿ ತೀರಾ ಸ್ಥೂಲವಾದ ಮರಣ ಪ್ರಮಾಣ ದರದಿಂದ ವಾಸ್ತವ ಪರಿಸ್ಥಿತಿಯ ಸ್ಪಷ್ಟ ಚಿತ್ರ ಸಿಗದೇ ಹೋಗಬಹುದು. ವಾಸ್ತವ ಪರಿಸ್ಥಿತಿ ಕರಾರುವಾಕ್ಕಾಗಿ ತಿಳಿಯಬೇಕಾದರೆ ಸೋಂಕಿತರ ಪರೀಕ್ಷೆ ಹೆಚ್ಚು ಪರಿಣಾಮಕಾರಿಯಾಗಿ ನಡೆಯಬೇಕು. ಆಗ ನಿಜವಾದ ಸೋಂಕಿತರ ಸಂಖ್ಯೆ ಮತ್ತು ಸೋಂಕು ಪತ್ತೆಯಾದವರ ಸಂಖ್ಯೆ ಸುಮಾರಾಗಿ ಒಂದೇ ಆಗಿರುತ್ತದೆ. ಅಂದರೆ ನಮಗೆ ಪತ್ತೆಯಾಗಿರದ ಹಾಗೂ ಸೋಂಕಿನ ಲಕ್ಷಣಗಳು ಕಾಣಿಸಿಕೊಳ್ಳದ ಸೋಂಕಿತರನ್ನೂ ಕರಾರುವಾಕ್ಕಾಗಿ ಗುರುತಿಸುವುದಕ್ಕೆ ಸಾಧ್ಯವಾಗಬೇಕು. ಈಗಿನ ಪರಿಸ್ಥಿತಿಯನ್ನು ನೋಡಿದರೆ, ಹೆಚ್ಚಿನ ದೇಶಗಳಲ್ಲಿ ಇನ್ನೂ ವ್ಯಾಪಕವಾಗಿ ಪರೀಕ್ಷೆ ನಡೆಯಬೇಕು ಅನ್ನುವುದು ಸ್ಪಷ್ಟ. ಭಾರತದಲ್ಲೂ ಅದು ಇನ್ನೂ ಹೆಚ್ಚು ವ್ಯಾಪಕವಾಗಿ ಆಗಬೇಕು. ಪರೀಕ್ಷೆಯ ಪ್ರಮಾಣ ಕಡಿಮೆಯಾದಷ್ಟೂ ಸೋಂಕು ಪತ್ತೆಯ ದರ ಕಡಿಮೆಯಾಗುತ್ತದೆ. ಸ್ಥೂಲ ಮರಣದ ಪ್ರಮಾಣ ದರ (ಅಂದರೆ ನಿಜವಾದ ಸೋಂಕಿತರ ಸಂಖ್ಯೆಗೆ ಬದಲಾಗಿ ಪತ್ತೆಯಾದ ಸೋಂಕಿತರ ಸಂಖ್ಯೆಯನ್ನು ತೆಗೆದುಕೊಂಡಾಗ) ಹೆಚ್ಚಾಗುತ್ತದೆ.

**ಸೋಂಕು ಮರಣ ಪ್ರಮಾಣ**

ನಿಜ ಈ ಎರಡೂ ಸ್ವಾಭಾವಿಕ ನಿಯಂತ್ರಿತ ಗುಂಪಿನಲ್ಲೂ ಸ್ಯಾಂಪಲ್ಲಿನ ಸಂಖ್ಯೆ ಕಡಿಮೆ. ಆದರೆ ಒಟ್ಟಾರೆ ಸೋಂಕಿತರ ಸಂಖ್ಯೆ ನಿಖರವಾಗಿ ಗೊತ್ತಿದೆ. ಅಷ್ಟೇ ಅಲ್ಲ ಅವರನ್ನು ಸೂಕ್ಷ್ಮವಾಗಿ ಗಮನಿಸಬಹುದು. ಆದ್ದರಿಂದ ಅದು ವಾಸ್ತವ ಮರಣ ಪ್ರಮಾಣದ ಹೆಚ್ಚು ಕರಾರುವಾಕ್ಕಾದ ಅಂದಾಜನ್ನು ನೀಡಬಹುದು. ಅದನ್ನು ಸೋಂಕು ಮರಣ ಪ್ರಮಾಣ (ಐಎಂಆರ್) ಎಂದು ಕರೆಯುತ್ತಾರೆ. ಅದು ವೈರಾಣುವಿನ ಸೋಂಕಿನ ಆಂತರಿಕ ತೀವ್ರತೆಯ ಹೆಚ್ಚು ನಿಖರವಾದ ಮಾಪನವಾಗಬಲ್ಲದು. ನಮಗೆ ಸೋಂಕಿನಿಂದ ಸತ್ತವರ ಕರಾರುವಾಕ್ಕಾದ ಸಂಖ್ಯೆ ಗೊತ್ತಾದರೆ ಐಎಫ್‌ಆರ್ ಬಳಸಿ ವಾಸ್ತವ ಜಗತ್ತಿನ ಪರಿಸ್ಥಿತಿಯಲ್ಲಿ ನಿಜವಾದ ಸೋಂಕಿತರ ಸಂಖ್ಯೆಯನ್ನು ಅಂದಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಆದರೆ ಹೀಗೆ ಸಾವಿನ ಸಂಖ್ಯೆಯನ್ನು ಆಧರಿಸಿ ಅಂದಾಜು ಮಾಡಿದ ಸೋಂಕಿತರ ಸಂಖ್ಯೆ ವಾಸ್ತವದಲ್ಲಿ ಅಂದಿನ ಸೋಂಕಿತರ ಸಂಖ್ಯೆಯಾಗಿರುವುದಿಲ್ಲ. ಯಾಕೆಂದರೆ ಈಗ ಸತ್ತವರಿಗೆ ಸೋಂಕು ತಗಲಿ ಹಲವು ದಿನಗಳಾಗಿರುತ್ತದೆ. ಹಾಗಾಗಿ ಅದು ಆ ಸಮಯದ ಸೋಂಕಿನ ಸಂಖ್ಯೆಯಾಗಿರುತ್ತದೆ. ಅಂದರೆ ಸೋಂಕು ತಗಲಿ ಸಾಯುವ ವೇಳೆಗೆ ಹಲವು ದಿನಗಳು ಕಳೆದುಹೋಗಿರುತ್ತದೆ. ಆ ಅವಧಿಯನ್ನು ಸುಮಾರು ಎರಡು ವಾರಕ್ಕಿಂತ ಸ್ವಲ್ಪ ಜಾಸ್ತಿ ಎಂದು ನಿರ್ಧರಿಸಲಾಗಿದೆ. ಇಲ್ಲಿ ಪ್ರಶ್ನೆ ಅಂದರೆ ಇಂದಿನ ಸಾವಿನ ಸಂಖ್ಯೆಯನ್ನು ಆಧರಿಸಿ ಎರಡು ವಾರಗಳ ಹಿಂದಿನ ಸೋಂಕಿತರ ಸಂಖ್ಯೆಯನ್ನು ಲೆಕ್ಕಹಾಕುವುದಕ್ಕೆ ಐಎಫ್‌ಆರ್ ಎಷ್ಟರ ಮಟ್ಟಿಗೆ ವಿಶ್ವಾಸಾರ್ಹ ಮಾಪಕ ಅನ್ನುವುದು. ನಾವು ಮೇಲೆ ಉಲ್ಲೇಖಿಸಿದ ಡೈಮಂಡ್ ಪ್ರಿನ್ಸೆಸ್ ಪ್ರಕರಣವಾಗಲಿ, ಯುಎಸ್‌ಎಸ್ ಥಿಯೋಡೋರ್ ರೂಸ್‌ವೆಲ್ಟ್ ಘಟನೆಯಾಗಲಿ ವಾಸ್ತವ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ. ಯಾಕೆಂದರೆ ನಿಜಜೀವನದಲ್ಲಿ ಸಿಗುವುದಕ್ಕಿಂತ ಹೆಚ್ಚು ಉತ್ತಮ ಆರೋಗ್ಯ ಸೌಲಭ್ಯ ಅವರಿಗೆ ಹಡಗಿನಲ್ಲಿರುವಾಗ ಮತ್ತು ಅನಂತರ ಸಿಕ್ಕಿರುವ ಸಾಧ್ಯತೆಯಿದೆ.

ಆದರೆ ಇತ್ತೀಚೆಗೆ ನಡೆದಿರುವ ಮತ್ತೊಂದು ಸಂಶೋಧನೆ ಈ ಬಗ್ಗೆ ಮತ್ತಷ್ಟು ಸ್ಪಷ್ಟತೆ ನೀಡಬಹುದು. ರಾಬರ್ಟ್ ವೆರಿಟಿ ನಾಯಕತ್ವದಲ್ಲಿ ಬ್ರಿಟಿಷ್ ವಿಜ್ಞಾನಿಗಳ ತಂಡವೊಂದು ಸಂಶೋಧನೆ ನಡೆಸಿ ಅದರ ಫಲಿತವನ್ನು ಲಾನ್‌ಸೆಟ್ ಇನ್‌ಫೆಕ್ಷಿಯಸ್ ಡಿಸೀಸ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಅವರು ಇದೇ ರೀತಿಯ ನಿಯಂತ್ರಿಸಿದ ಗುಂಪೊಂದನ್ನು ಅಧ್ಯಯನ ಮಾಡಿದ್ದಾರೆ. ಅಲ್ಲಿಯೂ ಪ್ರತಿಯೊಬ್ಬರನ್ನೂ ಪರೀಕ್ಷೆಗೆ ಒಳಪಡಿಸಲಾಗಿದೆ. ಅದರಲ್ಲಿ ಅವರೆಲ್ಲಾ ವುಹಾನ್ ಪ್ರಾಂತ್ಯಕ್ಕೆ ಮರಳಿ ಬರುತ್ತಿದ್ದರು. ಅವರನ್ನೆಲ್ಲಾ ವಿಮಾನ ನಿಲ್ದಾಣದಲ್ಲೇ ಪರೀಕ್ಷಿಸಿ ಸೋಂಕಿತರೆಂದು ಕಂಡುಬಂದವರನ್ನು ಕ್ವಾರಂಟೈನ್ ಮಾಡಲಾಯಿತು ಮತ್ತು ಅವರ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿತ್ತು.ಅಂತಹ ಆರು ಅಂತರರಾಷ್ಟ್ರೀಯ ವಿಮಾನಗಳಲ್ಲಿ ಜನರು ವುಹಾನಿಗೆ ಮರಳಿದ್ದರು. ಚೀನಾದಲ್ಲಿ ಲಭ್ಯವಿದ್ದ ವಯಸ್ಸನ್ನು ಆಧರಿಸಿ ವರ್ಗೀಕರಿಸಿದ್ದ ಸೋಂಕು ಮತ್ತು ಖಾಯಿಲೆಯ ಅಂಕಿಅಂಶವನ್ನು ಹಾಗೂ ವಿಮಾನದಲ್ಲಿ ಮರಳಿ ಬಂದ ಪ್ರಯಾಣಿಕರನ್ನು ಆಧರಿಸಿದ ಅಂಕಿಅಂಶವನ್ನು ಕ್ರೋಢೀಕರಿಸಿ ಮೊತ್ತಮೊದಲ ಬಾರಿಗೆ ಸಂಶೋಧಕರ ತಂಡವು ಐಎಫ್‌ಆರ್ ಲೆಕ್ಕವನ್ನು ಪ್ರಕಟಿಸಿತು. ಹಾಗೆಯೇ ಒಬ್ಬ ಸೋಂಕಿತ ಸಾಯುವುದಕ್ಕೆ ತಗುಲುವ ಸರಾಸರಿ ಸಮಯವನ್ನು ಕೂಡ ಲೆಕ್ಕ ಹಾಕಲಾಯಿತು. ಚೀನಾದ ಅಂಕಿಅಂಶವನ್ನು ಮತ್ತು ಉಳಿದ ದೇಶಗಳ ಅಂಕಿಅಂಶವನ್ನು ಒಟ್ಟುಮಾಡಿ




ಇದನ್ನು ಲೆಕ್ಕ ಹಾಕಲಾಯಿತು. ಆ ಅವಧಿಯನ್ನು ಸುಮಾರು 18 ದಿನಗಳು ಎಂದು ಅಂದಾಜು ಮಾಡಲಾಗಿದೆ. ಗೊಟಿಂಜನ್ ವಿಶ್ವವಿದ್ಯಾನಿಲಯದ ಸಂಶೋಧಕರಾದ ಸೆಬಾಸ್ಟಿಯನ್ ವಾಲ್‌ಮರ್ ಮತ್ತು ಕ್ರಿಶ್ಚಿಯನ್ ಬೋಮರ್ ಅವರು ರಾಬರ್ಟ್ ವೆರಿಟಿ ಮತ್ತು ಅವರು ತಂಡ ರೂಪಿಸಿದ ವಯಸ್ಸು ಆಧಾರಿತ ಐಎಫ್‌ಆರ್ ಲೆಕ್ಕಾಚಾರ ಹೆಚ್ಚು ವಿಶ್ವಾಸಾರ್ಹ ಎಂದು ಪ್ರತಿಪಾದಿಸಿದೆ. ಅದನ್ನು ಬಳಸಿಕೊಂಡು ವಿಭಿನ್ನ ಪರಿಸ್ಥಿತಿಯಲ್ಲಿ ಒಟ್ಟು ಸೋಂಕಿತರ ಸಂಖ್ಯೆಯನ್ನು ಅಂದಾಜು ಮಾಡಬಹುದೆಂದು ತಿಳಿಸಿದೆ. ಆದರೆ ಒಂದು ನಿರ್ದಿಷ್ಟ ದೇಶದ ಜನಸಂಖ್ಯೆಗೆ ತಕ್ಕಂತೆ ಒಂದಿಷ್ಟು ಮಾರ್ಪಾಡುಮಾಡಿಕೊಳ್ಳಬೇಕಾಗಬಹುದು ಎಂದು ತಿಳಿಸಿದೆ. ಅಷ್ಟೇ ಅಲ್ಲ ಹಾಗೆ ಲೆಕ್ಕ ಹಾಕುವುದಕ್ಕೆ ಒಂದು ಟೆಂಪ್ಲೆಂಟನ್ನು ಅವರು ತಯಾರಿಸಿದ್ದಾರೆ. ಈ ಅಧ್ಯಯನದಲ್ಲಿ ಸೋಂಕು ತಗುಲುವುದಕ್ಕೂ ಅನಂತರ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕೂ ನಡುವೆ ಸರಾಸರಿ ನಾಲ್ಕು ದಿನಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಗೊಟಿಂಜನ್ ವಿಶ್ವವಿದ್ವಾನಿಲಯದ ಸಂಶೋಧಕರು ವಿವಿಧ ದೇಶಗಳ ಐಎಫ್‌ಆರ್ ಲೆಕ್ಕ ಹಾಕುವುದಕ್ಕೆ ಸಂಯುಕ್ತ ರಾಷ್ಟ್ರಗಳ ಜನಸಂಖ್ಯೆಯ ಅಂಕಿ ಅಂಶವನ್ನು ಬಳಸಿಕೊಂಡಿದ್ದಾರೆ. ಹೀಗೆ ಲೆಕ್ಕ ಹಾಕಿದ ಐಎಫ್‌ಆರ್‌ನ್ನು ಬ್ರಿಟಿಷ್ ತಂಡದ ಅಧ್ಯಯನದಿಂದ ತಿಳಿಸಿರುವ ಐಎಫ್‌ಆರ್ ಜೊತೆಗೆ ಪ್ರತಿ ದೇಶದ ಜನಸಂಖ್ಯೆಯಲ್ಲಿ ಪ್ರತಿ ವಯೋಮಾನದವರ ಸಂಖ್ಯೆಯನ್ನು ವೈಟ್(ಅದರ ಪ್ರಾಮುಖ್ಯ) ಎಂದು ಪರಿಗಣಿಸಿ ದೇಶಗಳ ಒಟ್ಟು ಮರಣದರವನ್ನು ಲೆಕ್ಕ ಹಾಕಿದ್ದಾರೆ. ಇದನ್ನು ಆಧಾರವಾಗಿಟ್ಟುಕೊಂಡು ಭಾರತವೂ ಸೇರಿದಂತೆ 40 ತೀವ್ರವಾಗಿ ಸೋಂಕಿಗೆ ಒಳಗಾದ ದೇಶಗಳ ಐಎಫ್‌ಆರ್ ಅನ್ನು ಲೆಕ್ಕ ಮಾಡಲಾಗಿದೆ. ಅವರ ಅಧ್ಯಯನದ ಪ್ರಕಾರ ಹೆಚ್ಚಿನ ದೇಶಗಳಲ್ಲಿ ಬಹುಪಾಲು ಸೋಂಕುಗಳು ಪತ್ತೆಯಾಗದೇ ಹೋಗುತ್ತದೆ. ಒಟ್ಟಾರೆ ವರದಿಯಾಗಿರುವ ಸೋಂಕಿನ ದರ ವಾಸ್ತವದಲ್ಲಿ ಆಗಿರುವ ಸೋಂಕಿಗಿಂತ ಶೇಕಡ ಹತ್ತಕ್ಕಿಂತ ಕಡಿಮೆ ಇರುತ್ತದೆ.

ಒಟ್ಟಾರೆಯಾಗಿ ಚೀನಾದಲ್ಲಿ ಬ್ರಿಟಿಷ್ ತಂಡದ ಪ್ರಕಾರ ಐಎಫ್‌ಆರ್ ಶೇಕಡ 0.66. ಚೀನಾದ ವಯಸ್ಸು ಆಧಾರಿತ ಅಂಕಿಅಂಶವನ್ನು ಆಧಾರವಾಗಿಟ್ಟುಕೊಂಡು ಲೆಕ್ಕ ಹಾಗಿದರೆ ಭಾರತದ ಒಟ್ಟಾರೆ ಐಎಫ್‌ಆರ್ ಅಂದಾಜು ಶೇಕಡ 0.41. ಅದಕ್ಕೆ ಅನುಗುಣವಾಗಿ ಜರ್ಮನಿಯಲ್ಲಿ ಅದು ಶೇಕಡ 1.3, ಇರಾನಿನಲ್ಲಿ ಶೇಕಡ 0.43, ಇಟಲಿಯಲ್ಲಿ 1.38, ಜಪಾನಿನಲ್ಲಿ 1.6, ಪಾಕಿಸ್ತಾನದಲ್ಲಿ 0.29, ಸ್ಪೈನಿನಲ್ಲಿ 1.21, ಸೌತ್ ಕೊರಿಯಾದಲ್ಲಿನ ದರ 0.96, ಇಂಗ್ಲೆಂಡ್ 1.09, ಅಮೇರಿಕಾಕ್ಕೆ 0.96 ಹೀಗೆ ಮುಂದುವರಿಯುತ್ತದೆ. ದೇಶಗಳ ನಡುವೆ ಇರುವ ಈ ವ್ಯತ್ಯಾಸಕ್ಕೆ ದೇಶಗಳ ಜನಸಂಖ್ಯಾ ರಚನೆಯಲ್ಲಿರುವ ಭಿನ್ನತೆಯೇ ಬಹುಮಟ್ಟಿಗೆ ಕಾರಣ.

ಇದನ್ನು ಆಧಾರವಾಗಿಟ್ಟುಕೊಂಡು ಲೆಕ್ಕ ಹಾಕುವುದಾದರೆ ಏಪ್ರಿಲ್ 19ರಂದು ಭಾರತದಲ್ಲಿ ಸತ್ತವರ ಸಂಖ್ಯೆ 507. ಎರಡು ವಾರ ಮೊದಲು ಅಂದರೆ ಏಪ್ರಿಲ್ 5ರಂದು ಸೋಂಕಿತರ ಸಂಖ್ಯೆ 1,23,659 ಆಗಬೇಕು. ಆದರೆ ಅಂದಿನ ಅಧಿಕೃತ ಸಂಖ್ಯೆ 3.577. ಅಂದರೆ ವಾಸ್ತವ ಸೋಂಕಿನ ಸಂಖ್ಯೆಯ ಶೇಕಡ 2.9ರಷ್ಟು ಮಾತ್ರ ವರದಿಯಾಗಿದೆ. ಸೋಂಕು ಪತ್ತೆಹಚ್ಚುವ ದರ ಭಾರತದಲ್ಲಿ ಕೇವಲ ಶೇಕಡ 2.9 ಮಾತ್ರ. ಅಂದರೆ ಇನ್ನೂ ವ್ಯಾಪಕವಾಗಿ ಪರೀಕ್ಷೆ ನಡೆಯಬೇಕು. ಸೋಂಕು ಪತ್ತೆಹೆಚ್ಚುವ ದರ ಬದಲಾಗುತ್ತಿರುತ್ತದೆ. ಅದು ಸೋಂಕಿಗೆ ಪ್ರತಿ ದೇಶವೂ ಪ್ರತಿಕ್ರಿಯಿಸುವ ಕ್ರಮವನ್ನು ಆಧರಿಸಿರುತ್ತದೆ. ಸೋಂಕು ಹೆಚ್ಚುವ ದರಕ್ಕೆ ಅನುಗುಣವಾಗಿ ಪರೀಕ್ಷಿಸುವ ವ್ಯವಸ್ಥೆ ಬೆಳೆಯದೇ ಹೋದರೆ ಪತ್ತೆಹಚ್ಚುವ ದರ ಕಡಿಮೆಯಾಗುತ್ತದೆ. ಪರೀಕ್ಷೆಯ ವ್ಯವಸ್ಥೆ ಸುಧಾರಿಸಿದರೆ ಅದು ಕಡಿಮೆಯಾಗಬಹುದು. ಅಷ್ಟೇ ಅಲ್ಲ ಸೋಂಕು ಉತ್ತುಂಗವನ್ನು ಮುಟ್ಟಿ ಇಳಿಯುವುದಕ್ಕೆ ಪ್ರಾರಂಭಿಸಿದಾಗಲೂ ಪತ್ತೆ ದರ ಕಮ್ಮಿಯಾಗುತ್ತದೆ. ಏಪ್ರಿಲಿನಲ್ಲಿ ಶೇಕಡ 1.68 ಇದ್ದದ್ದು ಈಗ 2.9ಕ್ಕೆ ಹೆಚ್ಚಿದೆ ಅಂದರೆ ಟೆಸ್ಟಿಂಗ್ ಹೆಚ್ಚಾಗಿದೆ, ಆದರೆ ಅದು ತುಂಬಾ ಕಡಿಮೆ, ಅದು ಇನ್ನೂ ಹೆಚ್ಚಾಗಬೇಕು.

# ಈ ಹೆಣ್ಣು ಮಕ್ಕಳು ದೇಶಕ್ಕಾಗಿ ವೆಂಟಿಲೇಟರ್ ಮಾಡಲು ಹೊರಟಿದ್ದಾರೆ.

ದಿ ಹಿಂದು ಪತ್ರಿಕೆಯ ವರದಿ

ಸೊಮಾಯಾ ಫರೂಖಿ ತನ್ನ ನಾಲ್ಕು ಗೆಳತಿಯರೊಂದಿಗೆ ಬೆಳಗ್ಗೆ ಎದ್ದು ಅಪ್ಪನ ಕಾರಿನಲ್ಲಿ ಮೆಕಾನಿಕ್ ವರ್ಕ್‌ಷಾಪ್‌ಗೆ ಹೋಗುತ್ತಾಳೆ. ಇದು ಹೆಚ್ಚಿನ ದಿನಗಳಲ್ಲಿ ಅವರ ದಿನಚರಿ. ಅದೇನು ಸಲೀಸಾದ ಪ್ರಯಾಣವಲ್ಲ. ಪೋಲಿಸರ ಚೆಕ್‌ಪಾಯಿಂಟುಗಳನ್ನು ತಪ್ಪಿಸಿಕೊಂಡು ಹೋಗಬೇಕು. ಅದಕ್ಕೆ ಹೆದ್ದಾರಿ ಬಿಟ್ಟು, ಸಂದಿಗೊಂದಿಗಳಲ್ಲಿ ಹೋಗಬೇಕು. ಅವರಿರುವ ಹೆರತ್ ನಗರ ಆಫ್ಘಾನಿಸ್ತಾನದಲ್ಲಿ ಕೊರೋನಾದ ಹಾಟ್ ಸ್ಪಾಟ್. ಅಲ್ಲಿ ಲಾಕ್‌ಡೌನ್ ಕಟ್ಟುನಿಟ್ಟಾಗಿ ಜಾರಿಯಲ್ಲಿದೆ. ಈ ಹುಡುಗಿಯರಿಗೆ ಕೆಲದಿನಗಳ ಹಿಂದೆ ಜಾಗತಿಕ ಒಲಿಂಪಿಯಾಡ್ ರೊಬೋಟಿಕ್ಸ್‌ನಲ್ಲಿ ಬಹುಮಾನ ಬಂದಿತ್ತು. ಈಗ ಜನರ ಪ್ರಾಣ ಉಳಿಸಬೇಕು. ಅದಕ್ಕೆ ಈ ಸಾಹಸ ಮಾಡುತ್ತಿದ್ದೇವೆ ಅಂತಾರೆ

ಆ ಮಕ್ಕಳು. ಕಾರಿನ ಭಾಗಗಳನ್ನು ಬಳಸಿಕೊಂಡು ಜೀವ ಉಳಿಸೋದಕ್ಕೆ ಅಂತ ಉಸಿರಾಡುವ ಯಂತ್ರವನ್ನು ಮಾಡಲು ಹೊರಟಿದ್ದಾರೆ. ವೈರಾಣು ವಿರುದ್ಧ ತಮ್ಮ ದೇಶ ನಡೆಸುತ್ತಿರುವ ಹೋರಾಟದಲ್ಲಿ ನೆರವಾಗಬೇಕು ಅಂತ ಆಸೆ ಅವರಿಗೆ. ನಮ್ಮ ಯಂತ್ರದಿಂದ ಒಂದೇ ಒಂದು ಜೀವ ಉಳಿದರೂ ಸಾಕು. ನಮಗೆ ಹೆಮ್ಮೆಯಾಗುತ್ತೆ ಅನ್ನುತ್ತಾಳೆ 17ವರ್ಷದ ಫರೂಖಿ.

ಅವರ ಈ ಸಾಹಸ ಅದರಲ್ಲೂ ಸಂಪ್ರದಾಯಸ್ಥ ಆಫ್ಘಾನಿಸ್ತಾನದಲ್ಲಿ ತುಂಬಾ ಮಹತ್ವದ ಸಂಗತಿ. ಕೇವಲ ಒಂದು ತಲೆಮಾರಿನ ಹಿಂದೆ ಅಂದರೆ 1990ರ ಕೊನೆಯಲ್ಲಿ ಇಸ್ಲಾಮಿಕ್ ಮೂಲಭೂತವಾದಿ ತಾಲಿಬಾನ್ ಆಳುತ್ತಿದ್ದಾಗ ಹೆಣ್ಣುಮಕ್ಕಳಿಗೆ ಶಾಲೆಗೆ ಹೋಗುವುದಕ್ಕೆ ಅವಕಾಶವಿರಲಿಲ್ಲ. ಫರೂಖಿಯ ಅಮ್ಮ ಮೂರನೇ ಕ್ಲಾಸಿಗೆ ತನ್ನ ಶಿಕ್ಷಣವನ್ನು ಕೊನೆಗೊಳಿಸಬೇಕಾಯಿತು.

**ಇರೋದು ಕೇವಲ 400 ವೆಂಟಿಲೇಟರ್**

ಕೊರೋನಾ ಮಹಾಮಾರಿಯನ್ನು ಆಫ್ಘಾನಿಸ್ತಾನ ಹೆಚ್ಚುಕಡಿಮೆ ಖಾಲಿ ಕೈಯಲ್ಲಿ ಎದುರಿಸುತ್ತಿದೆ. ಅಲ್ಲಿ 366 ಲಕ್ಷ ಜನ ಇದ್ದಾರೆ. ಇರೋದು ಕೇವಲ 400 ವೆಂಟಿಲೇಟರ್‌ಗಳು. ಸಧ್ಯಕ್ಕೆ ಅಲ್ಲಿ ಕೇವಲ 900 ಕೊರೋನಾ ವೈರಾಣು ಪ್ರಕರಣ ವರದಿಯಾಗಿದೆ. ಅದರಲ್ಲಿ 30 ಜನ ಸತ್ತಿದ್ದಾರೆ. ಬಹುಶಃ ಇನ್ನೂ ಹೆಚ್ಚು ಜನರಿಗೆ ಸೋಂಕು ಇರಬಹುದು ಅನ್ನುವ ಅನುಮಾನವಿದೆ. ಅಲ್ಲಿ ಟೆಸ್ಟ್ ಕಿಟ್ಟುಗಳ ಕೊರತೆ ತುಂಬಾ ಇದೆ. ಹಾಗಾಗಿ ಬಹುಪಾಲು ಪ್ರಕರಣಗಳು ಬೆಳಕಿಗೆ ಬಂದಿಲ್ಲವೆನಿಸುತ್ತದೆ. ಇ ಈ ಕೊರತೆಗೆ ಒಂದು ಉತ್ತರ ಕಂಡುಕೊಳ್ಳಬೇಕು ಅನ್ನುವ ಹಂಬಲ ಫರೂಖಿ ಮತ್ತು ಆಕೆಯ ಗೆಳತಿಯರನ್ನು ಈ ಸಾಹಸಕ್ಕೆ ನೂಕಿದೆ.

ಬೆಳಗ್ಗೆ ಫರೂಖಿಯ ಅಪ್ಪ ಚೆಕ್‌ಪೋಸ್ಟ್‌ಗಳನ್ನು ತಪ್ಪಿಸಿಕೊಂಡು ಹೆರಾತ್‌ನಲ್ಲಿರುವ ತಂಡದ ಕಛೇರಿಗೆ ಈ ಹುಡುಗಿಯರನ್ನು ತಲುಪಿಸುತ್ತಾರೆ. ಅಲ್ಲಿಂದ ಮತ್ತೊಂದು ಕಾರಿನಲ್ಲಿ ಊರಾಚೆ ಇರುವ ಒಂದು ಮೆಕಾನಿಕ್ ಷಾಪಿಗೆ ಬರುತ್ತಾರೆ.

ಹೆರಾತ್‌ನಲ್ಲಿ ತುಂಬಾ ತುರ್ತು ಕೆಲಸವಿದ್ದಾಗ ಮಾತ್ರ ಜನ ಮನೆಯಿಂದ ಆಚೆ ಹೋಗಬಹುದು. ರೋಬೋಟಿಕ್ಸ್ ತಂಡಕ್ಕೆ ಕೆಲವೇ ಕಾರು ಪಾಸುಗಳು ಸಿಕ್ಕಿವೆ. ಫರೂಖಿಯ ಅಪ್ಪನ ಬಳಿ ಅಂತಹ ಪಾಸ್ ಇಲ್ಲ. ಅವರಿಗೆ ಈವರೆಗೆ ಅಂತಹ ಪಾಸ್ ಪಡೆಯಲು ಸಾಧ್ಯವಾಗಿಲ್ಲ. ಆದರೆ ಈ ಹುಡುಗಿಯರಿಗೆ ಕಾಯುವ ತಾಳ್ಮೆ ಇಲ್ಲ. ಸೆಕ್ಯುರಿಟಿಯವರು ಕ್ರಮ ತೆಗೆದುಕೊಳ್ಳಬಹುದೆಂಬ ಭಯ ಇದೆ. "ಆದರೆ ನಮಗೆ ಬೇರೆ ದಾರಿ ಇಲ್ಲ. ನಾವು ಜನರ ಪ್ರಾಣ ಉಳಿಸುವುದಕ್ಕೆ ಪ್ರಯತ್ನಿಸಬೇಕು" ಅಂತ ಫರೂಖಿ ಹೇಳುವಾಗ ಅವಳ ಕಾಳಜಿ ಅರ್ಥವಾಗುತ್ತಿತ್ತು.

ವರ್ಕ್‌ಷಾಪಿನಲ್ಲಿ ಮಕ್ಕಳು ಎರಡು ವಿನ್ಯಾಸಕ್ಕೆ ಸಂಬಂಧಿಸಿದಂತೆ ಪ್ರಯೋಗ ಮಾಡುತ್ತಿದ್ದಾರೆ. ಮ್ಯಾಸಾಚೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮುಕ್ತವಾಗಿ ಬಿಡುಗಡೆ ಮಾಡಿರುವ ಒಂದು ವಿನ್ಯಾಸ. ಅವರು ಅದಕ್ಕೆ ಟೊಯೊಟೊ ಕಾರಿನ ವಿಂಡ್ ಷೀಲ್ಡ್ ವೈಪರ್, ಬ್ಯಾಟರಿ, ಬ್ಯಾಗ್ ವಾಲ್ವ್ ಮಾಸ್ಕಿನ ಸೆಟ್ಟುಗಳು, ಮಾನವಚಾಲಿತ ಆಕ್ಸಿಜನ್ ಪಂಪ್ ಇವುಗಳನ್ನೆಲ್ಲಾ ಬಳಸಿಕೊಂಡು ಪ್ರಯತ್ನಿಸುತ್ತಿದ್ದಾರೆ. ವರ್ಕ್‌ಷಾಪಿನ ಮೆಕ್ಯಾನಿಕ್ಕುಗಳು ವೆಂಟಿಲೇಟರಿನ ಫ್ರೇಮ್ ರಚಿಸಲು ಅವರಿಗೆ ನೆರವಾಗುತ್ತಿದ್ದಾರೆ. ಎಂಐಟಿಯ ಪ್ರೊಫೆಸರ್ ಡೇನಿಯಲ್ ರಸ್ ತಮ್ಮ ಮಾದರಿಯನ್ನು ತಯಾರಿಸಲು ಮಕ್ಕಳು ಮಾಡುತ್ತಿರುವ ಪ್ರಯತ್ನವನ್ನು ಸಂತೋಷದಿಂದ ಸ್ವಾಗತಿಸಿದ್ದಾರೆ. ಅದು ಸ್ಥಳೀಯವಾಗಿ ತಯಾರಾಗಿ, ಪರೀಕ್ಷಿಸಲ್ಪಡುವುದನ್ನು ನೋಡುವುದಕ್ಕೆ ಸಂತೋಷವಾಗುತ್ತದೆ ಎಂದು ತಿಳಿಸಿದ್ದಾರೆ.

**ಹಣದ ನೆರವು**

ಆ ತಂಡ ಪ್ರಾರಂಭವಾಗುವುದಕ್ಕೆ ನಗರದ ತಾಂತ್ರಿಕ ಉದ್ದಿಮೆದಾರ ರೊಯಾ ಮಹಬೂಬ್ ನೆರವಾಗಿದ್ದಳು. ಅವಳು ಹೆಣ್ಣುಮಕ್ಕಳ ಸಬಲೀಕರಣಕ್ಕೆಂದು ಹಣವನ್ನು ಸಂಗ್ರಹಿಸುತ್ತಿದ್ದಾಳೆ. ಮೇ ಅಥವಾ ಜೂನ್ ವೇಳೆಗೆ ವೆಂಟಿಲೇಟರ್ ಸಿದ್ಧವಾಗುತ್ತದೆ ಅನ್ನುವ ನಂಬಿಕೆ ಅವಳದ್ದು. ತಂಡದಲ್ಲಿ ಒಟ್ಟು 15 ಜನ ಇದ್ದಾರೆ. ಅವರೆಲ್ಲಾ ಬೇರೆ ಬೇರೆ ಪ್ರಾಜೆಕ್ಟುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವೆಂಟಿಲೇಟರ್ ಒಮ್ಮೆ ತಯಾರಾದ ಮೇಲೆ ಅದನ್ನು ಪರೀಕ್ಷೆಗೆಂದು ಆರೋಗ್ಯ ಮಂತ್ರಾಲಯಕ್ಕೆ ಕಳುಹಿಸಲಾಗುತ್ತದೆ. ಪ್ರಾರಂಭದಲ್ಲಿ ಪ್ರಾಣಿಗಳ ಮೇಲೆ ಪ್ರಯೋಗ ಮಾಡಲಾಗುತ್ತದೆ.

2017ರಲ್ಲಿ ನಡೆದ ಜಾಗತಿಕ ರೊಬೋಟ್ ಒಲಂಪಿಯಾಡಿನಲ್ಲಿ ಪಾಲ್ಗೊಂಡಾಗ



ಫರೂಖಿಗೆ ಕೇವಲ 14 ವರ್ಷ. ಅವಳು ಮತ್ತು ಅವಳ ತಂಡಕ್ಕೆ ಈ ಸಂಕಷ್ಟದ ಸಮಯದಲ್ಲಿ ದೇಶಕ್ಕೆ ಏನಾದರೂ ಮಾಡಬೇಕು ಅನ್ನುವ ತವಕ. ಆಫ್ಗನ್ನರು ಈ ಮಹಾಮಾರಿಯ ಬಿಕ್ಕಟ್ಟಿನಲ್ಲಿ ಆಫ್ಘಾನಿಸ್ತಾನಕ್ಕೆ ನೆರವಾಗಬೇಕು ಎನ್ನುತ್ತಾಳೆ.

https://www.thehindu.com/news/international/afghan-girls-turn-car-parts-into-ventilators/article31383542.ece



# ಮೂರು ಆಸ್ಪತ್ರೆ ಅಲೆದರು. ಕೊನೆಗೆ ಬೆಡ್ ಸಿಕ್ಕಿತ್ತು. ಆದರೆ ತುಂಬಾ ತಡವಾಗಿತ್ತು

ನ್ಯೂಯಾರ್ಕ್ ಟೈಮ್ಸ್ ವರದಿ

ಲೂಯಿಸ್ ಅರೆಲ್ಲನೊಗೆ ತನಗೆ ಆರೋಗ್ಯ ಸರಿ ಇಲ್ಲ ಅನ್ನಿಸಿತು. ಕೊರೋನಾ ವೈರಾಣು ಸೋಂಕಿನ ಲಕ್ಷಣಗಳೆಲ್ಲಾ ಇವೆ ಅನ್ನಿಸಿತು. ಲೂಯಿಸ್ ಅರೆಲ್ಲನೊ ಮೊದಲಿಗೆ ಹತ್ತಿರದ ಬ್ರೂಕ್ಲಿನ್ ಆಸ್ಪತ್ರೆಗೆ ಹೋದರು. ಅಲ್ಲಿ, ಈಗ ಬೇಡ, ಆರೋಗ್ಯದ ಸ್ಥಿತಿ ಗಂಭೀರವೆನಿಸಿದಾಗ ಬನ್ನಿ ಅಂತ ಹೇಳಿ ಕಳುಹಿಸಿದರು.

ಒಂದೆರಡು ದಿನಗಳಲ್ಲಿ ಆರೋಗ್ಯ ಹದಗೆಟ್ಟಿತು. ಮನೆಯವರು ಅವರನ್ನು ನ್ಯೂ ಜರ್ಸಿಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ಎಂಟು ಗಂಟೆ ಕಾದರು. ಇನ್ನೂ ಏಳೆಂಟು ಗಂಟೆ ಕಾಯಬೇಕಾಗಬಹುದು ಅಂತ ಆಸ್ಪತ್ರೆಯ ಸಿಬ್ಬಂದಿಗಳು ಹೇಳಿದರು. ತಿರುಗಿ ಮನೆಗೆ ಬಂದರು.


65 ವರ್ಷದ ಅರೆಲ್ಲನೊ ಅವರ ಆರೋಗ್ಯ ತುಂಬಾ ಹದಗೆಟ್ಟಿದೆ, ಈಗ ಅವರನ್ನು ಆಸ್ಪತ್ರೆಗೆ ಸೇರಿಸಿಕೊಳ್ಳುತ್ತಾರೆ ಅಂತ ಅಂದುಕೊಳ್ಳುವ ವೇಳೆಗೆ ಕೋವಿಡ್–19ರಿಂದ ದೇಹ ತುಂಬಾ ಬಳಲಿತ್ತು. ಅವರು ತುಂಬಾ ದಣಿದಿದ್ದರು.

ಆಸ್ಪತ್ರೆಯಲ್ಲಿ ಐದು ದಿನ ಇದ್ದರು. ಏಪ್ರಿಲ್ 5ರಂದು ಕಾರ್ಡಿಯೊಪಲ್ಮನರಿ ಅರೆಸ್ಟ್‌ನಿಂದ ತೀರಿಕೊಂಡರು. ಸತ್ತ ಎರಡು ದಿನಗಳ ಮೇಲೆ ಅವರ ವೈರಾಣು ಪರೀಕ್ಷೆಯ ಫಲಿತಾಂಶ ಬಂದಿತು. ಕೋವಿಡ್ ಪಾಸಿಟಿವ್ ಎಂದು ಅದರಲ್ಲಿ ನಮೂದಿಸಿತ್ತು.

"ಅವರನ್ನು ಆಸ್ಪತ್ರೆಗೆ ದಾಖಲು ಮಾಡಿಕೊಂಡಿದ್ದರೆ, ಅವರ ಸ್ಥಿತಿ ನಿಜವಾಗಿಯೂ ತುಂಬಾ ಗಂಭೀರವಾಗಿತ್ತು ಅಂತ ಗೊತ್ತಾಗುತ್ತಿತ್ತು" ಅಂತ ಅವರ ಸೋದರ ದುಃಖ ತೋಡಿಕೊಂಡ.

ಅರೆಲ್ಲನೊ ಶುಶ್ರೂಷೆ ಪಡೆಯುವುದಕ್ಕೆ ಪಟ್ಟ ಪಾಡನ್ನು ನೋಡಿದರೆ ನ್ಯೂಯಾರ್ಕ್ ಹಾಗೂ ನ್ಯೂಜರ್ಸಿಯಲ್ಲಿ ನರ್ಸುಗಳು ಹಾಗೂ ಡಾಕ್ಟರುಗಳು ಇರುವ ಅತ್ಯಲ್ಪ ಸೌಲಭ್ಯವನ್ನು ಹಂಚುವುದಕ್ಕೆ ಪಡುತ್ತಿರುವ ಪಾಡು ತಿಳಿಯುತ್ತದೆ. ಅವೆರಡು ಕರೋನಾ ವೈರಾಣುವಿನಿಂದ ತುಂಬಾ ಜರ್ಝರಿತವಾದ ರಾಜ್ಯಗಳು. ಬಂದ ರೋಗಿಗಳನ್ನೆಲ್ಲಾ ಸೇರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಹಾಸಿಗೆಯೂ ಇಲ್ಲ, ವೆಂಟಿಲೇಟರ್‌ಗಳೂ ಇಲ್ಲ.

ಹೆಚ್ಚಿನ ಸಂದರ್ಭಗಳಲ್ಲಿ ಆರೋಗ್ಯ ಸಿಬ್ಬಂದಿಗಳು ಒಂದೆರಡು ನಿಮಿಷಗಳಲ್ಲಿ ರೋಗಿಗೆ ತುರ್ತಾಗಿ ಚಿಕಿತ್ಸೆ ಬೇಕಾ ಅಥವಾ ಕಾಯಬಹುದಾ ಅಂತ ನಿರ್ಧರಿಸಬೇಕು. ಯಾರನ್ನು ಆಸ್ಪತ್ರೆಗೆ ದಾಖಲು ಮಾಡಿಕೊಳ್ಳಬೇಕು, ಯಾರು ಮನೆಯಲ್ಲೇ ಸುಧಾರಿಸಿಕೊಳ್ಳಬಹುದು ಅಂತ ತೀರ್ಮಾನಿಸಬೇಕು. ಹೆಚ್ಚಿನ ರೋಗಿಗಳಿಗೆ ಅದು ಸಾವು ಬದುಕಿನ ನಿರ್ಧಾರವಾಗಿರುತ್ತದೆ.



ಅರೆಲ್ಲನ್ನೊ ಹುಟ್ಟಿದ್ದು ಇಕ್ವೆಡಾರ್‌ನ ಅಲೌಸಿಯಲ್ಲಿ. ಅಲ್ಲಿ ಮನೋವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದರು. ಆದರೆ ಅಮೇರಿಕೆಗೆ ಬಂದ ಮೇಲೆ ಅದಕ್ಕೆ ಬೇಕಾದ ಪರೀಕ್ಷೆಯನ್ನು ಪಾಸು ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಕಾಲೇಜೊಂದರಲ್ಲಿ ಆಫೀಸ್ ಇತ್ಯಾದಿ ಕ್ಲೀನ್ ಮಾಡಿಕೊಂಡಿದ್ದರು. ಕೊನೆಗೆ ಮನೆಯ ಸಹಾಯಕರಾಗಿ ಸೇವೆ ಮಾಡುತ್ತಿದ್ದರು. ವೃದ್ಧರನ್ನು ನೋಡಿಕೊಳ್ಳುತ್ತಿದ್ದರು.

ಹೀಗೆ ಕೆಲಸ ಮಾಡುತ್ತಿದ್ದಾಗ ಒಂದು ದಿನ ಆರೋಗ್ಯ ತಪ್ಪಿತು. ಅವರಿಗೂ ತಮ್ಮ ಸೋದರಿಯಂತೆ ಸಕ್ಕರೆ ಖಾಯಿಲೆ ಇತ್ತು. ಆದರೆ ಆರೋಗ್ಯ ತಪ್ಪಿದ ಆರಂಭದಲ್ಲಿ ಉಸಿರಾಟದ ಸಮಸ್ಯೆ ಇರಲಿಲ್ಲ. ಆದರೂ ಮನೆಯಲ್ಲಿದ್ದಾಗ ಅವರು ಪ್ರತ್ಯೇಕವಾಗಿರುವಂತೆ ಮನೆಯವರು ವ್ಯವಸ್ಥೆ ಮಾಡಿದ್ದರು. ಆದರೆ ಬರುಬರುತ್ತಾ ಅವರ ಆರೋಗ್ಯ ತುಂಬಾ ಹದಗೆಟ್ಟಿತು.

ತುರ್ತು ಚಿಕಿತ್ಸಾ ಕೇಂದ್ರದಿಂದ ಬಂದ ಮೇಲೆ ಎರಡೇ ದಿನಕ್ಕೆ ಅವರಿಗೆ ಉಸಿರಾಡುವುದಕ್ಕೆ ತುಂಬಾ ಕಷ್ಟವಾಯಿತು. ಮೇಲುಸಿರು ಬಿಡುತ್ತಿದ್ದರು. ಅವರ ಸೋದರಿ ಅಂಬ್ಯುಲೆನ್ಸ್ ಕರೆದರು. ಅವರನ್ನು ಬ್ರೂಕ್‌ಲಿನ್ನಿನ ವುಡ್‌ಹಲ್ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋದರು.

ಅದು ನ್ಯೂಯಾರ್ಕಿನಲ್ಲಿ ಕರಾಳ ದಿನ. ಒಂದೇ ದಿನಕ್ಕೆ 1000ಕ್ಕೂ ಹೆಚ್ಚು ಜನ ಆಸ್ಪತ್ರೆ ಸೇರಿದ್ದರು. 1260 ಮುಟ್ಟುತ್ತೆ ಅನ್ನುತ್ತಿದ್ದರು.

ಮನೆಯವರು ಆಸ್ಪತ್ರೆಯ ಸಿಬ್ಬಂದಿಗಳಿಗೆ ಅರೆಲ್ಲನೊ ಆರೋಗ್ಯ ಪರಿಸ್ಥಿತಿ ವಿವರಿಸಿದರು. ಅವರಿಗೆ ನ್ಯುಮೋನಿಯಾ ಎಂದು ಹೇಳಿದ್ದಾರೆ. ಅವರಿಗೆ ಡಯಾಬಿಟೀಸ್ ಇದೆ. ಕೊವಿಡ್ ಪರೀಕ್ಷೆಯ ಫಲಿತಾಂಶಕ್ಕಾಗಿ ಕಾಯುತ್ತಿದ್ದೇವೆ ಎಂಬ ಎಲ್ಲಾ ವಿವರಗಳನ್ನು ನೀಡಿದರು. ಆದರೆ ಆಸ್ಪತ್ರೆಯವರು ಅವರನ್ನು ದಾಖಲು ಮಾಡಿಕೊಳ್ಳಲಿಲ್ಲ. ಮನೆಯವರಿಗೆ ಕಾರಣ ತಿಳಿಯಲಿಲ್ಲ. ಆಗ ಆಸ್ಪತ್ರೆಯಲ್ಲಿ ಇರುವ ಸ್ಥಳವನ್ನು ರೋಗಿಗಳಿಗೆ ರೇಷನ್ ರೀತಿಯಲ್ಲಿ ಹಂಚುತ್ತಿದ್ದರು. ತುಂಬಾ ರೋಗಿಗಳು ಬರುವ ನಿರೀಕ್ಷೆ ಇತ್ತು. ಹಾಸಿಗೆ ಮತ್ತು ವೆಂಟಿಲೇಟರ್‌ಗಳ ಕೊರತೆ ತೀವ್ರವಾಗಿತ್ತು.

"ನನಗೆ ಹೆದರಿಕೆ ಆಯಿತು. ಅವರು ಮನೆಗೆ ಕಳುಹಿಸಿಬಿಡುತ್ತಾರೆ ಅಂದುಕೊಂಡಿರಲಿಲ್ಲ."

ಅರೆಲ್ಲನೊ ಸ್ಥಿತಿಯಲ್ಲಿ ಯಾವುದೇ ಸುಧಾರಣೆಯು ಆಗಲಿಲ್ಲ ಅಪಾರ್ಟ್‌ಮೆಂಟಿನ ಹಾಗೂ ಕುಟುಂಬದ ಉಳಿದವರಿಗೂ ಅದು ಹರಡಿಬಿಡಬಹುದು ಅನ್ನುವ ಗಾಬರಿ ಪ್ರಾರಂಭವಾಯಿತು. ಅವರನ್ನು ನ್ಯೂ ಜರ್ಸಿಗೆ ಕರೆದುಕೊಂಡು ಹೋಗುವುದು ಒಳ್ಳೆಯದು ಎಂದು ಮಗ ನಿರ್ಧರಿಸಿದ. ಮಗ ಕಾರ್ಲೊಸ್ ವಾಸವಾಗಿದ್ದ ಜಾಗ ಅದು. ಮತ್ತು ಅಲ್ಲಿ ನ್ಯೂಯಾರ್ಕ್‌ಗಿಂತ ಪರಿಸ್ಥಿತಿ ಉತ್ತಮವಾಗಿತ್ತು. ತಂದೆ ಬದುಕುವ ಸಾಧ್ಯತೆ ಅಲ್ಲಿ ಜಾಸ್ತಿ ಅಂತ ಯೋಚಿಸಿದ.

ಪ್ರಯಾಣದ ಉದ್ದಕ್ಕೂ ಅರೆಲ್ಲನೊ ಕಾರಿನಲ್ಲಿ ಹಿಂಬದಿಯ ಸೀಟಿನಲ್ಲಿ ಕೂತಿದ್ದರು. ಉಸಿರಾಡುವುದಕ್ಕೆ ತುಂಬಾ ಕಷ್ಟ ಪಡುತ್ತಿದ್ದರು. ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮಧ್ಯಾಹ್ನದ ವೇಳೆಗೆ ನ್ಯೂಜರ್ಸಿಯ ಓವರ್‌ಲುಕ್ ಮೆಡಿಕಲ್ ಸೆಂಟರ್‌ಗೆ ಬಂದರು. ಅಲ್ಲಿ ಕೊರೋನಾಕ್ಕಾಗಿ ಒಂದು ತಾತ್ಕಾಲಿಕ ತುರ್ತು ಕೊಠಡಿಯನ್ನು ಸಿದ್ಧ ಪಡಿಸಿದ್ದರು. ಅಲ್ಲೇ ಕಾಯುವುದಕ್ಕೆ ಹೇಳಿದರು. ಸುಮಾರು ಎಂಟು ಗಂಟೆ ಕಾದರೂ ಬೆಡ್ ಸಿಗಲಿಲ್ಲ. ಇನ್ನೂ ಏಳೆಂಟು ಗಂಟೆ ಕಾಯಬೇಕಾಗಬಹುದು ಎಂದು ತಿಳಿಸಿದರು. ಆಗಲೇ ರಾತ್ರಿ 11 ಗಂಟೆ. ಇವರಿಗಿಂತ ಮುಂಚೆ 10 ಜನ ರೋಗಿಗಳು ಬಂದಿದ್ದರು.

"ತುಂಬಾ ನಿರಾಶನಾಗಿದ್ದೆ, ನಮ್ಮಪ್ಪನಿಗೆ ಅಷ್ಟು ಹೊತ್ತು ಕಾಯುವುದಕ್ಕೆ ಆಗುತ್ತೆ ಅಂತ ಅನ್ನಿಸಲಿಲ್ಲ". ಮನೆಗೆ ಕರೆದುಕೊಂಡು ಹೋಗೋಣ ಎಂದು ನಿರ್ಧರಿಸಿದೆ.

ಅಂದು ತುಂಬಾ ಕೊರೋನಾ ರೋಗಿಗಳು ಬಂದುಬಿಟ್ಟಿದ್ದರು. ಅವರು ನಿರೀಕ್ಷೆ ಮಾಡಿರಲಿಲ್ಲ. ಅಂಬ್ಯುಲೆನ್ಸಿನಲ್ಲಿ ಇನ್ನೂ ರೋಗಿಗಳು ಬರುತ್ತಲೇ ಇದ್ದರು. ಇದನ್ನು ತಿಳಿಸಿದ್ದು ಆಸ್ಪತ್ರೆಯ ಪ್ರತಿನಿಧಿಯೇ. ಬರುತ್ತಿದ್ದ ಅಂಬ್ಯುಲೆನ್ಸನ್ನು ಹತ್ತಿರದ ಬೇರೆ ಆಸ್ಪತ್ರೆಯ ಕಡೆ ತಿರುಗಿಸುವಂತೆ ಕೇಳಿಕೊಳ್ಳಲಾಗಿತ್ತು.



ಓವರ್‌ಲುಕ್ ಆಸ್ಪತ್ರೆಯಲ್ಲಿ ರೋಗಿಗಳ ಸ್ಥಿತಿಯನ್ನು ನೋಡಿಕೊಂಡು ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಆದರೆ ಯಾವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂಬುದನ್ನು ಅವರು ತಿಳಿಸಲಿಲ್ಲ.

"ಇದರಿಂದ ರೋಗಿಗಳು ಹೆಚ್ಚು ಹೊತ್ತು ಕಾಯಬೇಕಾಗುತ್ತದೆ. ಆದರೆ ಓವರ್ ಲುಕ್ ಆಸ್ಪತ್ರೆಯಲ್ಲಿ ಯಾವುದೇ ರೋಗಿಯನ್ನು ಚಿಕಿತ್ಸೆಯಿಲ್ಲದೆ ಕಳುಹಿಸಿಲ್ಲ. ನಮ್ಮಲ್ಲಿ ಚಿಕಿತ್ಸೆ ಕೋರಿ ಬಂದವರಿಗೆಲ್ಲಾ ಚಿಕಿತ್ಸೆ ನೀಡುತ್ತಿದ್ದೇವೆ. ತುರ್ತು ವಿಭಾಗಕ್ಕೆ ಅಂಬ್ಯುಲೆನ್ಸಿನಲ್ಲಿ ಬಂದವರನ್ನೂ ನೋಡಿಕೊಳ್ಳುತ್ತಿದ್ದೇವೆ. ನಮ್ಮ ಸಿಬ್ಬಂದಿಗಳು ರೋಗಿಗಳಿಗೆ ಸೂಕ್ತ ತುರ್ತು ಚಿಕಿತ್ಸೆ ಸಿಗುವುದಕ್ಕೆ ಬೇಕಾದ ವ್ಯವಸ್ಥೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ." ಎಂದು ಅವರು ತಿಳಿಸಿದರು.

ಯಾರೋ ಶ್ವಾಸಕೋಶವನ್ನು ಚಾಕುವಿನಿಂದ ಕುಯ್ಯುತ್ತಿರುವಷ್ಟು ನೋವಾಗುತ್ತದೆ ಎಂದು ಅರೆಲ್ಲನೊ ಹೇಳಿಕೊಂಡಿದ್ದರಂತೆ. ರಾತ್ರಿ ತಂದೆ ಉಸಿರಾಡುವುದು ಕೇಳಿಸುತ್ತಿತ್ತು. ಅಷ್ಟು ಜೋರಾಗಿ ಉಸಿರಾಡುತ್ತಿದ್ದರು. ಏಪ್ರಿಲ್ ಒಂದರಂದು ಅವರನ್ನು ಅಂಬ್ಯುಲೆನ್ಸಿನಲ್ಲಿ ಟ್ರಿನಿಟಾಸ್ ರೀಜಿನಲ್ ಮೆಡಿಕಲ್ ಸೆಂಟರ್‌ಗೆ ಸ್ಥಳಾಂತರಿಸಿದರು. ತನ್ನನ್ನು ಒಂದು ಖಾಸಗಿ ರೂಮಿನಲ್ಲಿ ಇಟ್ಟಿದ್ದಾರೆ ಎಂದು ಅವರು ಮಗನಿಗೆ ಮೆಸೇಜ್ ಮಾಡಿದ್ದರು.

ಕೊನೆ ಸಮೀಪದಲ್ಲಿದೆ ಅನ್ನುವುದಕ್ಕೆ ಯಾವುದೇ ಸೂಚನೆಯೂ ಇರಲಿಲ್ಲ. ಟ್ರಿನಿಟಾಸ್‌ನಲ್ಲಿ ಇರುವವರೆಗೆ ಆಸ್ಪತ್ರೆಗೆ ಫೋನ್ ಮಾಡಿ ತಂದೆಯ ಆರೋಗ್ಯದ ಬಗ್ಗೆ ಪ್ರತಿದಿನ ವಿಚಾರಿಸಿಕೊಳ್ಳುತ್ತಿದ್ದರು.

ಮಲೇರಿಯಾಕ್ಕೆ ಕೊಡುತ್ತಿದ್ದ ಔಷಧ ಹೈಡ್ರೋಕ್ಸಿಕ್ಲೋರೊಕ್ವಿನ್ ಕೊಡುತ್ತಿದ್ದರು. ಜೊತೆಗೆ ಆಕ್ಸಿಜನ್. ಜ್ವರ ಕಮ್ಮಿಯಾಗಿದೆ ಆದರೆ ಆರೋಗ್ಯದಲ್ಲಿ ಸುಧಾರಣೆ ಕಾಣುತ್ತಿಲ್ಲ ಅಂತ ನರ್ಸುಗಳು ತಿಳಿಸಿದ್ದರು. ಕೆಲವು ದಿನ ಟಿವಿ ನೋಡುತ್ತಿದ್ದರು. ಆಮೇಲೆ ಓಡಾಡಲು ಆಗುತ್ತಿಲ್ಲ ಅಂತ ಕ್ಯಾಥಿಟರ್ ಹಾಕಿದ್ದರು. ತಾನು ಆಕ್ಸಿಜನ್ ಮಾಸ್ಕ್ ಹಾಕಿಕೊಂಡಿದ್ದ ಸೆಲ್ಫಿಯನ್ನು ಮಗನಿಗೆ ಕಳುಹಿಸಿದ್ದರು. ಕೆಲವೊಮ್ಮೆ ಗಟ್ಟಿ ಪದಾರ್ಥಗಳನ್ನು ತಿನ್ನುವುದಕ್ಕೆ ನೀಡುತ್ತಿದ್ದರು. ಆದರೂ ಆಯಾಸ ಕಡಿಮೆಯಾಗುತ್ತಿಲ್ಲ ಅಂತ ಮಗನಿಗೆ ಹೇಳುತ್ತಿದ್ದರಂತೆ.

ಮಗ ನಿರಂತರವಾಗಿ ಆಸ್ಪತ್ರೆಯೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದ. ಹಾಗಾಗಿ



ನರ್ಸ್ ಫೋನ್ ಮಾಡಿದ ತಕ್ಷಣ ಏನೋ ತೊಂದರೆಯಿರಬೇಕು ಅಂತ ಅನ್ನಿಸಿತು. ಏಪ್ರಿಲ್ 5ರಂದು ತಂದೆಯ ಹೃದಯ ಮತ್ತು ಶ್ವಾಸಕೋಸ ದಿಢೀರನೆ ಕೆಲಸಮಾಡುವುದು ನಿಂತು ಹೋಗಿತ್ತಂತೆ ಸಿಬ್ಬಂದಿಗಳು ಕ್ರಮ ತೆಗೆದುಕೊಂಡು ಸರಿಪಡಿಸಿದರು ಅಂತ ನರ್ಸ್ ಹೇಳಿದರು. ತಂದೆಯನ್ನು ಇಂಟ್ಯುಬೇಟ್ ಮಾಡುವುದಕ್ಕೆ ಅನುಮತಿಯನ್ನು ಪಡೆದುಕೊಂಡರು. ಆದರೆ ಅದರ ಅವಶ್ಯಕತೆಯೇ ಬರಲಿಲ್ಲ. ಸಂಜೆ 6.10ಕ್ಕೆ ಅರೆಲ್ಲನೊ ಕೊನೆಯುಸಿರೆಳೆದರು ಎಂದು ನರ್ಸ್ ಫೋನ್ ಮಾಡಿ ತಿಳಿಸಿದರು.

ಕಾರ್ಲೋಸ್‌ಗೆ ಇದ್ಯಾವುದೂ ಗೊತ್ತಿರಲಿಲ್ಲ. 5:45ಕ್ಕೆ ಅಪ್ಪನಿಗೆ ವಾಟ್ಸ್ ಅಪ್ ಮೆಸೇಜ್ ಕಳುಹಿಸಿದ್ದ.

“ಹೈ ಪಾಪಾ, ನೀನು ಸುಧಾರಿಸಿಕೊಳ್ಳುತ್ತಿದ್ದೀಯ ಅಂತ ಭಾವಿಸಿದ್ದೇನೆ. ನಾವು ನಿಮ್ಮನ್ನು ತುಂಬಾ ಪ್ರೀತಿಸುತ್ತೇವೆ. ಹೋರಾಡುವುದನ್ನು ನಿಲ್ಲಿಸಬೇಡಿ. ನಿಮಗೆ ಸಾಮರ್ಥ್ಯವಿದೆ. ಇಲ್ಲಿ ನಾನು ಮತ್ತು ಅಮ್ಮ ಚೆನ್ನಾಗಿದ್ದೇವೆ ಪಾ”

ಅರೆಲ್ಲನೊಯಿಂದ ಅದಕ್ಕೆ ಉತ್ತರ ಬರಲಿಲ್ಲ.

ಹಲವು ದಿನಗಳ ನಂತರ ಕಾರ್ಲೋಸ್ ಮತ್ತು ಅವರ 96ವರ್ಷದ ತಾತ ಇಬ್ಬರಿಗೂ ಕರೋನಾ ಪಾಸಿಟಿವ್ ಎಂದು ವರದಿ ಬಂದಿದೆ.

Jeffery C. Mays contributed reporting. Susan Beachy contributed research.


https://www.nytimes.com/2020/04/19/nyregion/new-york-new-jersey-coronavirus-hospitals.html

# ಕೋವಿಡ್–19: ಅಭಿವೃದ್ಧಿಶೀಲ ದೇಶಗಳು ಅಮೆರಿಕದಿಂದ ಏನನ್ನೂ ಕಲಿಯಬಾರದು

## ಲವ್ ಪುರಿ

ಜಗತ್ತಿನಲ್ಲೇ ಅತಿ ಹೆಚ್ಚು ಕೋವಿಡ್–19ರ ಸೋಂಕಿತರು ಹಾಗೂ ಅದರಿಂದ ಅತಿ ಹೆಚ್ಚು ಸಂಖ್ಯೆಯಲ್ಲಿ ಮರಣಿಸಿದವರ ದೇಶ ಎಂಬ ಕುಖ್ಯಾತಿಗೆ ಅಮೆರಿಕಾ ಇಂದು ಗುರಿಯಾಗಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನವನ್ನು ನೋಡಿ ಅಭಿವೃದ್ಧಿಶೀಲ ದೇಶಗಳು ಕಲಿಯಬೇಕಾಗಿರುವ ಕೆಲವು ಬಹು ಮುಖ್ಯ ಪಾಠಗಳಿವೆ. ಏಕೆಂದರೆ ಅಭಿವೃದ್ಧಿಶೀಲ ದೇಶಗಳು ಕಾರ್ಪೊರೇಟ್ ಮತ್ತು ಸಂಘಸಂಸ್ಥೆಗಳ ಅತ್ಯುತ್ತಮ ಆಚರಣೆಗಳಿಗೆ ಸಂಬಂಧಿಸಿದಂತೆ ಅಮೆರಿಕವನ್ನು ತಮ್ಮ ಮಾದರಿ ಎಂದು ಭಾವಿಸಿವೆ.

ಈ ಕೋವಿಡ್–19ರ ಬಿಕ್ಕಟ್ಟು ಅತಿ ಹೆಚ್ಚು ಕಾಣಿಸಿಕೊಂಡಿರುವುದು ನ್ಯೂಯಾರ್ಕ್ ಸಿಟಿ ಮತ್ತು ಅದರ ಆಸುಪಾಸಿನಲ್ಲಿ. ತೀರಾ ವಿಪರ್ಯಾಸವೆಂದರೆ ಪ್ರಪಂಚದ ಅತ್ಯುತ್ತಮವಾದ ಆಸ್ಪತ್ರೆಗಳೆಲ್ಲವೂ ಇರುವುದು ನ್ಯೂಯಾರ್ಕಿನಲ್ಲಿಯೇ. ಈ ಬಿಕ್ಕಟ್ಟಿನಲ್ಲಿ ತುಂಬಾ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿರುವ ಇಬ್ಬರು ರಾಜಕೀಯ ವ್ಯಕ್ತಿಗಳಿದ್ದಾರೆ. ಅವರು ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮತ್ತು ನ್ಯೂಯಾರ್ಕ್ ರಾಜ್ಯದ ರಾಜ್ಯಪಾಲ ಆಂಡ್ರ್ಯೂ ಕೋಮೊ. ಕಾಕತಾಳೀಯವಾಗಿ ಅವರಿಬ್ಬರೂ ಹುಟ್ಟಿದ್ದು ಕ್ವೀನ್ಸ್ ಬರೋದಲ್ಲಿ. ಅದು ಪ್ರಪಂಚದ ಅತ್ಯಂತ ವೈವಿಧ್ಯಮಯವಾದ ಸ್ಥಳ. ಇವರಿಬ್ಬರು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರು. ಆದರೆ ಇಬ್ಬರ ಸ್ವಭಾವ ಮಾತ್ರ ಪೂರ್ತಿ ಬೇರೆ ಬೇರೆ. ಕ್ಯುಮೊ ಇಟಾಲಿಯನ್ ಅಮೆರಿಕನ್ ಕುಟುಂಬದಲ್ಲಿ ಜನಿಸಿದವರು. ಸೊಗಸಾದ ಕ್ವೀನ್ಸ್ ಇಂಗ್ಲಿಷ್ ಮಾತನಾಡುತ್ತಾರೆ. ಅವರ ತಂದೆ ಮಾರಿಯೋ ಕೋಮೊ ಕೂಡ ಈ ಹಿಂದೆ ಗವರ್ನರ್ ಆಗಿದ್ದವರು. ಕೋಮೊ ಈ ಬಿಕ್ಕಟ್ಟಿನ ಬಗ್ಗೆ ಪ್ರತಿದಿನವೂ ಪತ್ರಿಕಾಗೋಷ್ಠಿ ನಡೆಸುತ್ತಾರೆ. ಸತ್ಯಾಂಶಗಳಿಂದ ಕೂಡಿದ ಅವರ ಭರವಸೆಯ, ಆದರೆ ಎಚ್ಚರಿಕೆಯ ಮಾತುಗಳಿಂದ ಇಡೀ ವಿಶ್ವದಲ್ಲಿ ಅವರ ಜನಪ್ರಿಯತೆ ಮುಗಿಲು ಮುಟ್ಟಿದೆ.




ನ್ಯೂಯಾರ್ಕ್ ಸಿಟಿ ಜಾಗತಿಕ ಬಂಡವಾಳಶಾಹಿಯ ಮೆಕ್ಕಾ ಇರಬಹುದು. ಆದರೆ ಆ ನಗರ ತನ್ನ ಪ್ರಗತಿಪರ ಪಾಲಿಸಿಗಳಿಗಾಗಿ ತುಂಬಾ ಹೆಸರುವಾಸಿ. ಅಮೆರಿಕೆಯ ಉಳಿದ ಭಾಗಗಳಿಗೆ ಹೋಲಿಸಿದರೆ ರಾಜ್ಯ ಸರ್ಕಾರವು ನ್ಯೂಯಾರ್ಕ್ ಸಿಟಿಯಲ್ಲಿ ಕಡಿಮೆ ಆದಾಯದ ವರ್ಗಗಳಿಗೆ ತುಂಬಾ ಸುಭದ್ರವಾದ ಸುರಕ್ಷತಾ ಜಾಲವನ್ನು ರೂಪಿಸಿದೆ. ನ್ಯೂಯಾರ್ಕ್ ಸಿಟಿಯಲ್ಲಿ ಕೋವಿಡ್–19 ಕಾಳ್ಗಿಚ್ಚಿನಂತೆ ಹರಡಲು ಬಹು ಮುಖ್ಯವಾದ ಕಾರಣವೇನೆಂದರೆ ಅಲ್ಲಿಗೆ ಪ್ರತಿದಿನವೂ ಹೊರಗಿನಿಂದ ತುಂಬಾ ಜನರು ಬಂದು ಹೋಗುತ್ತಾರೆ. ಈ ನಗರದ ನಿವಾಸಿಗಳಿಗೆ ಪ್ರಪಂಚದಾದ್ಯಂತ ಸಂಬಂಧವಿದೆ. ಏಕೆಂದರೆ ಈ ನಗರದ ನಿವಾಸಿಗಳಲ್ಲಿ ಶೇಕಡಾ 37ರಷ್ಟು ಮಂದಿ ವಿದೇಶೀಯರು. ಇದರಿಂದ ಈ ನಗರ ವೈವಿಧ್ಯಮಯವೂ, ವರ್ಣರಂಜಿತವೂ ಆಗಿದೆ. ಆದರೆ ಅದೇ ಹೊತ್ತಿಗೆ ಸೋಂಕಿನ ಮಹಾಮಾರಿಗಳಿಗೆ ಬಹಳ ಸುಲಭವಾಗಿ ಬಲಿಯಾಗುತ್ತದೆ.

ಆದರೆ ಅಲ್ಲಿ ಈ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತಿರುವ ಇನ್ನೊಂದು ಅಂಶವಿದೆ. ಇದನ್ನು ಅಮೆರಿಕೆಯ ಎಲ್ಲಾ ಕಡೆಗಳಲ್ಲಿಯೂ ಗಮನಿಸಬಹುದು. ತುಂಬಾ ವೈವಿಧ್ಯಮಯವಾದ ಮತ್ತು ಬಲಿಷ್ಟವಾದ ಸುರಕ್ಷಾ ಜಾಲವಿರುವ ನ್ಯೂಯಾರ್ಕ್ ಸಿಟಿಯಲ್ಲಿಯೂ ಈ ಅಂಶ ಕಂಡುಬರುತ್ತದೆ. ಅದು ಅಮೆರಿಕೆಯ ಕುಖ್ಯಾತ ವೈದ್ಯಕೀಯ ವ್ಯವಸ್ಥೆ. ಈ ವೈದ್ಯಕೀಯ ವ್ಯವಸ್ಥೆ ವಿಮಾ ಕಂಪನಿಗಳ ದುರಾಸೆಗೆ ತನ್ನನ್ನು ಒತ್ತೆ ಇಟ್ಟುಕೊಂಡುಬಿಟ್ಟಿದೆ. ಅತ್ಯಧಿಕ ಲಾಭ ಗಳಿಸುವಂತೆ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ. ಏಕೆಂದರೆ ದೊಡ್ಡ ಹಾಗೂ ಅನುತ್ಪಾದಕ

ಆಡಳಿತ ವ್ಯವಸ್ಥೆ ಮತ್ತು ಮಾರುಕಟ್ಟೆಯ ವೆಚ್ಚವನ್ನು ಭರಿಸಲು ಅಷ್ಟು ದೊಡ್ಡ ಮೊತ್ತದ ಹಣ ಬೇಕಾಗುತ್ತದೆ. ವಿಮೆ ಇರುವ ರೋಗಿಗಳು ವೈದ್ಯರ ಬಳಿ ನಿಯಮಿತವಾಗಿ ಹೋಗುತ್ತಾರೆ ಮತ್ತು ಕಾಯಿಲೆ ಬರುವುದಕ್ಕೆ ಮುಂಚೆಯೇ ಮುಂಜಾಗ್ರತಾ ಚಿಕಿತ್ಸೆಯನ್ನು ಪಡೆಯುತ್ತಾರೆ. ವೈದ್ಯಕೀಯ ವೆಚ್ಚದ ವ್ಯವಹಾರವು ಆಸ್ಪತ್ರೆ ಮತ್ತು ವಿಮಾ ಕಂಪನಿಗಳ ನಡುವೆ ನಡೆಯುತ್ತದೆ. 2014ರಲ್ಲಿ ನ್ಯೂಯಾರ್ಕ್ ಸಿಟಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನನ್ನ ವೈದ್ಯಕೀಯ ಬಿಲ್ 17,000 ಡಾಲರ್‌ಗಳಾಗಿದ್ದವು. ವಿಮಾ ಕಂಪನಿಯ ಮಧ್ಯಸ್ಥಿಕೆಯಿಂದಾಗಿ ಅದನ್ನು 8000 ಡಾಲರ್‌ಗಳಿಗೆ ಇಳಿಸುವುದಕ್ಕೆ ಸಾಧ್ಯವಾಯಿತು. ನನ್ನ ಹೆಬ್ಬೆಟ್ಟು ಕುಯಿದುಹೋಗಿ ಅದಕ್ಕೆ ಒಂದು ತುರ್ತು ಘಟಕದಲ್ಲಿ ಹೊಲಿಗೆ ಹಾಕಿದ್ದಕ್ಕೆ ಅಷ್ಟು ಶುಲ್ಕ!

ಆಸ್ಪತ್ರೆಯ ವೆಚ್ಚವನ್ನು ಈ ರೀತಿಯಲ್ಲಿ ಕೃತಕವಾಗಿ ಏರಿಸುವುದರಿಂದ ರೋಗಿಗಳು ಡಾಕ್ಟರ್ ಬಳಿ ಹೋಗಲು ಹಿಂಜರಿಯುತ್ತಾರೆ. ವಿಮೆ ಇರುವ ರೋಗಿಗಳಲ್ಲಿಯೂ ಈ ಹಿಂಜರಿಕೆ ಸಾಮಾನ್ಯವಾಗಿ ಕಂಡುಬರುತ್ತದೆ. ಏಕೆಂದರೆ ವಿಮೆಯ ಗುಣಮಟ್ಟಕ್ಕೆ ಅನುಗುಣವಾಗಿ ಉಳಿದ ಖರ್ಚುಗಳೆಲ್ಲವೂ ಬದಲಾಗುತ್ತದೆ. ಹಾಗಾಗಿ ಅಮೆರಿಕೆಯಲ್ಲಿ ಕೋವಿಡ್–19 ಹರಡುವುದಕ್ಕೆ ಶುರುವಾದ ಪ್ರಾರಂಭಿಕ ಹಂತದಲ್ಲಿ ತಪಾಸಣೆಗೆ ಹಣ ತೆರಬೇಕು ಎನ್ನುವ ಕಾರಣಕ್ಕೆ ಹಲವು ರೋಗಿಗಳು ಆಸ್ಪತ್ರೆಗೆ ಹೋಗಲೇ ಇಲ್ಲ. ಮತ್ತು ಅವರೆಲ್ಲರೂ ವೈರಸ್‌ನ ವಾಹಕರಾದರು. ಇದಕ್ಕೆ ಹಲವಾರು ಪುರಾವೆಗಳು ಸಿಗುತ್ತವೆ. ಕ್ವೀನ್ಸ್ ಮತ್ತು ಬ್ರೂಕ್ಲಿನ್ನಿನ ನಗರಗಳ ಬಡವರ ಬಡಾವಣೆಗಳಲ್ಲಿ ಹಾಗೂ ಹೊರವಲಯಗಳಲ್ಲಿ ಕೋವಿಡ್–19ರ ಸೋಂಕು ಪಾಸಿಟಿವ್ ಇರುವ ಅತ್ಯಂತ ಹೆಚ್ಚು ರೋಗಿಗಳು ಕಂಡುಬಂದಿದ್ದಾರೆ. ಕ್ವೀನ್ಸ್ ಪ್ರಾಂತ್ಯದ ಎಮ್‌ಹರ್ಸ್ಟ್ ಎಂಬ ಸಾರ್ವಜನಿಕ ಆಸ್ಪತ್ರೆ ಕೋವಿಡ್–19ರ ಕೇಂದ್ರವಾಗಿಬಿಟ್ಟಿದೆ. ನ್ಯೂಯಾರ್ಕ್ ನಗರದಲ್ಲಿ ಕೋವಿಡ್–19 ಹರಡಿದ್ದು ಅಲ್ಲಿಂದಲೇ. ಎಮ್‌ಹರ್ಸ್ಟ್ ಆಸ್ಪತ್ರೆಯ ಸುತ್ತಮುತ್ತಲಿರುವ ಸುಮಾರು ಶೇಕಡ 60ರಷ್ಟು ನಿವಾಸಿಗಳು ವಿದೇಶೀಯರು ಮತ್ತು ಕಡಿಮೆ ಆದಾಯದ ಗುಂಪಿಗೆ ಸೇರಿದವರು.

ಒಬಾಮಾ ಅವರ ಅಧಿಕಾರಾವಧಿಯಲ್ಲಿ ಐತಿಹಾಸಿಕವಾದ ಅಫೋರ್ಡಬಲ್ ಹೆಲ್ತ್ ಕೇರ್ ಫಾರ್ ಆಲ್ ಕಾಯಿದೆಯನ್ನು ಜಾರಿಗೊಳಿಸಿದ ನಂತರವೂ ಅಮೆರಿಕಾದ ಸುಮಾರು ಶೇಕಡಾ 8.5ರಷ್ಟು ಜನಕ್ಕೆ ವಿಮೆ ಇಲ್ಲ. 2019ರ ಜನವರಿಯಲ್ಲಿ ನ್ಯೂಯಾರ್ಕ್ ಸಿಟಿಯಲ್ಲಿ ವಿಮೆಯಿಲ್ಲದ 600,000 ನಿವಾಸಿಗಳಿದ್ದರು. ಅವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ದಾಖಲೆರಹಿತ ವಲಸಿಗರು. ಇನ್ನು ಉಳಿದವರು ವಿಮೆಗೆ ಅರ್ಹರು ಆದರೆ ಅವರು ಬೇರೆ ಬೇರೆ ಕಾರಣಗಳಿಂದಾಗಿ ದಾಖಲಾಗದೇ ಉಳಿದಿದ್ದಾರೆ.

ಹೀಗೆ ಸೂಕ್ತವಾದ ಆರೋಗ್ಯ ವಿಮೆ ಇಲ್ಲದಿರುವುದು ಮತ್ತು ಇನ್ನಿತರ ಖಾಯಿಲೆಗಳು ಇರುವುದು ಮಹಾಮಾರಿಯ ಹೊತ್ತಿನಲ್ಲಿ ದೊಡ್ಡ ಪ್ರಮಾಣದ ಸಾವುಗಳಿಗೆ ಕಾರಣವಾಗುತ್ತಿದೆ. ವಿಮೆ ಇಲ್ಲದವರು ಸಾರ್ವಜನಿಕ ಮತ್ತು ಸೇಫ್ಟಿ ನೆಟ್ ಆಸ್ಪತ್ರೆಗಳನ್ನು ಅವಲಂಬಿಸಿರುತ್ತಾರೆ. ಆದರೆ ಮಹಾಮಾರಿಯ ಹೊತ್ತಿನಲ್ಲಿ ಇವು ಯತ್ಕಾತಕ್ಕೂ ಸಾಕಾಗಲಿಲ್ಲ. 1998ರಿಂದ ನ್ಯೂಯಾರ್ಕ್ ಸಿಟಿಯ 18 ಆಸ್ಪತ್ರೆಗಳು ಒಳರೋಗಿಗಳ ಸೌಲಭ್ಯವನ್ನು ಸಂಪೂರ್ಣವಾಗಿ ನಿಲ್ಲಿಸಿವೆ ಎಂದು ನ್ಯೂಯಾರ್ಕಿನ ಅಸೋಸಿಯೇಷಿಯನ್ ಫಾರ್ ನೈಬರ್‌ಹುಡ್ ಅಂಡ್ ಹೌಸಿಂಗ್ ಡೆವಲಪ್‌ಮೆಂಟ್ ಎಂಬ ನಾನ್‌ಪ್ರಾಫಿಟ್ ಸಂಸ್ಥೆ ವರದಿ ಮಾಡಿದೆ. ಇದರಿಂದಾಗಿ ಆಸ್ಪತ್ರೆಯ ಸಾವಿರಾರು ಹಾಸಿಗೆಗಳು ನಷ್ಟವಾಗಿದೆ. ಮತ್ತು ಇವುಗಳಲ್ಲಿ ಮೂರನೇ ಎರಡರಷ್ಟು ಆಸ್ಪತ್ರೆಗಳು ಇರುವುದು ನಗರದ ಹೊರವಲಯಗಳಲ್ಲಿ. ಈ ಮುಚ್ಚಿಹೋಗಿರುವ ಆಸ್ಪತ್ರೆಗಳೆಲ್ಲವೂ ಇರುವುದು ಕಡಿಮೆ ಆದಾಯದ ಬಿಳಿಯರಲ್ಲದ ಸಮುದಾಯಗಳಿರುವ ನಗರದ ಹೊರವಲಯಗಳಲ್ಲಿ. ಇಂದು ಕರೋನಾ ವೈರಸ್ ಬಿಕ್ಕಟ್ಟನ್ನು ತೀವ್ರವಾಗಿ ಅನುಭವಿಸುತ್ತಿರುವವರೂ ಇವರೇ.

ಅಭಿವೃದ್ಧಿಶೀಲ ದೇಶಗಳಲ್ಲಿ ಕೋವಿಡ್–19ರ ಹರಡುವಿಕೆ ನಿಯಂತ್ರಿಸುವುದೇ ಮೊದಲ ಆದ್ಯತೆ. ಜಗತ್ತಿನ ಉಳಿದೆಡೆಗಳ ಅನುಭವಗಳಿಂದ ಸೂಕ್ತವಾದ ಪಾಠ ಕಲಿಯುವುದಕ್ಕೆ ಇದೊಂದು ಅವಕಾಶ. ವೈದ್ಯಕೀಯ ವ್ಯವಸ್ಥೆಯ ಅನುಚಿತವಾದ ಹಾಗೂ ಅನಿಯಂತ್ರಿತವಾದ ಖಾಸಗೀಕರಣ ಮತ್ತು ಅದರೊಟ್ಟಿಗೆ ವಿಮಾ ಕಂಪನಿಗಳ ಪಾರದರ್ಶಕವಲ್ಲದ ಕಾರ್ಯವಿಧಾನಗಳು ಇದಕ್ಕೊಂದು ಉತ್ತರವಲ್ಲ. ತುಂಬಾ ದಟ್ಟವಾದ ಜನಸಂಖ್ಯೆ ಇರುವ ಏಷ್ಯಾದ ರಾಷ್ಟ್ರಗಳಾದ ದಕ್ಷಿಣ ಕೊರಿಯಾ, ಸಿಂಗಪುರ್, ಮತ್ತು ತೈವಾನ್ ಕೊರೋನಾ ಹರಡುವಿಕೆಯನ್ನು ತುಂಬಾ ಬೇಗಲೇ ನಿಯಂತ್ರಿಸಿವೆ. ಈ ಮಾದರಿಗಳನ್ನು ಕುಲಂಕುಷವಾಗಿ ಅಧ್ಯಯನ ಮಾಡಬೇಕು. ಉದಾಹರಣೆಗೆ ಅಮೆರಿಕದ ಜನಸಂಖ್ಯೆ ದಕ್ಷಿಣ ಕೊರಿಯಾಕ್ಕಿಂತ ಆರು ಪಟ್ಟು ಹೆಚ್ಚಿಗೆ ಇದೆ. ಆದರೆ ಇಲ್ಲಿ ಕೋವಿಡ್–19ರಿಂದ ಸಂಭವಿಸಿರುವ ಸಾವಿನ ಪ್ರಮಾಣ ಕೊರಿಯಾಗಿಂತ 174ಪಟ್ಟು ಹೆಚ್ಚಿಗೆ ಇದೆ.

ಅಭಿವೃದ್ಧಿಶೀಲ ದೇಶಗಳಲ್ಲಿ ಬಹುದೊಡ್ಡ ಸಂಖ್ಯೆಯ ಜನಕ್ಕೆ ಸುಲಭವಾಗಿ ಲಭ್ಯವಿರುವ ಮತ್ತು ಚೆನ್ನಾಗಿ ಕೆಲಸ ನಿರ್ವಹಿಸುತ್ತಿರುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಘಟಕಗಳನ್ನು ಮುಂದುವರಿಸಬೇಕು. ಅವುಗಳನ್ನು ಆಧುನೀಕರಿಸಿ, ಮತ್ತಷ್ಟು ವರ್ಧಿಸಬೇಕು. ಈಗ ಸಧ್ಯಕ್ಕೆ ಕೆಲವರಿಗಷ್ಟೇ ದಕ್ಕುತ್ತಿರುವ ಖಾಸಗಿ ಆರೋಗ್ಯ ವಲಯವನ್ನು ನಿಯಂತ್ರಿಸಲು ಸೂಕ್ತವಾದ ಕಟ್ಟುಪಾಡುಗಳಿಲ್ಲ. ಎಷ್ಟೋ ಬಾರಿ ವೆಚ್ಚವನ್ನು ಕೃತಕವಾಗಿ ಹೆಚ್ಚಿಸುವುದಕ್ಕೆಂದೇ ಔಷಧೋಪಚಾರಗಳನ್ನು ಹೆಚ್ಚಿಸುತ್ತಿದ್ದಾರೆ ಎಂಬ ಗಾಬರಿಯೂ ಇದೆ. ಒಟ್ಟಾರೆಯಾಗಿ ಹೇಳುವುದಾದರೆ, ವಿಶ್ವದಾದ್ಯಂತ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಗಳು ಪರಸ್ಪರ ಒಬ್ಬರಿಂದ ಇನ್ನೊಬ್ಬರು ಕಲಿತುಕೊಂಡು, ಯಾವುದು ಪರಿಣಾಮಕಾರಿಯಾಗಿದೆ ಮತ್ತು ಯಾವುದು ಪರಿಣಾಮಕಾರಿಯಾಗಿಲ್ಲ ಎನ್ನುವುದನ್ನು ಅರಿತು, ಅಲ್ಪಕಾಲಿಕವಾಗಿ ಮತ್ತು ದೀರ್ಘಕಾಲೀನವಾಗಿ ಕಾರ್ಯನಿರತವಾಗುವುದಕ್ಕೆ ಇಂತಹ ಮಹಾಮಾರಿಗಳು ಒಂದು ಸೂಕ್ತವಾದ ಸಂದರ್ಭವಾಗಿವೆ.

**ಲೇಖಕರು ರಾಜಕೀಯ ವಿಶ್ಲೇಷಕರು ಮತ್ತು ವಿಶ್ವಸಂಸ್ಥೆಯಲ್ಲಿ ವಿಭಿನ್ನ ಹೊಣೆಗಾರಿಕೆಯನ್ನು ನಿರ್ವಹಿಸಿದ್ದಾರೆ.**

# ಎಲ್ಲವನ್ನು ಮಾರುಕಟ್ಟೆಗೆ ಒಪ್ಪಿಸುವ ಸಮಯ ಇದಲ್ಲ

ಜಾಮಿ ಮಾರ್ಟಿನ್
ಆರ್ಥಿಕ ಇತಿಹಾಸಕಾರ
ನ್ಯೂಯಾರ್ಕ್ ಟೈಮ್ಸ್

ಕೊರೋನ ಮಹಾಮಾರಿಯ ಒಂದು ಲಕ್ಷಣವೆಂದರೆ ಜಗತ್ತಿನಾದ್ಯಂತ ಆರ್ಥಿಕ ರಾಷ್ಟ್ರೀಯತೆ ಸ್ಫೋಟವಾಗುತ್ತಿದೆ. ಅಮೆರಿಕಾ ಹಾಗೂ ಯುರೋಪಿಯನ್ ಯೂನಿಯನ್ನಿನ ಸದಸ್ಯ ದೇಶಗಳೂ ಸೇರಿದಂತೆ ಹಲವು ದೇಶಗಳು ತುಂಬಾ ಕೊರತೆಯಿರುವ ರಕ್ಷಣೆಗೆ ಬೇಕಾದ ಮಾಸ್ಕ್‌ಗಳು, ಗೌನುಗಳು, ಕೈಗವಸುಗಳು, ವೆಂಟಿಲೇಟರ್, ಪರೀಕ್ಷಾ ಕಿಟ್ಟುಗಳು ಇತ್ಯಾದಿಗಳನ್ನು ವಿದೇಶಗಳಲ್ಲಿ ಮಾರಾಟಮಾಡದಂತೆ ನೋಡಿಕೊಳ್ಳುತ್ತಿದ್ದಾರೆ. ಅವುಗಳ ರಫ್ತನ್ನು ನಿಯಂತ್ರಿಸುತ್ತಿದ್ದಾರೆ. ಈ ವಸ್ತುಗಳನ್ನು ಕೊಳ್ಳುವುದಕ್ಕೆ ನಡೆಯುತ್ತಿರುವ ಸ್ಪರ್ಧೆ ಯಾವುದೋ ಕೆಟ್ಟ ಆಕ್ಷನ್ ಸಿನಿಮಾದ ದೃಶ್ಯಗಳಂತೆ ಕಾಣುತ್ತಿವೆ. ಮಾಸ್ಕುಗಳನ್ನು ತುಂಬಿಕೊಂಡು ಯುರೋಪಿಗೆ ಬರುತ್ತಿದ್ದ ವಿಮಾನವನ್ನು ಕೊನೆಯ ಕ್ಷಣದಲ್ಲಿ ಅಮೇರಿಕಾ ಕಡೆ ತಿರುಗಿಸಲಾಗುತ್ತದೆ. ಜರ್ಮನ್ ಅಧಿಕಾರಿಗಳು ಅಮೆರಿಕೆಯನ್ನು 'ಆಧುನಿಕ ಪೈರೇಟ್ಸ್' ಅಂತ ಆಪಾದಿಸುತ್ತಾರೆ.

ಇಂತಹ ಕೆಟ್ಟ ಸ್ಪರ್ಧೆಯಿಂದ ಈ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೆ ಹೋಗುತ್ತದೆ. ಅಥವಾ ಅವುಗಳನ್ನು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಫೆಬ್ರವರಿಯ ಪ್ರಾರಂಭದಲ್ಲೇ ಕೆಲವು ಸುರಕ್ಷತಾ ಸಾಧನಗಳ ಬೆಲೆ ಮಾಮೂಲಿ ಬೆಲೆಗಿಂತ 20 ಪಟ್ಟು ಹೆಚ್ಚಾಗಿತ್ತು. ಈ ಬಗ್ಗೆ ಜಾಗತಿಕ ಆರೋಗ್ಯ ಸಂಘಟನೆಯ ಡೈರಕ್ಟರ್ ಜನರಲ್ ತೆಡ್ರಸ್ ಅಧನಾಮ್ ಗೆಬ್ರಿಯೆಸಸ್ ಆಗಲೇ ಎಚ್ಚರಿಸಿದ್ದರು. ಕೊರೋನಾ ವೈರಾಣು ಹರಡುವುದು ಇನ್ನೂ ಮುಂದುವರಿದಿದೆ. ಇಂತಹ ಸಂಕಷ್ಟ ಸಮಯದಲ್ಲಿ ಈ ಏರುತ್ತಿರುವ ಬೆಲೆಯನ್ನು ನಿಭಾಯಿಸಲಾರದ ದೇಶಗಳ ಸ್ಥಿತಿ ಚಿಂತಾಜನಕವಾಗುತ್ತದೆ.

ಬ್ರೆಜಿಲಿನಲ್ಲಿ ಇಂದು ಕೊರೋನಾ ಬಿಕ್ಕಟ್ಟು ತೀರಾ ಗಂಭೀರವಾಗಿದೆ. ಅಲ್ಲಿ ವ್ಯಾಪಕವಾಗಿ ಪರೀಕ್ಷೆ ಮಾಡಲಾಗುತ್ತಿಲ್ಲ. ಅದಕ್ಕೆ ಬೇಕಾದ ರಾಸಾಯನಿಕ ರೀಏಜೆಂಟ್ ಸಿಗುತ್ತಿಲ್ಲ. ಅಮೆರಿಕೆಯಂತಹ ಶ್ರೀಮಂತ ದೇಶಗಳು ಜಾಗತಿಕ ಪೂರೈಕೆಯ ಬಹುಭಾಗವನ್ನು ಕೊಂಡುಕೊಂಡಿದ್ದಾರೆ. ಆಫ್ರಿಕಾದಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ಜಗತ್ತಿನ ಅತ್ಯಂತ ಬಡರಾಷ್ಟ್ರವಾದ ಕೇಂದ್ರ ಆಫ್ರಿಕನ್ ರಿಪಬ್ಲಿಕ್‌ನಲ್ಲಿ ಕೇವಲ ಮೂರೇ ಮೂರು ವೆಂಟಿಲೇಟರುಗಳಿವೆ. ಅಲ್ಲಿರುವ ಜನಸಂಖ್ಯೆ ನಲ್ವತ್ತು ಲಕ್ಷಕ್ಕಿಂತ ಹೆಚ್ಚು. ಲೈಬೀರಿಯದಲ್ಲಿ ಒಂದೂ ಇಲ್ಲದೇ ಇರಬಹುದು. ಆಫ್ರಿಕಕಾದ ಕೆಲವು ದೇಶಗಳು ಅವಧಿ ಮುಗಿದ ಮಾಸ್ಕಗಳನ್ನು ಕೊಳ್ಳುವುದಕ್ಕೆ ಮಾಮೂಲಿ ಬೆಲೆಗಿಂತ ಹತ್ತು ಪಟ್ಟು ಹೆಚ್ಚು ಬೆಲೆ ತೆರುತ್ತಿವೆ. ಅದೂ ಸಿಕ್ಕರೆ!

ಇತ್ತೀಚಿನ ದಿನಗಳಲ್ಲಿ ಕೊರೋನ ವಿರುದ್ಧದ ಹೋರಾಟವನ್ನು ಎರಡನೇ ಜಾಗತಿಕ ಯುದ್ಧಕ್ಕೆ ಹೋಲಿಸುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಯುದ್ಧ ಸಮಯದಲ್ಲಿ ಕೈಗಾರಿಕೆಯ ಕ್ರೋಢೀಕರಣಕ್ಕೆ ಸಂಬಂಧಿಸಿದಂತೆ ಈ ರೀತಿಯಲ್ಲಿ ಹೋಲಿಸಿ ಮಾತನಾಡುತ್ತಿದ್ದಾರೆ. ಆದರೆ ಇದನ್ನು ಮೊದಲ ಜಾಗತಿಕ ಮಹಾಯುದ್ಧಕ್ಕೆ ಹೋಲಿಸುವುದು ಒಳ್ಳೆಯದು. ಆಗ ಹಲವು ತುರ್ತು ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬಹುದು. ಜನರ ಪ್ರಾಣ ಉಳಿಸುವ ವಿಷಯದಲ್ಲಿ ಅದು ಹೆಚ್ಚು ಸಹಾಯಕವಾಗಬಹುದು.

ಮೊದಲ ಜಾಗತಿಕ ಯುದ್ಧದ ಸಮಯದಲ್ಲಿ ಮಿತ್ರ ರಾಷ್ಟ್ರಗಳಿಗೆ ಇಂತಹುದೇ ಸಮಸ್ಯೆ ಎದುರಾಗಿತ್ತು. ಆಗಲೂ ಅಂತರರಾಷ್ಟ್ರೀಯ ಸ್ಪರ್ಧೆ ನಿಯಂತ್ರಣವಿಲ್ಲದೆ ನಡೆದಿತ್ತು. ಖಾಸಗಿ ಮಾರುಕಟ್ಟೆಯಲ್ಲಿ ಪ್ರಮುಖ ವಸ್ತುಗಳಿಗೆ ತೀವ್ರವಾದ ಕೊರತೆ ಉಂಟಾಗಿತ್ತು. ಈ ಮಿತ್ರರಾಷ್ಟ್ರಗಳು ಒಂದೇ ಶತ್ರುವಿನ ವಿರುದ್ಧ, ಒಂದೇ ಕೇಂದ್ರ ಶಕ್ತಿಯ ವಿರುದ್ಧ ಹೋರಾಡುತ್ತಿದ್ದರು. ಆದರೆ ಗೋಧಿ, ಕಚ್ಚಾಪದಾರ್ಥಗಳು ಇತ್ಯಾದಿ ಅವಶ್ಯಕ ಪದಾರ್ಥಗಳನ್ನು ಕೊಳ್ಳುವ ವಿಷಯದಲ್ಲಿ ಅವರಲ್ಲೇ ತೀವ್ರ ಸ್ಪರ್ಧೆ ನಡೆಯುತ್ತಿತ್ತು. ಇದರಿಂದ ಅವರು ಒಟ್ಟಾಗಿ ಯುದ್ಧಮಾಡುವುದು ಸಮಸ್ಯೆಯಾಗುತ್ತಿತ್ತು. 1917–18ರ ವೇಳೆಗೆ ಕೊರತೆ ಎಷ್ಟು ತೀವ್ರವಾಯಿತೆಂದರೆ ಹೀಗೇ ಮುಂದುವರಿದರೆ ಯುದ್ಧದಲ್ಲಿ ಸೋತು ಬಿಡಬಹುದು ಅನ್ನುವ ಭೀತಿ ಯುರೋಪಿನ ಅನೇಕ ಮಿತ್ರ ರಾಷ್ಟ್ರಗಳ ಕೆಲವು ಅಧಿಕಾರಿಗಳನ್ನು ಕಾಡತೊಡಗಿತು. ಅವರ ಆರ್ಥಿಕತೆ ಹೆಚ್ಚು ಕಡಿಮೆ ಕುಸಿಯುವ ಸ್ಥಿತಿಗೆ ತಲುಪಿತ್ತು. ನಾಗರಿಕರು ಸುಸ್ತಾಗಿದ್ದರು.

ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಕ್ಕೆ ಮಿತ್ರ ರಾಷ್ಟ್ರಗಳು ಹಲವಾರು ಸಂಘಟನೆಗಳನ್ನು ಕಟ್ಟಿಕೊಂಡರು. ಅವುಗಳ ಮೂಲಕ ಕೊರತೆಯಿರುವ ಪದಾರ್ಥಗಳನ್ನು ಒಂದು ನಿರ್ದಿಷ್ಟ ಬೆಲೆಯಲ್ಲಿ ಕೊಂಡರು. ಅವೆಲ್ಲವನ್ನೂ ಒಟ್ಟುಮಾಡಿಕೊಂಡು ಎಲ್ಲಾ ಮಿತ್ರ ದೇಶಗಳಿಗೂ ಅವರವರ ಅವಶ್ಯಕತೆಗಳಿಗೆ ತಕ್ಕಂತೆ ಹಂಚಲಾಯಿತು. ಅವುಗಳನ್ನು ಸಾಗಿಸುವುದಕ್ಕೂ ವ್ಯವಸ್ಥೆ ಮಾಡಲಾಯಿತು. ತೀವ್ರ ಕೊರತೆ ಅನುಭವಿಸುತ್ತಿರುವ ದೇಶಗಳಿಗೆ ಸರಕುಗಳನ್ನು ಸರಬರಾಜು ಮಾಡಲು ಅತ್ಯಂತ ಬಲಿಷ್ಠ ರಾಷ್ಟ್ರಗಳಾದ ಅಮೆರಿಕಾ ಮತ್ತು ಬ್ರಿಟನ್ ಒಪ್ಪಿಕೊಂಡವು. ಜಗತ್ತಿನ ಚರಿತ್ರೆಯಲ್ಲೇ ಈ ಎರಡು ಅತ್ಯಂತ ಪ್ರಬಲ ರಾಷ್ಟ್ರಗಳು ಜಾಗತಿಕ ಮಾರುಕಟ್ಟೆಯಲ್ಲಿನ ಬೇಡಿಕೆ ಪೂರೈಕೆಯ ನಿಯಮವನ್ನು ಬದಿಗೊತ್ತಿ ಅವಶ್ಯಕತೆ ಇರುವ ದೇಶಗಳಿಗೆ ಸರಕುಗಳನ್ನು ಪೂರೈಸಿದವು. ಅವಶ್ಯಕತೆ ಆದ್ಯತೆಯಾಯಿತೇ ಹೊರತು ಕೊಳ್ಳುವ ಸಾಮರ್ಥ್ಯವಲ್ಲ. ಇಂತಹ ಅಂತರರಾಷ್ಟ್ರೀಯ ಮಟ್ಟದ ಸಮನ್ವಯ ವ್ಯವಸ್ಥೆ ಮಿತ್ರರಾಷ್ಟ್ರಗಳ ಗೆಲುವಿಗೆ ಬಹುಮಟ್ಟಿಗೆ ಕಾರಣವಾಯಿತು. ಇದನ್ನು ಯುದ್ಧದ ನಂತರ ಹಲವರು ಗುರುತಿಸಿದ್ದಾರೆ. ಯುದ್ಧದ ಸಮಯದಲ್ಲಿ ಪೂರೈಕೆಯ ವ್ಯವಸ್ಥೆ ತುಂಬಾ ಯಶಸ್ವಿಯಾಯಿತು. ಇದು ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ ಅಂತರರಾಷ್ಟ್ರೀಯ ಸಹಕಾರ ಎಷ್ಟು ಬಲಶಾಲಿಯಾದದ್ದು ಎಂಬುದನ್ನೂ ಜಗತ್ತಿಗೆ ತೋ–ರಿಸಿಕೊಟ್ಟಿತು. ಈ ವ್ಯವಸ್ಥೆಗೆ ಚಾಲು ನೀಡಿದ ಹಲವು ಅಧಿಕಾರಿಗಳು ಮುಂದೆ ಯುದ್ಧದ ನಂತರ ಲೀಗ್ ಆಫ್ ನೇಷನ್ಸ್‌ನಲ್ಲಿ ತೀರಾ ಪ್ರಭಾವಶಾಲಿ ಸ್ಥಾನ ಪಡೆದದ್ದರಲ್ಲಿ ಆಶ್ಚರ್ಯವೇನಿಲ್ಲ. ಹಾಗೆಯೇ ಅವರಲ್ಲಿ ಇನ್ನೊಬ್ಬರು ಅನಂತರ



ಯುರೋಪಿಯನ್ ಯೂನಿಯನ್ ಸ್ಥಾಪಿಸುವುದಕ್ಕೆ ನೆರವಾದರು. ಲೀಗ್ ಆಫ್ ನೇಷನ್ಸ್ ಪ್ರಾರಂಭದಲ್ಲಿ ಸಾರ್ವಜನಿಕ ಆರೋಗ್ಯ, ಆರ್ಥಿಕ ನೀತಿಗಳು ಮತ್ತು ಕಳ್ಳಸಾಗಣೆ ತಡೆಯುವುದರಲ್ಲಿ ಹಲವು ರೀತಿಯಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ಸ್ಥಾಪಿಸುವುದಕ್ಕೆ ಕಾರಣವಾಗಿದೆ. 1930ರಲ್ಲಿ ಅಂತರರಾಷ್ಟ್ರೀಯ ಸಹಕಾರ ಕುಸಿದುಬಿತ್ತು. ಹಾಗಾಗಿಯೇ ನಂತರದ ಆರ್ಥಿಕ ಹಿಂಜರಿಕೆಯನ್ನೇ ಆಗಲಿ, ಮುಂದಿನ ಯುದ್ಧಗಳನ್ನೇ ಆಗಲಿ ಎದುರಿಸುವುದಕ್ಕೆ ಜಗತ್ತಿಗೆ ಸಾಧ್ಯವಾಗಲಿಲ್ಲ. ಆದರೆ ಇಂತಹ ಸಂಸ್ಥೆಗಳ ಪ್ರಯತ್ನದಿಂದಾಗಿ ಮುಂದೆ ಸಂಯುಕ್ತ ಸಂಸ್ಥಾನಗಳಂತಹ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಬೇಕಾದ ಒಂದು ಬಹುಮುಖ್ಯ ಬುನಾದಿ ಸಾಧ್ಯವಾಯಿತು.

ಒಬ್ಬ ಸಮಾನ ಶತ್ರುವನ್ನು ಎದುರಿಸುವ ಸಂದರ್ಭದಲ್ಲಿ ನಮ್ಮ ನಡುವಿನ ಅನಾವಶ್ಯಕ ಸ್ಪರ್ಧೆಯನ್ನು ತಪ್ಪಿಸುವಂತಹ ಒಂದು ಪ್ರಯತ್ನ ಆಗ ನಡೆಯಿತು. ಅಂದರೆ ಮೊಟ್ಟಮೊದಲ ಬಾರಿಗೆ ಒಂದು ಜಾಗತಿಕ ಆಡಳಿತವನ್ನು ಪ್ರಯೋಗ ಮಾಡಿ ನೋಡುವುದಕ್ಕೆ ಅದು ಒಂದು ಅವಕಾಶ ಮಾಡಿಕೊಟ್ಟಿತು. ಮತ್ತೆ ಈಗ ಅದನ್ನು ಪ್ರಯತ್ನಿಸಿ ನೋಡಬಹುದಾ?

ಕೊರೋನ ವೈರಾಣುವನ್ನು ಮಣಿಸಲು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಅವಶ್ಯಕ ಸಂಪನ್ಮೂಲಗಳನ್ನು ಒದಗಿಸಿ ಅವುಗಳನ್ನು ಸಬಲಗೊಳಿಸಬೇಕು. ಆಗ ಅವುಗಳಿಗೆ ಎಲ್ಲಾ ದೇಶಗಳಲ್ಲೂ ಈ ಮಹಾಮಾರಿಯನ್ನು ನಿರ್ವಹಿಸುವುದಕ್ಕೆ ಬೇಕಾದ ಎಲ್ಲಾ ಅಗತ್ಯಗಳು ಲಭ್ಯವಿರುವಂತೆ ವ್ಯವಸ್ಥೆಮಾಡಲು ಸಾಧ್ಯವಾಗುತ್ತದೆ. ಇದೊಂದು ತೀರಾ ಅಸಮವಾದ ಜಾಗತಿಕ ಆರ್ಥಿಕತೆ. ಸಂಪನ್ಮೂಲಗಳ ಜಾಗತಿಕ ಮಟ್ಟದ ಮರುವಿತರಣೆ ಅನಿವಾರ್ಯ. ಮಾರುಕಟ್ಟೆಯ ಮೇಲೆ ಯಾವುದೇ ನಿಯಂತ್ರಣವೂ ಇಲ್ಲ. ಹಾಗಾಗಿ ಅವಶ್ಯಕ ಸಂಪನ್ಮೂಲಗಳು ತುಂಬಾ ದುಬಾರಿಯಾಗಿವೆ. ಅವುಗಳನ್ನು ಕೊಳ್ಳುವುದಕ್ಕೆ ಆಗದ ದೇಶಗಳು ದುರಂತದ ಸ್ಥಿತಿಯಲ್ಲಿವೆ.

ಕೆಲವು ದಾನಿಗಳು ನೀಡುವ ಮೊತ್ತ ಜಾಗತಿಕ ಅವಶ್ಯಕತೆಗೆ ಸಾಲುವುದಿಲ್ಲ. ಚೀನಾ ದೇಶ ಸ್ವತಂತ್ರವಾಗಿ ನೀಡುತ್ತಿರುವ ನೆರವಿಗೆ ತೀವ್ರ ಪ್ರತಿಕ್ರಿಯೆ ಬಂದಿದೆ. ಅವು ಇದನ್ನು ನೆಪಮಾಡಿಕೊಂಡು ಮುಂದೆ ಕೆಟ್ಟರೀತಿಯ ಪ್ರಭಾವ ಬೀರಬಹುದು ಅನ್ನುವ ಗಾಬರಿ ಕಾಡುತ್ತಿದೆ. ರಾಷ್ಟ್ರೀಯವಾದೀ ಪರಿಹಾರಗಳಿಗೆ ಪ್ರತೀಕಾರದ ಕ್ರಮಗಳು ಹುಟ್ಟಿಕೊಳ್ಳುತ್ತಿವೆ. ಎಲ್ಲಾ ದೇಶಗಳು ಅವಶ್ಯಕ ವಸ್ತುಗಳು ರಫ್ತಾಗದಂತೆ ನೋಡಿಕೊಳ್ಳುತ್ತಿವೆ. ತಮ್ಮ ಸುತ್ತ ಗೋಡೆ ಕಟ್ಟಿಕೊಳ್ಳುತ್ತಿವೆ. ಅವಶ್ಯಕ ವಸ್ತುಗಳನ್ನು ಹೊರದೇಶಗಳಿಂದ ಪಡೆದುಕೊಳ್ಳುವ ಖಾತ್ರಿ ಇಲ್ಲ. ಎಲ್ಲಾ ಕಡೆಯಲ್ಲೂ ಸೋಂಕು ಹರಡುವುದು ನಿಲ್ಲಬೇಕು. ಅದು ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಉಳಿದುಕೊಂಡರೂ ಜಗತ್ತಿನ ಉಳಿದ ಕಡೆಗೆ ಹರಡುವ ಅಪಾಯ ಇದ್ದೇ ಇರುತ್ತದೆ.

ಇದು ಬ್ರೆಕ್ಸಿಟ್ ಯುಗ. ಅಮೆರಿಕ ಹಾಗೂ ಚೀನಾ ನಡುವೆ ವ್ಯಾಪಾರ ಯುದ್ಧ ನಡೆಯುತ್ತಿದೆ. ಟ್ರಂಪ್ ಡಬ್ಲ್ಯುಎಚ್‌ಒಗೆ ಸಹಾಯಧನ ನೀಡುವುದನ್ನು ನಿಲ್ಲಿಸಿದ್ದಾರೆ. ಇಂತಹ ಜಾಗತಿಕ ಸನ್ನಿವೇಶದಲ್ಲಿ ಕೊರತೆಯಿರುವ ವಸ್ತುಗಳನ್ನು ಕೊಂಡುಕೊಂಡು ಅವುಗಳನ್ನು ಹಂಚುವುದನ್ನು ಊಹಿಸಿಕೊಳ್ಳುವುದಕ್ಕೂ ಕಷ್ಟ. ಜೊತೆಗೆ ಯುರೋಪಿಯನ್ ಯೂನಿಯನ್ನಿನಂತಹ ಸಂಘಟನೆಗಳು ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಒಂದು ಸಾಮೂಹಿಕ ಪ್ರಯತ್ನಕ್ಕೆ ಹೆಣಗುತ್ತಿವೆ.

ಆದರೆ ಒಂದು ಅಂಶ ಮಾತ್ರ ಸ್ಪಷ್ಟವಾಗುತ್ತದೆ. ಜಾಗತಿಕ ತುರ್ತು ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಮಾತ್ರ ಅದನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯ. ಅಧ್ಯಕ್ಷ ವುಡ್‌ರೋ ವಿಲ್ಸನ್ ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಯುರೊಪಿಯನ್ ಒಕ್ಕೂಟದಲ್ಲಿ ಅಮೆರಿಕವನ್ನು ಸೇರಿಸುವುದಕ್ಕೆ ತಯಾರಿರಲಿಲ್ಲ. ಅವನು ಮಿತ್ರ ರಾಷ್ಟ್ರಗಳ ನಡುವೆ ಪೂರೈಕೆಯ ವ್ಯವಸ್ಥೆಯನ್ನು ಸ್ಥಾಪಿಸಲು ಒಪ್ಪಿರಲಿಲ್ಲ. ಅದರಿಂದ ಅಮೇರಿಕನ್ ಸಾರ್ವಭೌಮತ್ವಕ್ಕೆ ಧಕ್ಕೆಯಾಗುತ್ತದೆ ಎಂದು ಭಾವಿಸಿದ್ದ. ಆದರೆ ಅಂದಿನ ಯುದ್ಧದ ಪರಿಸ್ಥಿತಿಯಲ್ಲಿ ಅದು ಅನಿವಾರ್ಯವಾಗಿತ್ತು. ಹಾಗಾಗಿ ಅವನು ಅದಕ್ಕೆ ಒಪ್ಪಿಕೊಳ್ಳಲೇ ಬೇಕಾಯಿತು. ಎಂದಿಗಿಂತ ಹೆಚ್ಚಾಗಿ ಇಂದು ಜಗತ್ತು ಪರಸ್ಪರ ಅವಲಂಬಿತವಾಗಿದೆ. ತೀರಾ ಪರಿಣಾಮಕಾರಿ ಅಂತರರಾಷ್ಟ್ರೀಯ ಆಳ್ವಿಕೆಯಿಂದ ಮಾತ್ರ ಪ್ರತಿಯೊಂದು ದೇಶದ ಸುರಕ್ಷೆ ಸಾಧ್ಯ. ಇದು ಬಹುಪಾಲು ರಾಷ್ಟ್ರೀಯವಾದಿ ನಾಯಕರಿಗೆ ಕೂಡ ಸಧ್ಯದಲ್ಲೇ ಮನವರಿಕೆಯಾಗಬಹುದು.

ಸರಕುಗಳ ಹಾಗೂ ಜನರ ಚಲನೆಗೆ ನಿಯಂತ್ರಣ ಹೇರಲಾಗುತ್ತಿದೆ. ಹೊರಗೆ ನಡೆಯುತ್ತಿದ್ದ ಪೂರೈಕೆಯ ಸರಪಳಿಯನ್ನು ದೇಶದೊಳಕ್ಕೆ ಸೀಮಿತಗೊಳಿಸುವ ಪ್ರಯತ್ನ ನಡೆಯುತ್ತಿದೆ. ಜಾಗತೀಕರಣ ಕೊನೆಗೊಳ್ಳುತ್ತಿದೆ ಅಂತ ಕೆಲವರು ಊಹಿಸುತ್ತಿದ್ದಾರೆ. ಕೊರೋನ ಜಾಗತೀಕರಣವನ್ನು ಕೊನೆಗೊಳಿಸುತ್ತೆ ಅನ್ನುವುದು ಅವರ ಚಿಂತನೆಯಾಗಿದೆ. ಆದರೆ ಹಾಗೇನೂ ಆಗಬೇಕಾಗಿಲ್ಲ. ನಮಗೆ ಇರುವ ಆಯ್ಕೆ ಎರಡೇ ಎರಡು – ಈವರೆಗೂ ನಡೆದುಕೊಂಡು ಬಂದಿದ್ದ ವ್ಯವಸ್ಥೆ ಮುಂದುವರಿಯುವುದು ಅಥವಾ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳುವುದು – ಎಂದೇನೂ ಆಗಬೇಕಾಗಿಲ್ಲ. ಒಂದು ಮಹಾಮಾರಿಯನ್ನು ನಿಯಂತ್ರಿಸುವುದು ಅಥವಾ ಹವಮಾನ ಬದಲಾವಣೆಯನ್ನು ನಿಯಂತ್ರಿಸುವುದು ಇವೆಲ್ಲಾ ಜಾಗತಿಕ ಸಾಮೂಹಿಕ ಕ್ರಿಯೆಯ ಸಮಸ್ಯೆಗಳು. ಇಂತಹ ಜಾಗತಿಕ ಸಮಸ್ಯೆಗಳನ್ನು ಕೇವಲ ವಿಭಿನ್ನ ರೀತಿಯ ಅಂತರರಾಷ್ಟ್ರೀಯ ಸಹಕಾರದಿಂದ ಮಾತ್ರ ಪರಿಹರಿಸಲಿಕ್ಕೆ ಸಾಧ್ಯ. ಇದನ್ನು ಮನವರಿಕೆ ಮಾಡಿಕೊಡುವುದಕ್ಕೆ ಇಂದಿನ ಬಿಕ್ಕಟ್ಟಿನ ಸಂದರ್ಭ ನಮಗೆ ಒಂದು ಅವಕಾಶವನ್ನು ಒದಗಿಸಿದೆ. ಸರಕುಗಳ ವಿತರಣೆಯನ್ನು ಕೇವಲ ಮಾರುಕಟ್ಟೆಗೆ ಒಪ್ಪಿಸಿಬಿಡುವುದು ಸಾವು ಮತ್ತು ಬದುಕಿನ ಸಂಗತಿಯಾಗಿಬಿಡುತ್ತದೆ

# ಅಮೇರಿಕೆಯ ಕಚ್ಚಾ ತೈಲದ ಬೆಲೆಯಲ್ಲಿ ಚಾರಿತ್ರಿಕ ಕುಸಿತ

ವೇಣುಗೋಪಾಲ್ ಟಿ ಎಸ್

ಇತಿಹಾಸದಲ್ಲಿ ಮೊದಲ ಬಾರಿಕೆ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ ಶೂನ್ಯ ಡಾಲರ್‌ಗೆ ಕುಸಿದ ಅಪರೂಪದ ವಿದ್ಯಮಾನವು ಅಮೆರಿಕೆದಲ್ಲಿ ಘಟಿಸಿದೆ.

ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮಿಡಿಯೇಟ್ (ಡಬ್ಲ್ಯುಟಿಐ) ಕಚ್ಚಾ ತೈಲ ಉತ್ಪಾದಕರೇ ಖರೀದಿದಾರರಿಗೆ ಪ್ರತಿ ಬ್ಯಾರಲ್‌ಗೆ 40.32 ಡಾಲರ್ ನೀಡಲು ಮುಂದಾದ ಅಪರೂಪದ ವಿದ್ಯಾಮಾನ ನಡೆದಿದೆ.


ಬೇಡಿಕೆ ಕುಸಿತ ಮತ್ತು ದಾಸ್ತಾನಿಗೆ ಅವಕಾಶ ಇಲ್ಲದ ಕಾರಣಕ್ಕೆ ಖರೀದಿಗೆ ಹಿಂದೇಟು ಹಾಕುವವರಿಗೆ ತೈಲ ಮಾರಾಟಗಾರರೇ ಹಣ ಪಾವತಿಸಲು ಮುಂದಾಗಿದ್ದರು. ಉತ್ಪಾದಕರು ದಾಸ್ತಾನು ವೆಚ್ಚ ಭರಿಸುವುದನ್ನು ತಪ್ಪಿಸಿಕೊಳ್ಳಲು ಈ ಕ್ರಮ ಕೈಗೋಂಡಿದ್ದರು. ಈ ಕಾರಣಕ್ಕೆ ಮೇ ತಿಂಗಳ ವಾಯಿದಾ ವಹಿವಾಟಿನ ಗುತ್ತಿಗೆ ದರವು ಸೋಮವಾರ ಶೂನ್ಯಕ್ಕಿಂತ ಕೆಳಗೆ ಕುಸಿದಿತ್ತು. ಈ ವಿದ್ಯಾಮಾನ  ತಾತ್ಕಾಲಿಕವಾಗಿತ್ತು. ಮಂಗಳವಾರ ವಹಿವಾಟಿನಲ್ಲಿ 1.10ರಷ್ಟು ಚೇತರಿಕೆ ಕಂಡಿತ್ತು.

ಸೋಮವಾರ ತೈಲ ಮಾರುಕಟ್ಟೆಯಲ್ಲಿ ಕಂಡು ಬಂದಿದ್ದ ಆತಂಕವನ್ನು ಮೇ ವಾಯಿದಾ ವಹಿವಾಟು ಉಲ್ಬಣಗೊಳಿಸಿತ್ತು. ವಾಹಿದಾ ವಹಿವಾಟಿನ ಗುತ್ತಿಗೆ ಕೊನೆಗೊಂಡ ಕಾರಣಕ್ಕೆ ಟಬ್ಲ್ಯುಟಿಐ ಬೆಲೆ ಪ್ರಪಾತಕ್ಕೆ ಕುಸಿದಿತ್ತು. ಜೂನ್ ವಾಯಿದಾ ವಹಿವಾಟಿನ ಗುತ್ತಿಗೆಯ ಬೆಲೆಯು ಅನಂತರ ಪ್ರತಿ ಬ್ಯಾರಲ್‌ಗೆ 20 ಡಾಲರ್‌ಗೆ ನಿಗದಿಯಾಯಿತು.

**ಬ್ರೆಂಟ್ ತೈಲ**: ಒಂದೆಡೆ ಅಮೆರಿಕದ ಕಚ್ಚಾ ತೈಲದ ಬೆಲೆ ಪಾತಾಳಕ್ಕೆ ಕುಸಿದಿದ್ದರೆ, ಅಂತರರಾಷ್ಟ್ರೀಯ ಮಾನದಂಡವಾಗಿರುವ ಬ್ರಂಟ್ ತೈಲದ ಬೆಲೆಯೂ ಕಡಿಮೆಯಾಗಿ ಪ್ರತಿ ಬ್ಯಾರಲ್‌ಗೆ 19.85 ಡಾಲರ್‌ಗೆ ಕುಸಿದಿದೆ.

**ಅಸಮತೋಲನ**: ಪೂರೈಕೆಯಲ್ಲಿನ ಹೆಚ್ಚಳ ಮತ್ತು ಬೇಡಿಕೆ ಕುಸಿತದಿಂದ ಮಾರುಕಟ್ಟೆಯಲ್ಲಿ ಅಸಮತೋಲನ ಉಂಟಾಗಿದೆ. ವಿಶ್ವದ ಶೇಕಡ 90ರಷ್ಟು ದೇಶಗಳಲ್ಲಿ ದಿಗ್ಬಂಧನ ಜಾರಿಯಲ್ಲಿದೆ.

ಭವಿಷ್ಯದ ನಿರ್ದಿಷ್ಟ ಪೂರ್ವನಿರ್ಧಾರಿತ ಬೆಲೆ ಸರಕು ಅಥವಾ ಉತ್ಪನ್ನ ಖರೀದಿಸಲು ನಿರ್ದಿಷ್ಟ ಸರಕಿನ ಪೂರೈಕೆದಾರ ಹಾಗೂ ಖರೀದಿದಾರರು ಒಪ್ಪಂದ ಮಾಡಿಕೊಂಡಿರುವುದಕ್ಕೆ ವಾಯಿದಾ ಗುತ್ತಿಗೆ ಅಥವಾ ವಹಿವಾಟು ಎನ್ನುತ್ತಾರೆ. ವಾಯಿದಾ ಗುತ್ತಿಗೆಯು, ವಾಯಿದ ವಿನಿಮಯ ಕೇಂದ್ರಗಳಲ್ಲಿನ ವಹಿವಾಟಿನ ಗುಣಮಟ್ಟ ಮತ್ತು ಪ್ರಮಾಣದ ಮಾನದಂಡವಾಗಿರುತ್ತದೆ.




ಇಂದು ಈ ಸುದ್ದಿಯನ್ನು ನೋಡಿದ ತಕ್ಷಣ ನನಗೆ ಸ್ಪಷ್ಟ ಮಾಡಿಕೊಳ್ಳೊದಕ್ಕೆ ಅಂತ ಒಂದಿಷ್ಟು ಟಿಪ್ಪಣಿ ಮಾಡಿಕೊಂಡೆ. ಅದು ಅಸ್ಪಷ್ಟವಾಗಿರಬಹುದು. ಫ್ಯುಷರ್ ಡೆರಿವೇಟಿವ್ ಇವೆಲ್ಲಾ ಸ್ವಲ್ಪ ತಾಂತ್ರಿಕ ವಿಷಯಗಳು. ಇರಲಿ, ತಕ್ಷಣಕ್ಕೆ ತೋಚಿದ್ದು ಇಲ್ಲಿದೆ.

ಅಮೇರಿಕೆಯ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರಲ್‌ಗೆ ಶೂನ್ಯ ಡಾಲರ್‌ಗೆ ಕುಸಿದಿದೆ. ಇದು ಹಿಂದೆಂದೂ ಹೀಗೆ ಆಗಿರಲಿಲ್ಲ. ಇದು ಇಂದಿನ ತುಂಬಾ ದೊಡ್ಡ ಸುದ್ಧಿ. ಕೊವಿಡ್–19ರ ಪರಿಣಾಮ. ಯಾರೂ ಮನೆಯ ಹೊರಗೆ ಹೋಗುತ್ತಿಲ್ಲ. ವಾಹನಗಳನ್ನು ಬಳಸುತ್ತಿಲ್ಲ. ಫ್ಯಾಕ್ಟರಿಗಳು ನಿಂತಿವೆ. ಸ್ವಾಭಾವಿಕವಾಗಿಯೇ ತೈಲದ ಬಳಕೆ ನಿಂತಿದೆ. ಅಥವಾ ತುಂಬಾ ಕಮ್ಮಿಯಾಗಿದೆ. ಹಾಗಾಗಿ ತೈಲಕ್ಕೆ ಬೇಡಿಕೆ ಇಲ್ಲ. ಆದರೆ ಅದರ ಪೂರೈಕೆ ಕಡಿಮೆಯಾಗಿಲ್ಲ. ಜೊತೆಗೆ

ದಾಸ್ತಾನಿಗೆ ಅವಕಾಶವಿಲ್ಲ. ಹಾಗಾಗಿ ಬೆಲೆ ಕುಸಿದಿದೆ. ಎಷ್ಟರ ಮಟ್ಟಿಗೆ ಅಂದರೆ ಅದು ಋಣಾತ್ಮಕವಾಗಿದೆ. ಖರೀದಿಗೆ ಹಿಂದೇಟು ಹಾಕುವವರಿಗೆ ತೈಲ ಮಾರಾಟಗಾರರೇ ಹಣ ಪಾವತಿಸಲು ಮುಂದಾಗಿದ್ದರು. ಇಲ್ಲದಿದ್ದರೆ ಉತ್ಪಾದಕರು ದಾಸ್ತಾನು ವೆಚ್ಚ ಭರಿಸಬೇಕಿತ್ತು. ಈ ಕಾರಣಕ್ಕೆ ಮೇ ತಿಂಗಳ ವಾಯಿದಾ ವಹಿವಾಟಿನ ಗುತ್ತಿಗೆ ದರವು ಸೋಮವಾರ ಶೂನ್ಯಕ್ಕಿಂತ ಕೆಳಗೆ ಕುಸಿದಿತ್ತು. ಈ ವಿದ್ಯಮಾನ ತಾತ್ಕಾಲಿಕವಾಗಿತ್ತು. ಮಂಗಳವಾರ ವಹಿವಾಟಿನಲ್ಲಿ 1.10ರಷ್ಟು ಚೇತರಿಕೆ ಕಂಡಿತ್ತು.

ಅದಕ್ಕೆ ಮುಂಚೆ ಕೆಲವು ಅಂಶಗಳನ್ನು ಸ್ಪಷ್ಟ ಪಡಿಸಿಕೊಳ್ಳೋಣ.

ಮಾರುಕಟ್ಟೆಯಲ್ಲಿ ಎರಡು ರೀತಿಯ ಕಚ್ಚಾತೈಲಗಳಿವೆ. ಒಂದು ಬ್ರೆಂಟ್ ಕಚ್ಚಾತೈಲ. ಮತ್ತೊಂದು ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯಟ್ (ಡಬ್ಲ್ಯುಟಿಐ) ಇದು ಟೆಕ್ಸಾಸ್, ಲೂಸಿಯಾನ ಮತ್ತು ಉತ್ತರ ಡಕೋಟದಲ್ಲಿ ಉತ್ಪಾದಿಸಿದ ತೈಲ. ಎರಡರ ಗುಣದಲ್ಲೂ ವ್ಯತ್ಯಾಸವಿದೆ. ಬ್ರೆಂಟ್ ಕಚ್ಚಾ ತೈಲದಲ್ಲಿ ಸಲ್ಫರ್ ಸ್ವಲ್ಪ ಜಾಸ್ತಿ. ಜೊತೆಗೆ ಅದರ ಜಾಗತಿಕ ಮಾನದಂಡ ಸ್ವಲ್ಪ ಹೆಚ್ಚು. ಅದನ್ನು ಶೇಖರಿಸಿಡುವುದಕ್ಕೆ ಜಾಗ ಸಾಕಷ್ಟಿದೆ. ಹಲವು ಜಾಗಗಳಲ್ಲಿ ವ್ಯವಸ್ಥೆ ಇದೆ. ಒಂದು ಕಡೆ ಜಾಗ ಇಲ್ಲದೇ ಹೋದರೆ ಇನ್ನೊಂದು ಕಡೆಗೆ ಸಾಗಿಸಬಹುದು. ಅಲ್ಲಿ ಹೆಚ್ಚು ಅವಕಾಶಗಳಿವೆ. ಜೊತೆಗೆ ಅದರ ಉತ್ಪಾದನೆ ಸಮುದ್ರದ ಹತ್ತಿರವೇ ನಡೆಯುತ್ತಿದೆ. ಹಾಗಾಗಿ ನೇರವಾಗಿ ಹಡಗಿಗೆ ತುಂಬಿಬಿಡಬಹುದು. ಅದರಿಂದಾಗಿ ಸಾಗಾಣಿಕೆ ವೆಚ್ಚ ಕಡಿಮೆ. ಹಾಗಾಗಿ ಬ್ರೆಂಟ್ ಬೆಲೆ ಡಬ್ಲ್ಯುಟಿಐ ರೀತಿಯಲ್ಲಿ ಕುಸಿಯಲಿಲ್ಲ. ಏಪ್ರಿಲ್ 20ರಂದು ಅದರ ಬೆಲೆ ಶೇಕಡ 9ರಷ್ಟು ಕುಸಿದು ಬ್ಯಾರಲ್‌ಗೆ 35.57ಡಾಲರ್‌ಗೆ ನಿಂತಿದೆ. ಆದರೆ ಡಬ್ಲ್ಯುಟಿಐ ಬೆಲೆ –37.63 ಡಾಲರ್ ಆಗಿದೆ. ಅಂದರೆ ತೈಲದ ಖರೀದಿ ಮಾಡಿದರೆ ಮಾರಾಟಗಾರರು ಕೊಳ್ಳುವವರಿಗೆ ಬ್ಯಾರಲ್ಲಿಗೆ 37.6 ಡಾಲರ್ ಕೊಡಲಿಕ್ಕೆ ತಯಾರಿದ್ದಾರೆ.

ಬ್ರೆಂಟ್ ಬೆಲೆ ಒಪೆಕ್ ರಾಷ್ಟ್ರಗಳು ಬಳಸುವ ಬೆಲೆಯ ಜಾಗತಿಕ ಮಾನದಂಡ. ಡಬ್ಲ್ಯುಟಿಐ ಅಮೇರಿಕೆಯ ತೈಲದ ಬೆಲೆಯ ಮಾನದಂಡ. ಭಾರತ ಮುಖ್ಯವಾಗಿ ಒಪೆಕ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ.

ತೈಲ ವ್ಯವಹಾರ ಸ್ವಲ್ಪ ಬೇರೆ ತರಹ ನಡೆಯುತ್ತದೆ. ನೀವು ಮುಂದೆ ಕೊಳ್ಳುತ್ತೀರಿ ಅಂತ ಈಗ ಒಪ್ಪಂದ ಮಾಡಿಕೊಳ್ಳುತ್ತೀರಿ. ಫ್ಯೂಚರ್ಸ್ ಕಾಂಟ್ರಾಕ್ಟ್ ಅಂತ ಕರೆಯುತ್ತಾರೆ. ಅದರ ಅವಧಿ ಒಂದು ತಿಂಗಳು ಇರುತ್ತದೆ. ಅಂದರೆ ಮುಂದಿನ ತಿಂಗಳು ಕೊಂಡುಕೊಳ್ಳುತ್ತೇನೆ ಅಂತ ಈ ತಿಂಗಳು ಒಪ್ಪಂದ ಮಾಡಿಕೊಳ್ಳುತ್ತೀರಿ. ವಾಯಿದಾ ಗುತ್ತಿಗೆ ಅಥವಾ ವಹಿವಾಟು ಎನ್ನುತ್ತಾರೆ. ಅಂದರೆ ವ್ಯಾಪಾರಿಗಳು ಮೇ ಫ್ಯೂಚರ್, ಜೂನ್ ಫ್ಯೂಚರ್ ಹೀಗೆ ಮಾರುತ್ತಾರೆ. WTI ವ್ಯವಹಾರ ನ್ಯೂಯಾರ್ಕ್ ಮರ್ಕೆಂಟೈಲ್ ಎಕ್ಸ್‌ಚೇಂಜಿನಲ್ಲಿ ನಡೆಯುತ್ತದೆ. ಅದು 1000 ಬ್ಯಾರಲ್ಲಿಗೆ ಇಷ್ಟು ಅಂತ ನಿರ್ಧರಿತವಾಗಿರುತ್ತದೆ. ನೀವು ಈಗ ಎಣ್ಣೆ ಕೊಳ್ಳುತ್ತಿಲ್ಲ. ಆದರೆ ನಿಮ್ಮ ಬದಲು ಬೇರೆ ಯಾರೋ ಸಂಗ್ರಹಿಸಿ ಇಡಬೇಕು. ಅಂದು ನಿಮಗೆ ನಿರ್ಧಾರಿತ ದರದಲ್ಲಿ ಮಾರಾಟಗಾರ ಕಚ್ಚಾತೈಲವನ್ನು ಪೂರೈಕೆ ಮಾಡುತ್ತಾನೆ. ನೀವು ಅದನ್ನು ಅಂದು ಕೊಳ್ಳಬೇಕು.

ಎಲ್ಲಾ ಸರಕುಗಳ ವ್ಯಾಪಾರದಲ್ಲಿ ಇರುವ ಹಾಗೆ ಇಲ್ಲೂ ಸಟ್ಟಾ ವ್ಯಾಪಾರ ನಡೆಯುತ್ತದೆ. ಹಾಗಾಗಿ ಕೊಳ್ಳುವ ಮತ್ತು ಮಾರುವ ಉದ್ದೇಶದಿಂದಲೇ ಅವರೆಲ್ಲಾ ವ್ಯಾಪಾರ ಮಾಡುವುದಿಲ್ಲ. ಕರಾರು ಮುಗಿಯುವ ದಿನ ಅವರು ತನ್ನ ಕರಾರನ್ನು ಬೇರೆಯವರಿಗೆ ಮಾರಿಬಿಡಬಹುದು. ಇಲ್ಲದೇ ಹೋದರೆ ಕಚ್ಚಾ ತೈಲವನ್ನು ಕೊಳ್ಳಬೇಕಾಗುತ್ತದೆ.

ಈಗ ಸಮಸ್ಯೆ ಬಂದಿರುವುದು ಅಲ್ಲಿ. ಮೇ ವಾಹಿದಾ ವಹಿವಾಟಿನ ಗುತ್ತಿಗೆ ಮಂಗಳವಾರ ಕೊನೆಗೊಳ್ಳುತ್ತಿತ್ತು. ನೀವು ಕೊಳ್ಳುವುದಕ್ಕೆ ತಯಾರಿಲ್ಲ. ಅದನ್ನು ಇಡುವುದಕ್ಕೆ ಜಾಗಕ್ಕೆ ನೀವು ಹಣ ಕೊಡಲು ತಯಾರಿಲ್ಲ. ಆದರೆ ಬೇರೆ ಯಾರು ಅದನ್ನು ಕೊಳ್ಳಲು ತಯಾರಿಲ್ಲ. ಯಾಕೆಂದರೆ ಅದನ್ನು ಇಡುವುದಕ್ಕೆ ಜಾಗ ಇಲ್ಲ. ಕುಷಿಂಗ್‌ನಲ್ಲಿ ಎನರ್ಜಿ ಕಂಪೆನಿಗಳು 76ಮಿಲಿಯನ್ ಬ್ಯಾರಲ್ ಎಣ್ಣೆ ಇಡಲು ಜಾಗ ಮಾಡಿಕೊಂಡಿವೆ. ಎಲ್ಲಾ ಟ್ಯಾಂಕುಗಳು ಬರ್ತಿಯಾಗಿವೆ. ಹಾಗಾಗಿ ಮೇ ಗುತ್ತಿಗೆದಾರರು ಅದನ್ನು ಮಾರಲು ಪ್ರಾರಂಭಿಸಿದರು. ಅದರಿಂದ ಅದರ ಬೆಲೆ ಕುಸಿದು ಕೊನೆಗೆ ಬೆಲೆ ನೆಗೆಟಿವ್ ಆಗಿದೆ. ಈವತ್ತು ಯಾರಿಗೂ ಬೇಡ. ಆದರೆ ಮುಂದಿನ ತಿಂಗಳು ಕೊಂಡುಕೊಳ್ಳುವುದಕ್ಕೆ ತಯಾರಿದ್ದಾರೆ. ಹಾಗಾಗಿ ಜೂನ್ ತಿಂಗಳ ಬೆಲೆ ಬ್ಯಾರಲ್‌ಗೆ 20 ಡಾಲರ್ ಇದೆ. ಹಾಗಾಗಿ



ಮೇ ತಿಂಗಳ ಆಯಿಲ್ ಕಾಂಟ್ರಾಕ್ಟನ್ನು ಜನ ಮಾರುತ್ತಿದ್ದಾರೆ. ಆದರೆ ಜೂನ್ ತಿಂಗಳ ಕರಾರನ್ನು ಕೊಳ್ಳುತ್ತಿದ್ದಾರೆ.

ಜೂನ್ ತಿಂಗಳ ಫ್ಯೂಚರ್ಸ್ ಬೆಲೆಗಳು ನೆಗೆಟಿವ್ ಆಗಿಲ್ಲದಿರುವುದಕ್ಕೆ ಎರಡು ಕಾರಣಗಳು ಇರಬಹುದು. ಒಂದು ಜೂನ್ ತಿಂಗಳಿನ ವೇಳೆಗೆ ಬೇಡಿಕೆ ಸುಧಾರಿಸಬಹುದು ಅಂತ ವ್ಯಾಪಾರಿಗಳು ಯೋಚಿಸಿರಬಹುದು. ಆ ವೇಳೆಗೆ ಲಾಕ್‌ಡೌನ್ ತೆರವಾಗಿ ಆರ್ಥಿಕ ಚಟುವಟಿಕೆಗಳು ಮತ್ತೆ ಪ್ರಾರಂಭವಾಗಬಹುದು ಎಂದು ಅವರು ಲೆಕ್ಕ ಹಾಕಿರಬಹುದು.


ಎರಡನೆಯದಾಗಿ ಅದನ್ನು ಇಡುವುದಕ್ಕೆ ಜಾಗವು ಆ ವೇಳೆಗೆ ತೆರವಾಗಬಹುದು ಎಂಬ ಲೆಕ್ಕಾಚಾರವೂ ಇರಬಹುದು. ಈಗಾಗಲೇ ಅಮೇರಿಕ ಬೆಲೆ ಕಡಿಮೆಯಾಗಿರುವುದರ ಲಾಭ ಪಡೆದುಕೊಂಡು ಕಚ್ಚಾತೈಲವನ್ನು ಕೊಂಡು ಶೇಖರಿಸಿಡುವುದರ ನಿಟ್ಟಿನಲ್ಲಿ ಯೋಚಿಸುತ್ತದೆ. ಭಾರತದಲ್ಲೂ ಸುಮಾರು 39 ಮಿಲಿಯನ್ ಬ್ಯಾರಲ್ ತೈಲ ಶೇಖರಿಸಿಡುವ ಸಾಮರ್ಥ್ಯ ಇದೆ. ವಿಶಾಖಪಟ್ಟಣ, ಮಂಗಳೂರು, ಉಡುಪಿಯ ಬಳಿಯ ಪಡೂರಿನಲ್ಲಿ ಅಂತಹ ವ್ಯವಸ್ಥೆ ಇದೆ. ನಾವು ಕೂಡ ಕಡಿಮೆ ಬೆಲೆಯ ಅನುಕೂಲ ಪಡೆದುಕೊಂಡು ಅದನ್ನು ಶೇಖರಿಸಿಟ್ಟುಕೊಳ್ಳಬಹುದು.

ಹೀಗೆ ವ್ಯಾಪಾರದಲ್ಲಿ ತೊಡಗಿಕೊಂಡವರಲ್ಲಿ ನಿಜವಾಗಿ ಕಚ್ಚಾ ತೈಲವನ್ನು ಕೊಳ್ಳದೆ ಇರುವಂತಹ ಕೇವಲ ಹಣಕಾಸಿನ ಕಾರಣಕ್ಕೆ ವ್ಯವಹಾರ ಮಾಡುವ ಜನರು ಇದ್ದಾರೆ. ನಿಜವಾಗಿ ಕಚ್ಚಾ ತೈಲವನ್ನು ಕೊಳ್ಳುವ ಮಂದಿಯೂ ಇದ್ದಾರೆ. ಒಂದಂತೂ ನಿಜ. ಕಚ್ಚಾ ತೈಲದ ಬೆಲೆ ನೆಲಕಚ್ಚಿದೆ. ಇದಕ್ಕೆ ಕೇವಲ ತಾಂತ್ರಿಕ ಕಾರಣಗಳು ಮಾತ್ರ ಕಾರಣವಲ್ಲ. ಜೊತೆಗೆ ತುಂಬಾ ಮುಖ್ಯವಾಗಿ ಕಚ್ಚಾ ತೈಲದ ಉತ್ಪಾದಕ ದೇಶಗಳ ನಡುವೆ ಇರುವ ಸ್ಪರ್ಧೆ, ರಾಜಕೀಯ ಲೆಕ್ಕಾಚಾರಗಳು ಇವೆಲ್ಲಾ ಹಲವು ವರ್ಷಗಳಿಂದ ನಡೆಯುತ್ತಲೇ ಇವೆ. ಸೌದಿ ಅರೇಬಿಯ ಹಾಗೂ ರಷ್ಯಾ ನಡುವಿನ ತೈಲ ಸಮರ ಗೊತ್ತಿರುವ ವಿಷಯ. ಇದು ಅರ್ಥಮಾಡಿಕೊಳ್ಳುವುದಕ್ಕೆ ಮತ್ತೊಂದು ದೊಡ್ಡ ವಿಷಯ.

ಒಂದು ನೆನಪಿಟ್ಟುಕೊಳ್ಳಿ, ಕಚ್ಚಾ ತೈಲದ ಬೆಲೆ ಕಡಿಮೆಯಾದರೆ ನಾವು ನೀವು ಕೊಳ್ಳುವ ಪೆಟ್ರೋಲ್ ಬೆಲೆ ಕಡಿಮೆಯಾಗುವುದಿಲ್ಲ. ಅದರ ಲಾಭವನ್ನು ಸರ್ಕಾರ ಜನರಿಗೆ ವರ್ಗಾಯಿಸುವುದಿಲ್ಲ. ಬದಲಾಗಿ ತನಗೆ ವರಮಾನವೆಂದು ನೋಡುತ್ತದೆ. ನಾವು ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಅದನ್ನು ನೋಡಿದ್ದೇವೆ. ಆದರೆ ಬೆಲೆ ಹೆಚ್ಚಾದಾಗ ಕೆಲವೇ ಕ್ಷಣಗಳಲ್ಲಿ ಗ್ರಾಹಕರ ಬೆಲೆ ಹೆಚ್ಚಾಗಿದ್ದನ್ನು ಗಮನಿಸಿದ್ದೇವೆ. ಅದರ ಮೇಲೆ ಸರ್ ಚಾರ್ಜನ್ನು ಹಾಕಿದ್ದೇವೆ. ಅದನ್ನು ಕಂದಾಯದ ಮೂಲವಾಗಿಯಷ್ಟೇ ನೋಡದೆ, ನಿಜವಾಗಿ ಆರ್ಥಿಕ ಕುಸಿತ ಇದ್ದಾಗ ಅದನ್ನು ಆರ್ಥಿಕತೆಗೆ ವರ್ಗಾಯಿಸಿ ಅದನ್ನು ಹೆಚ್ಚು ಪುನಚ್ಚೇತನಗೊಳಿಸುವ ನಿಟ್ಟಿನಲ್ಲಿ ಯೋಚಿಸುವುದು ಒಳ್ಳೆಯ ಕ್ರಮವಾಗಬಹುದು.

# ನಾವು ನಿಜವಾಗಿ ಅಂದುಕೊಂಡಷ್ಟು ಸಂಭಾವಿತರಾ?

ವೇಣುಗೋಪಾಲ್ ಟಿ ಎಸ್




ಈ ಜಗತ್ತಿನಲ್ಲಿ ರಾಜಕಾರಣಿಗಳು ಸರಿ ಇಲ್ಲ. ಅಧಿಕಾರಿಗಳು ಭ್ರಷ್ಟರು. ಇತ್ಯಾದಿ, ಇತ್ಯಾದಿ. ಇವು ನಾವೆಲ್ಲಾ ಒಪ್ಪಿಕೊಂಡಿರುವ ಸತ್ಯ. ಈ ಭ್ರಷ್ಟರ ಜಗತ್ತಿನಲ್ಲಿ ನಾನು ಮಾತ್ರ ಒಳ್ಳೆಯವನು. ನೈತಿಕತೆಯನ್ನು ತುಂಬಾ ಜತನವಾಗಿ ಕಾಪಾಡಿಕೊಂಡು ಬಂದಿದ್ದೇನೆ. ಇದು ನನ್ನ ಅಚಲವಾದ ನಂಬಿಕೆ. ನನ್ನಂತೆ ಎಲ್ಲರ ನಂಬಿಕೆಯೂ. ನಾವು ಭ್ರಷ್ಟ ಅಂತ ಕರೆಯುವ ರಾಜಕಾರಣಿಯನ್ನೇ ಕೇಳಿನೋಡಿ. ಅವನು ತನ್ನನ್ನು ಶುದ್ಧ ಅಂತಲೇ ಅಂದುಕೊಂಡಿರುತ್ತಾನೆ. ಅಷ್ಟೇ ಅಲ್ಲ, ರಾಜಕಾರಣಿಯನ್ನು ಮಾತ್ರವಲ್ಲ, ಜನ ನನ್ನನ್ನೂ ಕೂಡ 'ಇವನು ಸಂಭಾವಿತ' ಅಂತ ಯಾವಾಗಲೂ ಭಾವಿಸಿರಲಿಕ್ಕಿಲ್ಲ. ನಾನು ಜನ ನನ್ನನ್ನು ಭಾವಿಸಬೇಕು ಅಂದುಕೊಂಡಿರುವುದಕ್ಕೂ ಅವರು ನನ್ನನ್ನು ಗ್ರಹಿಸಿಕೊಂಡಿರುವುದಕ್ಕೂ ನಡುವೆ ಅಂತರವಿದೆ. ಅದು ಹೆಚ್ಚಿರಬಹುದು ಅಥವಾ ಕಡಿಮೆ ಇರಬಹುದು.

ಬದುಕಿಡೀ ನಾವು ಒಳ್ಳೆಯವರಾಗಿ ಕಾಣಿಸಿಕೊಳ್ಳುವುದಕ್ಕೆ ಹೆಣಗುತ್ತಿರುತ್ತೇವೆ. ನಾವು ಮನುಷ್ಯರಾಗಿ ಪರಿಪೂರ್ಣರು, ಪ್ರತಿಕ್ಷಣವೂ ನೈತಿಕತೆಯನ್ನು ಕಾಪಾಡಿಕೊಂಡು ಬಂದಿದ್ದೇವೆ ಅಂತ ಭಾವಿಸಿಕೊಂಡಿರುತ್ತೇವೆ. ಇದು ಕೇವಲ ಭ್ರಮೆ. ನಾವೆಲ್ಲಾ ಯಾವುದೋ ಗಳಿಗೆಯಲ್ಲಿ ನಮಗೆ ಗೊತ್ತಿಲ್ಲದೇ ನೈತಿಕತೆಯ ಗಡಿಯನ್ನು ದಾಟಿರುತ್ತೇವೆ. ಬೇಕಾದವರಿಗೆ ನೆರವಾಗುತ್ತಲೋ, ನಮ್ಮ ನಿಲುವನ್ನು ಬೇರೆಯವರ ಮೇಲೆ ಹೇರುತ್ತಲೋ ನೈತಿಕತೆಯ ಎಲ್ಲೆಯನ್ನು ಮೀರಿಬಿಟ್ಟಿರುತ್ತೇವೆ. ಆದರೂ ನನ್ನ ಮಟ್ಟಿಗೆ ನಾನು ಒಳ್ಳೆಯವನೇ, ಪರಮ ಸಂಭಾವಿತ! ಆದರೆ ಮೂರನೆಯವರಿಗೆ ನಾನು ನೈತಿಕತೆಯನ್ನು ಉಲ್ಲಂಘಿಸಿರುವುದು ಕಾಣುತ್ತದೆ. ಇದು ನನ್ನ ವಿಷಯದಲ್ಲಿ ಮಾತ್ರವಲ್ಲ ನೈತಿಕವಾಗಿ ಪರಿಪೂರ್ಣ ಆಗಿರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ನಮ್ಮೆಲ್ಲರ ನೈತಿಕತೆಗೂ ಮಿತಿ ಇರುತ್ತದೆ. ಈ ಬಗ್ಗೆ ಅಧ್ಯಯನ ಮಾಡಿರುವ ಪ್ರೊಫೆಸರ್ ಡಾಲಿ ಚಗ್ ಇದನ್ನು ಬೌಂಡೆಡ್ ನೈತಿಕತೆ ಅಥವಾ ಸೀಮಿತ ನೈತಿಕತೆ ಅಂತ ಕರೆಯುತ್ತಾರೆ.

ಇದು ಅರ್ಥಶಾಸ್ತ್ರದಿಂದ ತೆಗೆದುಕೊಂಡ ಪರಿಕಲ್ಪನೆ. ಸಾಮಾನ್ಯವಾಗಿ ಅರ್ಥಶಾಸ್ತ್ರ ಮನುಷ್ಯನನ್ನು ವಿವೇಚನಾಶೀಲ ಅಂತಲೇ ಭಾವಿಸುತ್ತದೆ. ಅದರ ಪ್ರಕಾರ ಮನುಷ್ಯ ತನ್ನ ಯಾವುದೇ ಆಯ್ಕೆಯ ಮೊದಲು, ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿ, ಅದನ್ನು ವಿವೇಚನೆಯಿಂದ ಪರಿಶೀಲಿಸಿ, ತನಗೆ ಗರಿಷ್ಠ ಅನುಕೂಲ ತಂದುಕೊಡುವ, ಸಂತೋಷಕೊಡುವ ನಿರ್ಧಾರಗಳನ್ನೇ ತೆಗೆದುಕೊಳ್ಳುತ್ತಾನೆ. ಇದು ಎಲ್ಲಾ ಅರ್ಥಶಾಸ್ತ್ರ ಸಿದ್ಧಾಂತಗಳ ಹಿಂದಿರುವ ನಂಬಿಕೆ. ಈ ನಂಬಿಕೆಯನ್ನು ಮೊದಲಿಗೆ ಹರ್ಬರ್ಟ್ ಸಿಮನ್ ಪ್ರಶ್ನಿಸಿದ. ಮನುಷ್ಯರು ವಿವೇಚನಾಶೀಲರು ನಿಜ. ಆದರೆ ಅವರ ವಿವೇಚನಾಶಕ್ತಿಗೂ ಒಂದು ಮಿತಿ ಇದೆ. ಅವರು ತಮ್ಮ ಆಯ್ಕೆಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಯನ್ನು ಸಂಗ್ರಹಿಸುವುದಿಲ್ಲ, ಹಾಗೆ ಸಂಗ್ರಹಿಸುವುದಕ್ಕೆ ಸಾಧ್ಯವೂ ಇಲ್ಲ. ಹಾಗೇ ಮಾಹಿತಿಯನ್ನು ಸಂಸ್ಕರಿಸುವ ಮನುಷ್ಯನ ಸಾಮರ್ಥ್ಯಕ್ಕೂ ಒಂದು ಮಿತಿ ಇದೆ. ಹಾಗಾಗಿ ಅವರ ನಿರ್ಧಾರಗಳೂ ತಪ್ಪಾಗುವ ಸಾಧ್ಯತೆ ಇದೆ, ತಪ್ಪಾಗುತ್ತಿರುತ್ತವೆ. ಅಷ್ಟೇ ಅಲ್ಲ, ಅವರಿಗೆ ನಿಜವಾಗಿ ಸಂತೋಷ ಸಿಗುವುದು ಯಾವುದರಿಂದ ಅನ್ನುವುದೂ ತಿಳಿದಿರುವುದಿಲ್ಲ. ಸೀಮನ್ ಇದನ್ನು ಬೌಂಡೆಡ್ ರ್‍ಯಾಷನಾಲಿಟಿ ಅಥವಾ ಸೀಮಿತ ವಿವೇಚನೆ ಅಂತ ಕರೆದ. ಇದು ಮುಂದೆ ಮನುಷ್ಯನ ವರ್ತನೆಯನ್ನು ಅರ್ಥಶಾಸ್ತ್ರದ ವ್ಯಾಪ್ತಿಗೆ ತರುವುದಕ್ಕೆ ಕಾರಣವಾಯಿತು. ಅವನಿಗೆ ನೋಬೆಲ್ ಪ್ರಶಸ್ತಿಯೂ ಬಂದಿತು. ವರ್ತನ ಅರ್ಥಶಾಸ್ತ್ರ ಎಂಬ ಒಂದು ಹೊಸ ಶಾಖೆಯೇ ಹುಟ್ಟಿಕೊಂಡಿತು. ಈ ಸೀಮಿತ ವಿವೇಚನೆಯ ಪರಿಕಲ್ಪನೆಯನ್ನೇ ಕೆಲವರು ಮನುಷ್ಯರ ನೈತಕತೆಗೂ ಅನ್ವಯಿಸಿ 'ಸೀಮಿತ ನೈತಿಕತೆ'ಯ ಪರಿಕಲ್ಪನೆಯನ್ನು ರೂಪಿಸಿದ್ದಾರೆ.

ನಾವು ಒಳ್ಳೆಯವರು, ಯಾವಾಗಲೂ ನೈತಿಕತೆಯನ್ನು ಮೀರುವುದಿಲ್ಲ. ನಮಗೆ ಯಾವುದೇ ಪಕ್ಷಪಾತ ಧೋರಣೆಯೂ ಇಲ್ಲ. ಎಲ್ಲಾ ಸಂದರ್ಭಗಳಲ್ಲೂ ನಾವು ಒಳ್ಳೆಯವರಾಗೇ ಇರುತ್ತೇವೆ. ಹಾಗಂತ ಜನ ನಮ್ಮನ್ನು ನಂಬಬೇಕು ಅಂತ ನಾವು ಬಯಸುತ್ತೇವೆ. ಆದರೆ ಪುರಾವೆಗಳು ಹೇಳುವ ಕಥೆಯೇ ಬೇರೆ. ನಾವೆಲ್ಲಾ ಒಂದಲ್ಲ ಒಂದು ಸಮಯದಲ್ಲಿ ಯಾವ್ಯಾವುದೋ ಅಂಶಗಳಿಂದ ಪ್ರಭಾವಿತರಾಗುತ್ತಿರುತ್ತೇವೆ. ಡಾಕ್ಟರುಗಳು, ನ್ಯಾಯಾಧೀಶರು, ಎಲ್ಲರೂ ತಮ್ಮನ್ನು ವೃತ್ತಿಪರರು ಅಂತಲೇ ಹೇಳಿಕೊಳ್ಳುತ್ತಾರೆ. ಆದರೆ ಅವರ ನಿರ್ಧಾರಗಳು ಕೂಡ ಅವರಿಗೇ ಗೊತ್ತಿಲ್ಲದೆ ಹಲವಾರು ಅಂಶಗಳಿಂದ ಪ್ರಭಾವಿತವಾಗಿರುತ್ತವೆ. ನಮ್ಮೆಲ್ಲರದ್ದೂ ಒಂದು ಸೀಮಿತವಾದ ನೈತಿಕತೆ.

ಡಾಲಿ ಚಗ್ ಒಂದು ಪ್ರಯೋಗ ಮಾಡಿದರು. ಅಮೇರಿಕೆಯ ಹಲವು ವಿಶ್ವವಿದ್ಯಾನಿಲಯಗಳ ಹಲವು ವಿಭಾಗಗಳನ್ನು ಮತ್ತು ಅವುಗಳಲ್ಲಿ

ಕೆಲವು ಪ್ರೊಫೆಸರುಗಳನ್ನು ಯಾದೃಚ್ಛಿಕವಾಗಿ ಆಯ್ಕೆಮಾಡಿಕೊಂಡರು. ಅವರನ್ನು ಭೇಟಿಮಾಡುವುದಕ್ಕೆ ಅವಕಾಶ ಕೋರಿ ಇ–ಮೇಲುಗಳನ್ನು ಕಳುಹಿಸಿದರು. ಆದರೆ ಈ ಪತ್ರಗಳನ್ನು ಬೇರೆ ಬೇರೆ ಗುಂಪಿಗೆ ಸೇರಿದವರ ಹೆಸರಿನಲ್ಲಿ ಕಳುಹಿಸಿದರು. ಅದಕ್ಕೆ ಪುರುಷರು ಅವರಲ್ಲಿ ಬಿಳಿಯರು ಮತ್ತು ಕರಿಯರು, ಮಹಿಳೆಯರು ಮತ್ತೆ ಅವರಲ್ಲಿ ಬಿಳಿಯರು ಮತ್ತು ಕರಿಯರು, ಹಾಗೆಯೇ ಭಾರತೀಯರು ಇತ್ಯಾದಿ ಹಲವು ಗುಂಪುಗಳಿಗೆ ಸೇರಿದ ಹೆಸರುಗಳನ್ನು ಆಯ್ಕೆ ಮಾಡಿಕೊಂಡು ಅವರ ಹೆಸರಲ್ಲಿ ಇಮೇಲ್‌ಗಳನ್ನು ಕಳುಹಿಸಿದರು. ಬಿಳಿಯ ಪುರುಷನ ಹೆಸರಿನಲ್ಲಿ ಹೋಗಿದ್ದ ಪತ್ರಗಳಿಗೆ ಶೇಕಡ 90ರಷ್ಟು ಪ್ರೋತ್ಸಾಹಕರ ಪ್ರತಿಕ್ರಿಯೆಗಳು ಬಂದವು!

ಜಾತಿಯನ್ನು, ಧರ್ಮವನ್ನು ಅಥವಾ ಲಿಂಗವನ್ನು ಆಧರಿಸಿರುವ ಕೆಲವು ಪೂರ್ವಗ್ರಹಗಳು ನಮಗೆ ಗೊತ್ತಿಲ್ಲದೆಯೇ ನಮ್ಮಲ್ಲಿ ಬಂದುಬಿಟ್ಟಿರುತ್ತವೆ. ಅದು ನಮ್ಮ ಅರಿವಿಗೇ ಬಾರದಂತೆ ಕ್ಷಣಮಾತ್ರದಲ್ಲಿ ನಮ್ಮ ನಿರ್ಧಾರಗಳನ್ನು ಪ್ರಭಾವಿಸಿಬಿಡುತ್ತವೆ. ಒಳ್ಳೆಯ ಗುಣಗಳನ್ನು ಕೆಲವು ಜಾತಿಯವರಿಗೆ, ಕೆಲವು ಧರ್ಮದವರಿಗೆ ಮತ್ತು ಕೆಲವು ಕೆಟ್ಟ ಗುಣಗಳನ್ನು ಇನ್ನೆಷ್ಟೋ ಜಾತಿ ಧರ್ಮದವರಿಗೆ ಆರೋಪಿಸುತ್ತೇವೆ. ಇದನ್ನು ನಾವೆಲ್ಲಾ ಒಂದಲ್ಲ ಒಂದು ಸಂದರ್ಭದಲ್ಲಿ ಮಾಡಿಯೇ ಇರುತ್ತೇವೆ. ಹಾಗೆಯೇ ಒಂದು ನಿರ್ಧಾರ ಸರಿಯೋ ತಪ್ಪು ಅಂತ ನಿರ್ಧರಿಸುವಲ್ಲಿಯೂ ನಮ್ಮ ನಂಬಿಕೆಗಳು, ನಾವು ಬೆಂಬಲಿಸುವ ಪಕ್ಷಗಳು, ನಮ್ಮ ಪರಿಸರ ಇಂತಹ ಹಲವಾರು ಅಂಶಗಳು ಮುಖ್ಯವಾಗುತ್ತವೆ.

ಇವೆಲ್ಲಾ ನಮ್ಮ ಮನಸ್ಸಿಗೆ ಮಂಕು ಕವಿಸುತ್ತವೆ. ನಮಗೆ ಗೊತ್ತಿಲ್ಲದೆಯೇ ನಮ್ಮ ಪೂರ್ವಗ್ರಹಗಳ ಪ್ರಚಾರಕ್ಕೆ ನಾವು ನಿಂತಿರುತ್ತೇವೆ. ಬಿಳಿಯರು ಮತ್ತು ಕರಿಯರು ಎಂಬ ವಿಂಗಡಣೆಯನ್ನೇ ತೆಗೆದುಕೊಳ್ಳಿ. ಸಾಮಾನ್ಯವಾಗಿ ಬಿಳಿಯರು ಉತ್ತಮರು ಎಂದು ಭಾವಿಸುವುದು ಅಭ್ಯಾಸ. ಇದನ್ನು ಬಿಳಿಯರು ಮಾತ್ರವಲ್ಲ ಹಲವು ಕರಿಯರೂ ಒಪ್ಪಿಕೊಂಡುಬಿಟ್ಟಿರುತ್ತಾರೆ. ಗಂಡಸರು ಮಾತ್ರ ಗಣಿತದಲ್ಲಿ ಜಾಣರು ಅನ್ನುವುದನ್ನು ಹಲವು ಮಹಿಳೆಯರೂ ಅಪ್ರಜ್ಞಾಪೂರ್ವಕವಾಗಿ ಒಪ್ಪಿಕೊಂಡಿರುತ್ತಾರೆ. ಮೃದಂಗ ನುಡಿಸುವ ಮಹಿಳೆಯನ್ನು ಅಥವಾ ಮಹಿಳಾ ಶಸ್ತ್ರಚಿಕಿತ್ಸಕರನ್ನು ಬೆರಗಿನಿಂದ ನೋಡುತ್ತೇವೆ. ಆ ಜಾತಿಯಿಂದ/ಧರ್ಮದಿಂದ ಬಂದಿದ್ದರೂ ಎಷ್ಟೊಂದು ಸುಸಂಸ್ಕೃತನಾಗಿ ನಡೆದುಕೊಳ್ಳುತ್ತಾನೆ ಎನ್ನುವಂತಹ ಮಾತುಗಳನ್ನು ನಾವು ಹಲವು ಬಾರಿ ಕೇಳಿದ್ದೇವೆ. ಕೆಲವು ಗುಂಪಿನ ಜನಕ್ಕೆ ಕೆಲವು ಸಾಮರ್ಥ್ಯಗಳು ಸಾಧ್ಯ ಅಂತ ಅಂದುಕೊಂಡುಬಿಟ್ಟಿದ್ದೇವೆ. ನಾವು ಒಂದು ಜಾತಿಗೆ ಸುಸಂಸ್ಕೃತತೆಯ ಪಟ್ಟವನ್ನು ಕೊಟ್ಟಿರುತ್ತೇವೆ, ಅಂತೆಯೇ ಇನ್ನೊಂದು ಗುಂಪಿಗೆ ಎಲ್ಲಾ ಅವಗುಣಗಳನ್ನು ಆರೋಪಿಸಿಬಿಡುತ್ತೇವೆ. ಅವರ ವಿರುದ್ಧ ಮಾಡುವ ಆರೋಪಕ್ಕೆ ನಮಗೆ ಯಾವುದೇ ಪುರಾವೆಯೂ ಬೇಕಾಗಿಲ್ಲ. ಅದನ್ನು ಸ್ವಾಭಾವಿಕ ಅನ್ನುವಷ್ಟು ಸಲೀಸಾಗಿ ಒಪ್ಪಿಕೊಳ್ಳುತ್ತೇವೆ. ಒಬ್ಬ ಅಪರಿಚಿತ ಮುಸ್ಲಿಮನನ್ನು ಭಯೋತ್ಪಾದಕ ಅಂತ ಕರೆಯುವುದಕ್ಕೆ ನಮಗೆ ಕಷ್ಟವೇ ಆಗುವುದಿಲ್ಲ.

ಇನ್ನೂ ದುರಂತ ಅಂದರೆ, ನಮಗೆ ನಮ್ಮ ನಂಬಿಕೆಗಳನ್ನು ಪರೀಕ್ಷಿಸಿಕೊಳ್ಳಲು ಅವಕಾಶಗಳು ಇದ್ದಾಗಲೂ ನಾವು ಅದನ್ನು ನೋಡುವ, ಹುಡುಕುವ ಪ್ರಯತ್ನವನ್ನು ಮಾಡುವುದಿಲ್ಲ. ಅದನ್ನು ನಾವು ನೋಡುವುದಿಲ್ಲ ಅಷ್ಟೇ ಅಲ್ಲ ನಮಗೆ ಅದನ್ನು ನೋಡುವ ಮನಸ್ಸೂ ಇಲ್ಲ. ಅಮೇರಿಕೆಯ ಕೆಲವು ಮನಶ್ಶಾಸ್ತ್ರಜ್ಞರು ಒಂದು ಪ್ರಯೋಗ ಮಾಡಿದರು. ಅದರಲ್ಲಿ ಪಾಲ್ಗೊಂಡವರ ಕೆಲವು ತಪ್ಪು ಗ್ರಹಿಕೆಗಳನ್ನು ಮತ್ತೊಮ್ಮೆ ಅವಲೋಕನ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟರು. ಅದಕ್ಕೆ ಬೇಕಾದ ಪೂರಕ ಮಾಹಿತಿಯನ್ನು ಒದಗಿಸಿದರು. ಆದರೆ ಬಹುಪಾಲು ಜನ ಅವನ್ನು ನೋಡುವುದಕ್ಕೂ ತಯಾರಿರಲಿಲ್ಲ. ತಮ್ಮ ನಂಬಿಕೆಗೆ ವ್ಯತಿರಿಕ್ತವಾದ ಮಾಹಿತಿಯನ್ನು ಅವರು ಸ್ವೀಕರಿಸುವುದಕ್ಕೆ ತಯಾರಿರಲಿಲ್ಲ. ಜನರ ಪೂರ್ವಗ್ರಹಗಳನ್ನು ಕಳಚುವುದು, ಅವರ ನಂಬಿಕೆಯ ಚೌಕಟ್ಟಿನಿಂದ ಆಚೆಗೆ ಬಂದು ಜಗತ್ತನ್ನು ನೋಡುವಂತೆ ಮಾಡುವುದು ಅಷ್ಟು ಸರಳವಲ್ಲ.

ಗಂಡಸರಿಗಿಂತ ಹೆಂಗಸರಿಗೆ ಕಡಿಮೆ ಹಲ್ಲು ಇವೆ ಅಂತ ಖ್ಯಾತ ಚಿಂತಕ ಅರಿಸ್ಟಾಟಲ್ ಹೇಳುತ್ತಿದ್ದ. ಅವನಿಗೆ ಇಬ್ಬರು ಹೆಂಡತಿಯರು ಬೇರೆ! ಒಬ್ಬಳ ಹಲ್ಲು ಎಣಿಸಿ ನೋಡಿದ್ದರೂ ಸತ್ಯ ಗೊತ್ತಾಗುತ್ತಿತ್ತು. ಹಾಗೆ ನೋಡುವುದು ಅವನಿಗೆ ಬೇಕಾಗಿರಲಿಲ್ಲ ಅಷ್ಟೆ. ಅದು ಕೇವಲ ನೋಡುವುದಕ್ಕೆ ಸಂಬಂಧಿಸಿದ್ದಲ್ಲ ಅದೊಂದು ಮಾನಸಿಕ ಸ್ಥಿತಿಯೂ ಹೌದು. ತಮ್ಮ ಪಕ್ಷದಲ್ಲೇ ಹೇರಳವಾಗಿ ಭ್ರಷ್ಟರನ್ನು ಇಟ್ಟುಕೊಂಡು ಇನ್ನೊಂದು ಪಕ್ಷದ ಮೇಲೆ ಭ್ರಷ್ಟತೆಯ ಆರೋಪಮಾಡುವುದಕ್ಕೆ ಯಾವ ಸಮಸ್ಯೆಯೂ ಇಲ್ಲ. ನಮ್ಮ ತೀರ್ಮಾನಗಳ ಜಗತ್ತಿನಲ್ಲಿ ನಾವು ಹಾಯಾಗಿ ಇರುತ್ತೇವೆ. ಅದನ್ನು ಯಾರಾದರೂ ಛಾಲೆಂಜ್ ಮಾಡಿದಾಗಷ್ಟೇ ನಾವು ಅದನ್ನು ಮತ್ತೆ ಅವಲೋಕಿಸುವುದು. ಆಗಲೂ ನಾವು ಅದರ ಸಮರ್ಥನೆಗೆ ನಿಲ್ಲಬಹುದು. ಅದನ್ನು ದಾಳಿಯಾಗಿ ಗ್ರಹಿಸುತ್ತಾ ಕೆಲವೊಮ್ಮೆ ಅದರ ವಿರುದ್ಧ ಯುದ್ಧಕ್ಕೇ ಬಿದ್ದುಬಿಡುತ್ತೇವೆ.

ಇದಕ್ಕೆ ಸಂಬಂಧಿಸಿದ ಆದರೆ ಸ್ವಲ್ಪ ಭಿನ್ನವಾದ ಇನ್ನೊಂದು ಪ್ರವೃತ್ತಿಯನ್ನು ಗಮನಿಸಬಹುದು. ಒಂದು ಅಧ್ಯಯನವನ್ನು ಮೂರು ನಾಲ್ಕು ಸಂಶೋಧಕರು ಸೇರಿ ಮಾಡಿರುತ್ತಾರೆ ಅಂದುಕೊಳ್ಳಿ. ಅವರೆಲ್ಲರೂ ಪ್ರತ್ಯೇಕವಾಗಿ ಆ ಅಧ್ಯಯನದಲ್ಲಿ ಅವರ ಪಾಲೆಷ್ಟು ಅಂತ ಕೇಳಿ. ಅವರು ಹೇಳುವುದನ್ನೆಲ್ಲಾ ಒಟ್ಟಿಗೆ ಕೂಡಿದರೆ ಅದು ಶೇಕಡ ನೂರೈವತ್ತೋ, ನೂರ ಅರವತ್ತೋ ಆಗಿಬಿಡಬಹುದು! ಹಾಗೆಯೇ ಒಂದು ಕುಟುಂಬದಲ್ಲಿ ತಮ್ಮ ಪಾಲು ಎಷ್ಟು ಎಂದು ಗಂಡನನ್ನು ಹೆಂಡತಿಯನ್ನು ಪ್ರತ್ಯೇಕವಾಗಿ ಕೇಳಿ ನೋಡಿ. ಅದನ್ನು ಒಟ್ಟಿಗೆ ಕೂಡಿಸಿದರೆ ಶೇಕಡ ನೂರನ್ನು ಮೀರಿಬಿಡುತ್ತದೆ. ನಮ್ಮ ಪಾತ್ರವನ್ನು ಹಿಗ್ಗಿಸಿಕೊಳ್ಳುವ ಪ್ರವೃತ್ತಿ ನಮ್ಮೆಲ್ಲರಲ್ಲೂ ಇದೆ.

ಹೀಗೆ ಇಂತಹ ಹಲವಾರು ಸಮಸ್ಯೆಗಳನ್ನು ತುಂಬಾ ಪ್ರೀತಿಯಿಂದ ಸಾಕಿಕೊಂಡು ಬಂದಿದ್ದೇವೆ. ಇದು ಯಾರದೋ ಕೆಲವರ ಸಮಸ್ಯೆಯಲ್ಲ. ಪ್ರತಿಯೊಬ್ಬರ ಸಮಸ್ಯೆಯೂ ಹೌದು. ಇದು ಮನುಷ್ಯರ ಸ್ವಭಾವ. ಯಾರೋ ಕೆಲವರು ಮಾಡುತ್ತಾರೆ, ಉಳಿದವರು ಮಾಡುವುದಿಲ್ಲ ಅಂತ ಅಲ್ಲ. ನಮ್ಮೆಲ್ಲರದ್ದೂ ಇದೇ ಪ್ರವೃತ್ತಿ.

ಬಹುಶಃ ಪದೇ ಪದೇ ನಮ್ಮ ನಿಲುವುಗಳನ್ನು ಪರೀಕ್ಷೆಗೆ ಒಡ್ಡಿಕೊಳ್ಳುತ್ತಾ, ಲಭ್ಯವಿರುವ ಮಾಹಿತಿಯನ್ನು ಸೂಕ್ತವಾಗಿ ಸಂಸ್ಕರಿಸುತ್ತಾ, ನಮ್ಮ ಪೂರ್ವಗ್ರಹಗಳನ್ನು ಪ್ರಜ್ಞಾಪೂರ್ವಕವಾಗಿ ಸರಿಮಾಡಿಕೊಳ್ಳುತ್ತಾ ಹೋಗುವ ಪ್ರಕ್ರಿಯೆ ನಿರಂತರವಾಗಿ ನಮ್ಮೊಳಗೇ ನಡೆಯದಿದ್ದಲ್ಲಿ ನಮ್ಮ ನೈತಿಕತೆಯ ಸೀಮಿತತೆಯನ್ನು ಕಿರಿದುಗೊಳಿಸುವುದಕ್ಕೆ ಸಾಧ್ಯವಿಲ್ಲ. ನಮ್ಮನ್ನು ನಾವು ಅರ್ಥಮಾಡಿಕೊಂಡಿರುವುದಕ್ಕೂ ಜಗತ್ತು ನಮ್ಮನ್ನು ಪರಿಭಾವಿಸಿರುವುದಕ್ಕೂ ನಡುವಿನ ಕಂದರ ಕಡಿಮೆಯಾಗುವುದಿಲ್ಲ.